ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 10 ಮಾರ್ಚ್ 1-7, 1999 ರೂ. 2.00

ಜನಸಾಮಾನ್ಯರ ಮೇಲೆ ಮತ್ತಷ್ಟು ಹೊರೆ - ಸಿರಿವಂತರಿಗೆ ಇನ್ನಷ್ಟು ಅನುಕೂಲ

'ಸ್ವದೇಶಿ' ಯನ್ನು ಅಂತಿಮವಾಗಿ ಹುಗಿದು ಬಿಟ್ಟಿರುವ ಬಿಜೆಪಿ ಸರ್ಕಾರದ ಬಜೆಟ್

ಬಿಜೆಪಿ ನೇತೃತ್ವದ ಸರಕಾರ ಬಡ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹೊರಿಸಿ ದೊಡ್ಡ ದೇಶೀ-ವಿದೇಶಿ ಬಂಡವಾಳಗಾರರಿಗೆ ಹಾಗೂ ಉಚ್ಛ ವರ್ಗದವರಿಗೆ ಅನುಕೂಲ ಮಾಡಿಕೊಡುವ ಇನ್ನೊಂದು ಬಜೆಟ್‌ನ್ನು ಮುಂದಿಟ್ಟಿದೆ. 1999-2000 ರ ವಾಜಪೇಯಿ ಸರಕಾರದ ಬಜೆಟ್‌ನ ಪ್ರಸ್ತಾಪಗಳು ಹಣದುಬ್ಬರವನ್ನು ಇನ್ನಷ್ಟು ಹೆಚ್ಚಿಸಲಿದ್ದು, ಈ ಹೆಚ್ಚಿದ ಹಣದುಬ್ಬರ ಜನಸಾಮಾನ್ಯರನ್ನೇ ಹೆಚ್ಚು ತಟ್ಟುವಂತೆ ರೂಪಿಸಿರುವ ಬಜೆಟ್ ಇದು. ಜತೆಗೆ ಬಿಜೆಪಿ ಮಂದಿ ಬಹಳಷ್ಟು ಟಾಂಟಾಂ ಮಾಡುವ 'ಸ್ವದೇಶಿ' ಯ ಚಟ್ಟ ಕಟ್ಟಿರುವ ಬಜೆಟ್.

ಆರ್ಥಿಕ ಬಿಕ್ಕಟ್ಟನ್ನು ಉಲ್ಬಣಗೊಳಿಸುವ ಹಾಗೂ ಜನಗಳ ಜೀವನ ಮಟ್ಟವನ್ನು ಇನ್ನಷ್ಟು ಇಳಿಸುವ ಈ ಬಜೆಟ್‌ನ್ನು ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಎಲ್ಲಾ ಜನವಿಭಾಗಗಳಿಗೆ ಕರೆ ನೀಡಿದೆ.

ಪ್ರಸಕ್ತ ವರ್ಷದಲ್ಲಿ ಹಲವು ರೀತಿಗಳಲ್ಲಿ ಬೆಲೆಗಳನ್ನೇರಿಸಿದರೂ, ಆಹಾರ ಧಾನ್ಯಗಳ ಬೆಲೆಗಳನ್ನು ಏರಿಸಿದರೂ, ಸಾರ್ವಜನಿಕ ವಲಯದ ಶೇರುಗಳ ಮಾರಾಟದಿಂದ 7500 ಕೋಟಿ ರೂ. ಕಿತ್ತುಕೊಂಡರೂ ರೆವಿನ್ಯೂ ಕೊರತೆ 12000 ಕೋಟಿ ರೂಗಳ ಅಗಾಧ ಮೊತ್ತ ದಾಟಿದೆ.

ಮುಂದಿನ ವರ್ಷದ ಲೆಕ್ಕಾಚಾರಗಳು ಕೇವಲ ಅಂಕೆ-ಸಂಖ್ಯೆಗಳ ಕಸರತ್ತಿನಂತಿದೆ. ಈ ಬಜೆಟ್ ನಮ್ಮ ಆರ್ಥಿಕಕ್ಕೆ ಅಗತ್ಯವಾದ 'ಹಣಕಾಸು ಸರಿಪಡಿಕೆ' ಮಾಡಿದೆ ಎನ್ನುವ ಹಣಕಾಸು ಮಂತ್ರಿಗಳ ಮಾತು ಈಡೇರಿಲ್ಲ. ರೆವಿನ್ಯೂ ಕೊರತೆ ಮುಂದಿನ ವರ್ಷವೂ ಒಟ್ಟು ರಾಷ್ಟ್ರೀಯ ಉತ್ಪನ್ನ (GDP)ದ 3% ದಷ್ಟು ವಿಪರೀತವಾಗಿರುತ್ತದೆ ಎಂದು ಅಂದಾಜು ಮಾಡಲಾಗಿದೆ.

ಇದು ಒಂದೆಡೆಯಾದರೆ ಕೈಗಾರಿಕಾ ಸ್ಥಗಿತತೆಯನ್ನು ನಿವಾರಿಸಲು ಏನೂ ಕ್ರಮಗಳಿಲ್ಲ, ಕೃಷಿ ವಲಯದಲ್ಲೂ ನಿಧಾನ ಬೆಳವಣಿಗೆಯನ್ನು ತಪ್ಪಿಸಲು ಯಾವುದೇ ಸಕಾರಾತ್ಮಕ ಕ್ರಮಗಳಿಲ್ಲ. ಈ ಎರಡೂ ವಲಯಗಳಲ್ಲಿ ನೀಡಿರುವ ಯೋಜನಾ ಹಣ ಕಳೆದ ಬಜೆಟ್‌ನಲ್ಲಿ ನೀಡಿದ್ದಕ್ಕಿಂತಲೂ ಕಮ್ಮಿ. ಜತೆಗೆ ಬಂಡವಾಳ ಖರ್ಚಿನ ನಿಜ ಮೌಲ್ಯ ಕೂಡ ಕಮ್ಮಿಯಾಗಲಿದೆ. ಅಂದರೆ ಆರ್ಥಿಕ ಹಿಂಜರಿತ ಇನ್ನಷ್ಟು ಹೆಚ್ಚಲಿದೆ.

ಈ ಬಜೆಟ್‌ನ ಬಹುಪಾಲು ಸಂಪನ್ಮೂಲ ಬರುವುದು ಹಲವು ಪರೋಕ್ಷ ತೆರಿಗೆಗಳ ಹೆಚ್ಚಳದಿಂದ, ಡೀಸೆಲ್ ಬೆಲೆಯೇರಿಕೆಯಿಂದ. ಇಂತಹ ಸಂಪನ್ಮೂಲ ಸಂಗ್ರಹಣೆ ಹಣದುಬ್ಬರವನ್ನು ಮತ್ತಷ್ಟು ಹೆಚ್ಚಿಸುವಂತದ್ದು, ಅದರಲ್ಲೂ ಈ ಹೊರೆ ಬಡ ವಿಭಾಗಗಳ ಮೇಲೆಯೇ ಬೀಳುವಂತದ್ದು. ನೇರ ತೆರಿಗೆ ಹೆಚ್ಚಳವೂ ಬಹುಪಾಲು ಕೆಳವರ್ಗದ ತೆರಿಗೆದಾರರಿಂದಲೇ ಬರುವಂತಿದೆ. ವಾಸ್ತವವಾಗಿ ಶ್ರೀವಂತ ಹಾಗೂ ಕಂಪನಿಗಳಿಂದ ಇದು ಹೆಚ್ಚಾಗಿ ಬರುವಂತೆ ಪ್ರಸ್ತಾಪ ರೂಪಿಸಬೇಕಾಗಿತ್ತು. ಬಿಜೆಪಿ ನೇತೃತ್ವದ ಸರಕಾರ ಹಾಗೆ ಮಾಡುವ ಗೋಜಿಗೇ ಹೋಗಿಲ್ಲ.

ತೆರಿಗೆ ಆದಾಯದ ಅಂದಾಜೂ ಕೂಡಾ ನಂಬಲರ್ಹವಲ್ಲ. ಈ ವರ್ಷವೂ ನಿರೀಕ್ಷಿಸಿದ್ದಕಿಂತ ಕಮ್ಮಿ ಆದಾಯ ಸಂಗ್ರಹವಾಗುವ ಸಂಭವವೇ ಜಾಸ್ತಿ. 10000 ಕೋಟಿ ರೂ.ಗಳಷ್ಟು ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟದಿಂದಲೇ ಬರುವುದಾಗಿ ಲೆಕ್ಕ ಹಾಕಲಾಗಿದೆ. ಅಂದರೆ ಈ ವರ್ಷದ ಹಾಗೆ ಮುಂದಿನ ವರ್ಷವೂ ಸಾರ್ವಜನಿಕ ವಲಯದ ಘಟಕಗಳು ತಮ್ಮ ಹೆಚ್ಚುವರಿ ಹಣವನ್ನು ಉತ್ಪಾದನೆಗೆ ಬಳಸುವ ಬದಲು ಪರಸ್ಪರರ ಶೇರುಗಳನ್ನು ಕೊಳ್ಳಲು ಬಳಸುವಂತೆ ಸರಕಾರ ಬಲವಂತ ಮಾಡುವ ಸಂಭವವಿದೆ.

ಸಾರ್ವಜನಿಕ ವಲಯದ ಘಟಕಗಳಲ್ಲಿ ಹೆಚ್ಚು ಲಾಭಕರವಾದ ಘಟಕಗಳ ಶೇರುಗಳನ್ನು ಮಾರಾಟಮಾಡುವ, ದುರ್ಬಲ ಘಟಕಗಳನ್ನು ಮುಚ್ಚುವ, ಅಥವಾ ಕಾರ್ಮಿಕರನ್ನು ರಿಟ್ರೆಂಚ್ ಮಾಡುವ ಹಂಚಿಕೆಯೇ ಈ ಬಾರಿ ಕಾಣುತ್ತಿದೆ. ಈ ಬಾರಿಯ ಇನ್ನೊಂದು ವಿಷಯವೆಂದರೆ ವಿ.ಆರ್.ಎಸ್. ನಲ್ಲಿ ಕಾರ್ಮಿಕರಿಗೆ ನಗದು ಹಣ ಕೊಡುವ ಬದಲು ಸಾರ್ವಜನಿಕ ವಲಯದ ಬಾಂಡುಗಳನ್ನು ನೀಡಲಾಗುವುದಂತೆ. ಇದು ಕುಖ್ಯಾತ 'ಎಕ್ಸಿಟ್ ಪಾಲಿಸಿ'ಯನ್ನು ಹಿಂಬಾಗಿಲಿನಿಂದ ತರುವ ಪ್ರಯತ್ನ.

ಬಂಡವಾಳ ಮಾರುಕಟ್ಟೆಗೆ ಹಲವು ರೀತಿ ಪ್ರೋತ್ಸಾಹ ನೀಡುವ ಪ್ರಸ್ತಾಪಗಳು ಈ ಬಜೆಟ್‌ನಲ್ಲಿವೆ. ಆದರೆ ಬೇಡಿಕೆಯ ಸ್ಥಗಿತತೆ ಇರುವ ಪರಿಸ್ಥಿತಿಯಲ್ಲಿ ಈ ಕ್ರಮಗಳಿಂದ ಹೆಚ್ಚೆಚ್ಚು ಹಣ ಶೇರು ಮಾರುಕಟ್ಟೆಗೆ ಹರಿದು ಹೋಗಬಹುದೇ ವಿನಃ ನಿಜವಾದ ಆರ್ಥಿಕ ವಿಸ್ತರಣೆಗೆ ನೆರವಾಗುವುದಿಲ್ಲ.

ಈ. ಬಜೆಟ್ ಹಣಕಾಸು ಕ್ರಮಗಳ ಮೂಲಕ ಬಂಡವಾಳದ ಕೇಂದ್ರೀಕರಣವನ್ನು ಪ್ರೋತ್ಸಾಹಿಸುವಂತದ್ದು. ವಿದೇಶಿ ಹಾಗೂ ಅನಿವಾಸಿ ಬಂಡವಾಳಕ್ಕೆ ನೀಡಿರುವ ವಿವಿಧ ಪ್ರೋತ್ಸಾಹದ ಕ್ರಮಗಳು ಕೂಡಾ ನಿಜವಾದ ಆರ್ಥಿಕ ಉತ್ಪಾದನೆಗೆ ನೆರವಾಗುವುದಿಲ್ಲ. ಬದಲಿಗೆ ಹೆಚ್ಚೆಚ್ಚು ಭಾರತೀಯ ಆಸ್ತಿಗಳು ವಿದೇಶಿ ಬಂಡವಾಳದ, ಅನಿವಾಸಿ ಭಾರತೀಯರ ಕೈಗೆ ವರ್ಗಾವಣೆಯಾಗುವಂತೆ ಮಾಡುತ್ತದೆ. ಈ ರೀತಿ ಬಿಜೆಪಿ ಬಹಳ ದೊಡ್ಡದಾಗಿ ಹೇಳಿಕೊಳ್ಳುವ 'ಸ್ವದೇಶಿ'ಯ ಶವಪೆಟ್ಟಿಗೆಯ ಕೊನೆಯ ಮೊಳೆ ಇದಾಗಬಹುದು ಎಂದು ಸಿಪಿಐ(ಎಂ) ಟೀಕಿಸಿದೆ.

ಈ ಬಜೆಟ್ ಬಡವರ ಬಗ್ಗೆ ಬಹಳ ಮಾತನಾಡಿದೆ. ಆದರೆ ನಿಜವಾಗಿ ಕೊಟ್ಟಿರುವುದು ಅತ್ಯಲ್ಪ - ಉದಾಹರಣೆಗೆ ಗ್ರಾಮೀಣ ಮೂಲರಚನೆಗೆ ಹಣವನ್ನು ಪಂಚಾಯತುಗಳು ಅಥವಾ ರಾಜ್ಯ ಸರಕಾರಗಳು ತೊಡಗಿಸಬೇಕು. ಅದಕ್ಕೆ ಸಮವಾದ ಹಣವನ್ನಷ್ಟೇ ಕೇಂದ್ರ ಸರ್ಕಾರ ಕೊಡುತ್ತದೆ. ವಾಸ್ತವ ಸ್ಥಿತಿಯೆಂದರೆ ಈ ಹಣ ಬಹಳ ಅಗತ್ಯವಾಗಿ ಬೇಕಾಗಿರುವ ಪ್ರದೇಶಗಳಲ್ಲಿ ಪಂಚಾಯತು ವ್ಯವಸ್ಥೆಯೇ ಇಲ್ಲ. ಅಂದರೆ ಅಂತಹ ರಾಜ್ಯಗಳಿಗೆ ಕೇಂದ್ರದ ಹಣವೂ ಇಲ್ಲ ಎಂದೇ ಅರ್ಥ.

ಒಟ್ಟಿನಲ್ಲಿ ಈ ಬಜೆಟ್‌ನ ದಿಕ್ಕನ್ನು ತಾನು ಸಂಪೂರ್ಣವಾಗಿ ತಿರಸ್ಕರಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಏಕೆಂದರೆ ಈ ಬಜೆಟ್ ನಮ್ಮ ಆರ್ಥಿಕದ ನಿಜವಾದ ಸಮಸ್ಯೆಗಳನ್ನು ಕೈಗೆತ್ತಿಕೊಂಡೇ ಇಲ್ಲ, ಅದರ ಬದಲು ಜನಸಾಮಾನ್ಯರ ಮೇಲೆ ಇನ್ನಷ್ಟು ಭಾರ ಹೇರಿದೆ. ಈ ಮೂಲಕ ಆರ್ಥಿಕ ಹಿಂಜರಿತದ ಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಿದೆ. ಈ ಬಜೆಟ್‌ನಿಂದ ಲಾಭವಾಗಿರುವುದು ಕೇವಲ ಸಿರಿವಂತ ವಿಭಾಗಗಳು ಮತ್ತು ವಿದೇಶಿ ಬಂಡವಾಳಕ್ಕೆ ಮಾತ್ರ ಎಂದು ಅದು ಹೇಳಿದೆ.

ಮಾರ್ಚ್ 6 ರಿಂದ ಕೋಮುವಾದದ ವಿರುದ್ಧ ಸಹಿ ಸಂಗ್ರಹ

ಕೋಮುವಾದದ ವಿರೋಧಿ ಜನತಾ ಸಮಾವೇಶವು 20.2.99 ರಂದು ನವದೆಹಲಿಯಲ್ಲಿ ನಡೆದಿದೆ. ಅದರಲ್ಲಿ ಎಡಪಕ್ಷಗಳ ಜತೆಗೆ ಜನತಾದಳ, ಡಿ.ಎಂ.ಕೆ., ತಮಿಳು ಮಾನಿಲ ಕಾಂಗ್ರೆಸ್, ಆರ್.ಜೆ.ಡಿ., ಸಮಾಜವಾದಿ ಪಕ್ಷ, ಅಸ್ಸಾಂ ಗಣ ಸಂಗ್ರಾಮ್ ಪರಿಷತ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಮಾಜಿ ಪ್ರಧಾನಿಗಳಾದ ಚಂದ್ರಶೇಖರ್, ದೇವೇಗೌಡ, ಐ.ಕೆ.ಗುಜ್ರಾಲ್ ಮತ್ತಿತರ ಗಣ್ಯರು ಭಾಗವಹಿಸಿದ್ದರು. (ವಿವರವಾದ ವರದಿಗೆ ಪುಟ 4 ನೋಡಿ)

ಈ ಸಮಾವೇಶದಲ್ಲಿ ಒಂದು ಘೋಷಣೆಯನ್ನು ಅಂಗೀಕರಿಸಿದ್ದು, ದೇಶವ್ಯಾಪಿ ಒಂದು ಕೋಟಿಗೂ ಮೀರಿ ಸಹಿ ಸಂಗ್ರಹ ಮಾಡಬೇಕೆಂದೂ, ಇದನ್ನು ಒಂದು ಚಳುವಳಿಯಾಗಿ ಕೈಗೆತ್ತಿಕೊಳ್ಳಬೇಕೆಂದೂ ಕರೆ ನೀಡಲಾಗಿದೆ. ಮಾರ್ಚ್ 6 ರಿಂದ ದೇಶಾದ್ಯಂತ ಈ ಚಳುವಳಿ ಆರಂಭವಾಗಲಿದೆ. ಕರ್ನಾಟಕದಲ್ಲಿ ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಪುರೋಗಾಮಿ, ಜಾತ್ಯಾತೀತ ಗಣ್ಯವ್ಯಕ್ತಿಗಳು ಇದನ್ನು ಉದ್ಘಾಟನೆ ಮಾಡುತ್ತಾರೆ. ಫ್ಯಾಕ್ಟರಿ, ಕಾಲೇಜು, ರೈತ, ಕೃಷಿ ಕೂಲಿಕಾರರ ನಡುವೆ ಈ ಸಹಿ ಸಂಗ್ರಹ ಚಳುವಳಿ ನಡೆಸಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ.

ಬೆಂಗಳೂರಿನಲ್ಲಿ ಮಾರ್ಚ್ 6 ರಂದು ಸಂಜೆ 5.00 ಗಂಟೆಗೆ ಮಹಾತ್ಮ ಗಾಂಧಿ ಪ್ರತಿಮೆಯ ಮುಂದೆ ಸಹಿ ಸಂಗ್ರಹದ ಉದ್ಘಾಟನೆ ನಡೆಯಲಿದ್ದು ಬಿಜೆಪಿ, ಕಾಂಗ್ರೆಸ್ ಬಿಟ್ಟು ಉಳಿದ ರಾಜಕೀಯ ಪಕ್ಷಗಳು ಮುಖಂಡರು, ಗಣ್ಯ ವ್ಯಕ್ತಿಗಳು ಇದರಲ್ಲಿ ಭಾಗವಹಿಸಲಿದ್ದಾರೆ.

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆ

ಲೋಕಸಭೆಯಲ್ಲಿ ಅನುಮೋದನೆ, ರಾಜ್ಯಸಭೆಯಲ್ಲಿ?

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಸುಗ್ರೀವಾಜ್ಞೆಗೆ ಲೋಕಸಭೆ 279-250 ಮತಗಳಿಂದ ಅನುಮೋದನೆ ನೀಡಿದೆ. ಬಿಜೆಪಿ ಮಿತ್ರಪಕ್ಷಗಳಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಸದಸ್ಯರು ಗೈರು ಹಾಜರಾದರು, ಇತ್ತೀಚೆಗೆ ತನ್ನ ಬೆಂಬಲ ಹಿಂತೆಗೆದುಕೊಂಡ ಚೌತಾಲರವರ ಪಕ್ಷದ ಸದಸ್ಯರು ವಿರುದ್ಧ ಮತನೀಡಿದರು. ಉಳಿದ ಮಿತ್ರರೆಲ್ಲಾ ಬೆಂಬಲ ನೀಡಿದರು. ಇದರೊಂದಿಗೇ ಅಧಿಕಾರದಾಸೆಗಾಗಿ ಅವರ ಸಮಯಸಾಧಕತನ ತುತ್ತತುದಿಗೇರಿದ್ದನ್ನು, ಅವರ ಆಳ್ವಿಕೆಯ ರಾಜ್ಯಗಳಲ್ಲಿ ಅವರ ವಿಶ್ವಾಸಾರ್ಹತೆ ಪಾತಾಳಕ್ಕಿಳಿದದ್ದನ್ನು ದೇಶ ಕಂಡಿತು.

ಈ ಹಿಂದೆ ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್ಸಿನ ಗುತ್ತೇದಾರಿ ಆಳ್ವಿಕೆಗೆ ರಾಜಕೀಯ ಪರ್ಯಾಯವಾಗಿ ಹಲವು ರಾಜ್ಯಗಳಲ್ಲಿ ಮೂಡಿಬರುತ್ತಿದ್ದ ದಿನಗಳಲ್ಲಿ ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆ ಎಲ್ಲರ ಗಮನ ಸೆಳೆದಿತ್ತು. ಆಗಿನ ಹಲವು ಮುಖ್ಯಮಂತ್ರಿಗಳು ಹಲವು ಸಮ್ಮೇಳನಗಳನ್ನು ನಡೆಸಿ ನಮ್ಮ ಸಂವಿಧಾನದ ಒಕ್ಕೂಟ ತತ್ವದ ಪಾವಿತ್ರ್ಯವನ್ನು, ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡಿ ಕೇಂದ್ರ-ರಾಜ್ಯ ಸಂಬಂಧಗಳನ್ನು ಬಲಪಡಿಸಬೇಕು ಎಂದಿದ್ದರು. ಇವರೆಲ್ಲರ ಒತ್ತಾಯದಿಂದಾಗಿಯೇ ಸರ್ಕಾರಿಯಾ ಆಯೋಗ ನೇಮಕಗೊಂಡದ್ದು. ಈ ಸಮ್ಮೇಳನಗಳಲ್ಲಿ ಪ್ರಮುಖ ಪಾತ್ರವಹಿಸಿದ್ದ ಮುಖ್ಯಮಂತ್ರಿ ಗಳಿಗೆ ಜ್ಯೋತಿಬಸು, ಎನ್.ಟಿ.ರಾಮ ರಾವ್, ಫಾರೂಕ್ ಅಬ್ದುಲ್ಲಾ, ಪ್ರಕಾಶ್ ಸಿಂಗ್ ಬಾದಲ್ ಮತ್ತು ರಾಮಕೃಷ್ಣ ಹೆಗಡೆ.

"ನೋಡಿ, ಇಂದಿನ ರಾಜಕಾರಣದಲ್ಲಿ ಈ ಮುಖಂಡರು ಎಂತಹ ಅವನತಿ ಕಂಡಿದ್ದಾರೆ! ತೆಲುಗುದೇಶಂನ ಸ್ಥಾಪನೆಯ ಒಂದು ಮುಖ್ಯಕಾರಣ ಭಾರತದ ರಾಜಕಾರಣದ ಒಕ್ಕೂಟ ಸ್ವರೂಪವನ್ನು ರಕ್ಷಿಸಿ, ಬಲಪಡಿಸುವುದು. ಆದರೆ ಇಂದು ಚಂದ್ರಬಾಬು ನಾಯ್ಡು ಬಿಹಾರದಲ್ಲಿ 356ನೇ ಕಲಮಿನ ನಗ್ನ ದುರುಪಯೋಗವನ್ನು ಬೆಂಬಲಿಸುತ್ತಾರೆ. ಪ್ರಕಾಶ್ ಸಿಂಗ್ ಬಾದಲ್ ಅಕಾಲಿದಳದ ಎಂ.ಪಿ.ಗಳಿಗೆ ವ್ಹಿಪ್ ಹೊರಡಿಸಿ ತಿಪ್ಪರಲಾಗ ಹಾಕಿದ್ದಾರೆ. ಫಾರುಕ್ ಅಬ್ದುಲ್ಲಾ ಮತ್ತು ರಾಮಕೃಷ್ಣ ಹೆಗಡೆ ಇವರಿಬ್ಬರೂ ತಮ್ಮ ಅಧಿಕಾರ ದಾಹದಿಂದಾಗಿ ಈ ಸರ್ವಾಧಿಕಾರಶಾಹಿ ಕ್ರಮದ ಬೆಂಬಲಕ್ಕೆ ನಿಂತಿರುವಂತೆ ಕಾಣುತ್ತಿದೆ" ಎಂದು ಈ ಬಗ್ಗೆ ಸಂಪಾದಕೀಯ ಟಿಪ್ಪಣಿ ಮಾಡುತ್ತಾ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಹೇಳಿದೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ 356ನೇ ಕಲಮಿನ ದುರುಪಯೋಗವನ್ನು ತಪ್ಪಿಸುವಂತೆ ಅದನ್ನು ತಿದ್ದುಪಡಿ ಮಾಡಲೆಂದು ಅಂತರ-ರಾಜ್ಯ ಮಂಡಳಿ ನೇಮಿಸಿದ ಜ್ಯೋತಿಬಸು ಅಧ್ಯಕ್ಷತೆಯ ಉಪ ಸಮಿತಿಯ ಮುಂದೆ ತಮ್ಮ ವಾದಗಳನ್ನು ಮಂಡಿಸುತ್ತಾ ಈ ಎಲ್ಲಾ ಮಂದಿ ಅದರ ದುರುಪಯೋಗದ ಬಗ್ಗೆ ಬಲವಾದ ವಿರೋಧವನ್ನು ವ್ಯಕ್ತಪಡಿಸಿದ್ದರು. ಈ ಕಲಮನ್ನು ರಾಷ್ಟ್ರೀಯ ಐಕ್ಯತೆಗೆ ಅಪಾಯ ಬಂದಾಗ, ಅಥವಾ ಧರ್ಮನಿರಪೇಕ್ಷತೆ ಇತ್ಯಾದಿ ನಮ್ಮ ಸಂವಿಧಾನದ ಮೂಲ ಭೂತ ಅಂಶಗಳಿಗೆ ಬೆದರಿಕೆ ಬಂದಾಗ ಮಾತ್ರವೇ ಬಳಸುವಂತೆ ತಿದ್ದುಪಡಿ

ಪುಟ 8 ನೋಡಿ

900 ಕೋಟಿ ರೂ.ಗಳ ಭಾರ ಹೊರಿಸುವ ಜನ - ವಿರೋಧಿ ರೈಲ್ವೇ ಬಜೆಟ್

ಸರಕು ಸಾಗಾಣಿಕೆ ದರಗಳನ್ನು ಸಾರಾಸಗಟು ಏರಿಸಿದ ರೈಲ್ವೇ ಬಜೆಟನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಇದು ಎಲ್ಲಾ ಅವಶ್ಯಕ ಸಾಮಗ್ರಿಗಳ ಬೆಲೆಗಳನ್ನು ಹೆಚ್ಚಿಸಲು ನೇರವಾಗಿ ಕಾರಣವಾಗುತ್ತದೆ. ಆಹಾರ ವಸ್ತುಗಳು, ಸಕ್ಕರೆ, ಅಂಚೆ ದರಗಳ ಏರಿಕೆಯ ಬೆನ್ನಲ್ಲೇ ಬಂದಿರುವ ಈ ಬೆಲೆ ಏರಿಕೆ ಜನರ ಮೇಲೆ ಇನ್ನಷ್ಟು ಹೊರೆ ಹೆಚ್ಚಿಸಲಿದೆ.

ಸ್ಲೀಪರ್ ಕ್ಲಾಸ್ ಬೆಲೆಗಳನ್ನು ಶೇಕಡಾ 5 ರಿಂದ 12 ರಷ್ಟು ಏರಿಸಿದ್ದು ಸಾಮಾನ್ಯ ಪ್ರಯಾಣಿಕನ ಮೇಲೆ ದುಷ್ಪರಿಣಾಮ ಬೀರಲಿದೆ. ಸಾಗಾಣಿಕೆ ದರಗಳ ಏರಿಕೆಯಿಂದ 700 ಕೋಟಿ ರೂ. ಆದಾಯ ರೈಲ್ವೆಗೆ ಬಂದರೆ, ಪ್ರಯಾಣಿಕರ ದರಗಳಿಂದ 200 ಕೋಟಿ ರೂ. ಗಳಿಸಲಿದೆ ರೈಲ್ವೆ. ಈ ರೀತಿ 900 ಕೋಟಿ ರೂಗಳಷ್ಟು ಅಧಿಕ ಹೊರೆಯನ್ನು ಜನರ ಮೇಲೆ ಹೇರಿದಂತಾಗಿದೆ. ಇದು ಅನಗತ್ಯ ಯಾಕೆಂದರೆ ಈ ವರ್ಷ ರೈಲ್ವೇ ಇಲಾಖೆ ಸರ್ಕಾರಕ್ಕೆ 1489 ಕೋಟಿ ರೂ. ಕೊಟ್ಟಿತ್ತು - ರೆವಿನ್ಯೂ ಆದಾಯವಾಗಿ, ಇದನ್ನೇ ರೈಲ್ವೇ ಇಲಾಖೆ ಇಟ್ಟುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದರೆ ಪ್ರಯಾಣಿಕರಿಗೆ ಸಾಗಾಣಿಕೆ ದರಗಳನ್ನು ಇಳಿಸಬಹುದಾಗಿತ್ತು.

ರೈಲು ಜಾಲವನ್ನು ವಿಸ್ತರಿಸಲು, ಈಗಿರುವ ಹಳಿಗಳನ್ನು ಇಮ್ಮಡಿ ಮಾಡಲು, ಗೇಜ್ ಬದಲಾವಣೆ ಮತ್ತು ಸುರಕ್ಷಿತತೆಗೆ ಕಾದಿರಿಸಿದ ಹಣ ಏನೇನೂ ಸಾಲದು. ಕಲ್ಕತ್ತ, ಚೆನ್ನೈ ಮತ್ತು ಮುಂಬಯಿಗಳ ಮೆಟ್ರೋಪಾಲಿಟನ್ ಸಾಗಾಣಿಕೆ ಪ್ರಾಜೆಕ್ಟ್‌ಗಳಿಗೆ ತೆಗೆದಿಟ್ಟಿರುವ 300 ಕೋಟಿ ರೂ. ಸಹ ಏನೇನೂ ಸಾಲದು.

ಜನರ ಮೇಲೆ ಹೊರಿಸಿರುವ ಹೊರೆಯನ್ನು ಹಿಂತೆಗೆದುಕೊಳ್ಳಬೇಕು, ರೈಲ್ವೇ ಸರ್ಕಾರಕ್ಕೆ ಪಾವತಿ ಮಾಡುತ್ತಿರುವ ರೆವಿನ್ಯೂ ಹಣವನ್ನು ರೈಲ್ವೇ ಇಲಾಖೆಗೆ ಹಿಂದಿರುಗಿಸಿ, ರೈಲು ಜಾಲವನ್ನು ವಿಸ್ತರಿಸುವ, ಉತ್ತಮ ಪಡಿಸುವ, ಸುರಕ್ಷತತೆ ಹೆಚ್ಚಿಸುವಲ್ಲಿ ಬಳಸಬೇಕು ಎಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಒತ್ತಾಯಿಸಿದೆ.

ಈ ಜನ-ವಿರೋಧಿ ರೈಲ್ವೇ ಬಜೆಟ್ ವಿರುದ್ಧ ಪ್ರತಿಭಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಜನರಿಗೆ ಕರೆ ನೀಡಿದೆ.

ಸೇಲ್‌ಗೆ ಆಸಕ್ತಿ ಬೇಡವೆಂದ ಹಣಕಾಸು ಮಂತ್ರಾಲಯ ಮತ್ತು ಯೋಜನಾ ಆಯೋಗ

ಉದಾರೀಕರಣದ ಆರ್ಥಿಕ ನೀತಿಗಳಿಂದಾಗಿ ಉಕ್ಕು ಉದ್ಯಮವೇ ಬಹಳ ಕಷ್ಟದಲ್ಲಿದೆ. ಭಾರತೀಯ ಉಕ್ಕು ಪ್ರಾಧಿಕಾರ ಅಥವಾ ಸೇಲ್ ಈ ಉದ್ದಿಮೆಯಲ್ಲಿ ಅತ್ಯಂತ ದೊಡ್ಡ ಸಂಸ್ಥೆ. ಈ ಸಂಸ್ಥೆ ತೀವ್ರ ಸಂಕಷ್ಟದಲ್ಲಿದೆ. ಈವರೆಗೆ 890 ಕೋಟಿ ರೂಪಾಯಿಗಳ ಹಾನಿ ಮಾಡಿದೆ. ಈಗ ಪುನಶ್ಚೇತನಗೊಳಿಸುವ ಪ್ರಯತ್ನ ಮಾಡದಿದ್ದರೆ ಅದರ ಕಷ್ಟಗಳು ಇನ್ನೂ ಹೆಚ್ಚಾಗಲಿದೆ. ಇದಕ್ಕಾಗಿ ಸೇಲ್‌ನ ಅಧಿಕಾರಿಗಳು ಪುನರುಜ್ಜೀವನಕ್ಕಾಗಿ ಯೋಜನೆಗಳನ್ನು ರೂಪಿಸಿ ಸರ್ಕಾರದ ಮುಂದಿಟ್ಟಿದ್ದಾರೆ.

ಈ ಯೋಜನೆಗಳ ಪ್ರಕಾರ ಸೇಲ್‌ಗೆ 5059 ಕೋಟಿ ರೂಪಾಯಿಗಳ ನೆರವಿನ ಅವಶ್ಯಕತೆ ಇದೆ. ಸೇಲ್ ಇಸ್ಕೊಗೆ ನೀಡಿದ ಮುಂಗಡದ ಹಣ 2441 ಕೋಟಿ ರೂಪಾಯಿಗಳನ್ನು ಮನ್ನ ಮಾಡುವುದೂ ಇದರಲ್ಲಿ ಸೇರಿದೆ. ಆದರೆ ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯ ಮತ್ತು ಯೋಜನಾ ಆಯೋಗಗಳೆರಡೂ ಈ ಪ್ರಸ್ತಾಪವನ್ನು ವಿರೋಧಿಸಿವೆಯಂತೆ.

ಇವುಗಳ ಪ್ರಕಾರ ಇನ್ನೆರಡು ವರ್ಷಗಳಲ್ಲಿ ಸೇಲ್ ಲಾಭ ಮಾಡುವ ಸ್ಥಿತಿಯಲ್ಲಿರುತ್ತವೆ. ಆದ್ದರಿಂದ ಈಗ ನೆರವು ನೀಡುವುದು ಬೇಡ ಎಂಬುದೇ ಇವುಗಳ ನಿಲುವು. ಇದು ಒಟ್ಟಾರೆ ಉದಾರೀಕರಣದ ಆರ್ಥಿಕ ನೀತಿಗಳಿಗೆ ಅನುಗುಣವಾಗಿಯೇ ಇದೆ. ಯಾಕೆಂದರೆ ಸಾರ್ವಜನಿಕ ಉದ್ದಿಮೆಗಳಿಗೆ ಸರ್ಕಾರಿ ನೆರವು ನೀಡದೆ ಅವುಗಳನ್ನು ಪರೋಕ್ಷವಾಗಿ ಹಿಂಡಿ ಸಹಜವಾಗಿ ಸಾಯುವಂತೆ ಮಾಡಿ ಖಾಸಗೀಕರಿಸುವುದೇ ಉದಾರೀಕರಣದ ಆರ್ಥಿಕ ನೀತಿಯ ತಿರುಳು.

ಸರ್ಕಾರದಿಂದ ಯಾವುದೇ ರೀತಿಯ ನೆರವೂ ಇವುಗಳಿಗೆ ದೊರೆಯದು. ಯಾಕೆಂದರೆ ಕಂದಾಯ ಸಂಗ್ರಹಣೆಯೇ ಕಡಿಮೆಯಾಗಿ ಹಣಕಾಸು ಕೊರತೆ ಅಂದಾಜು ಮೀರಿ ಬೆಳೆದು ನಿಂತಿದೆ. ಈ ಕೊರತೆಯನ್ನು ಕಡಿಮೆ ಮಾಡುವಂತೆ ಐ.ಎಂ.ಎಫ್., ವಿಶ್ವ ಬ್ಯಾಂಕ್ ಧಣಿಗಳು ತೀವ್ರ ಒತ್ತಡ ಹೇರುತ್ತಿದ್ದಾರೆ. ಅವರ ಈ ಒತ್ತಡಗಳಿಗೆ ಮಣಿದು ಭಿಕ್ಷಾಪಾತ್ರೆ ಹಿಡಿದು ನಿಲ್ಲುವ ಸರ್ಕಾರ ನಮ್ಮ ದೇಶಕ್ಕೆ ಯಾವುದು ಒಳ್ಳೆಯದೊ ಅದನ್ನು ಮಾಡುತ್ತೇನೆಂದು ಹೇಳುವ ಛಾತಿಯನ್ನು ಹೊಂದಿಲ್ಲ, ಅಲ್ಲವೆ?

ವಿದೇಶೀ ಹೂಡಿಕೆದಾರರ ಹೊಂಚು

ವಿದೇಶೀ ನೇರ ಹೂಡಿಕೆ ಭಾರತ ದೇಶಕ್ಕೆ ಬರಬೇಕು ಆ ಮೂಲಕ ದೇಶದ ಅಭಿವೃದ್ಧಿಗೆ ಹಣಕಾಸು ದೊರೆಯುತ್ತದೆ ಎಂಬುದು ಉದಾರೀಕರಣವಾದಿಗಳ ವಾದ. ಹಾಗೆ ನೋಡಿದರೆ ಹಣಕಾಸು ಸಂಪನ್ಮೂಲದ ಕೊರತೆಯಿರುವ ನಾವು ಉದಾರೀಕರಣ ಮಾಡಿದರೆ ಮಾತ್ರ ವಿದೇಶೀ ನೇರ ಹೂಡಿಕೆ ಬಂದು ಈ ಕೊರತೆಯನ್ನು ಹೋಗಲಾಡಿಸಬಹುದು ಎಂಬುದೇ ಉದಾರೀಕರಣ ಮಾಡಲು ಕಾರಣ.

ಆದರೆ ವಿದೇಶೀ ನೇರ ಹೂಡಿಕೆದಾರರೂ ತಮ್ಮದೇ ಷರತ್ತುಗಳನ್ನು ವಿಧಿಸುತ್ತಿದ್ದಾರೆ. ನಮ್ಮ ದೇಶದ ಬೆಳವಣಿಗೆ ಅವರ ಉದ್ದೇಶವಲ್ಲ. ಬದಲಿಗೆ ನಮ್ಮ ದೌರ್ಬಲ್ಯಗಳನ್ನು ಬಳಸಿಕೊಂಡು ಅದಷ್ಟು ಲಾಭ ಬಾಚಿಕೊಳ್ಳುವುದೇ ಅವರ ಉದ್ದೇಶ. ಈಗ ಅವರ ಒತ್ತಡ ಭಾರತದ ಕಾರ್ಮಿಕ ಕಾಯಿದೆಗಳನ್ನು ಬದಲಾಯಿಸಬೇಕೆಂದು.

ಈ ಕಾಯಿದೆಗಳನ್ನು ಹೇಗೆ ಬದಲಾಯಿಸಬೇಕು? ಹೇಗೆಂದರೆ ವಿದೇಶೀ ಹೂಡಿಕೆದಾರರು ಭಾರತದೊಳಕ್ಕೆ ಬಂದು ಹೂಡಿಕೆ ಮಾಡಿ ಕಾರ್ಮಿಕರನ್ನು ನೇಮಕ ಮಾಡಿಕೊಂಡರೆ ಆ ಉದ್ದಿಮೆ ಲಾಭದಾಯಕವಲ್ಲದೇ ಹೋದಲ್ಲಿ ಚಟುವಟಿಕೆ ನಿಲ್ಲಿಸಿ ತಮ್ಮ ಬಂಡವಾಳವನ್ನು ಹಿಂತೆಗೆದುಕೊಂಡು ಹೋಗುವಂತಿರಬೇಕು. ಇದು ಅವರ ಬೇಡಿಕೆ. ಒತ್ತಾಯ ಹೀಗಾದಾಗ ಕಾರ್ಮಿಕರ ಪರಿಸ್ಥಿತಿ? ಹಾದಿಪಾಲಾಗುವುದೇ ಗತಿ. ಆ ಬಗ್ಗೆ ವಿದೇಶೀ ಹೂಡಿಕೆದಾರರಿಗೆ ಜವಾಬ್ದಾರಿಯಿರಬಾರದು. ಅದು ಭಾರತ ಸರ್ಕಾರದ ತಲೆ ನೋವು.

ಇದಕ್ಕಾಗಿ ಬೇಕಾದಾಗ ನೇಮಕ ಮಾಡಿಕೊಂಡು ಬೇಡವೆಂದಾಗ ಮನೆಗೆ ಕಳುಹಿಸುವ ಅವಕಾಶ ಇರಬೇಕು ಇದೇ ಅವರ ಬೇಡಿಕೆ. ಚೆನ್ನಾಗಿದೆಯಲ್ಲವೆ ಈ ಬೇಡಿಕೆ?

ಸಾಲದ ಹೊರೆಯ ಬಗ್ಗೆ ಚಿಂತೆ


ಯಾರ ಸಾಲದ ಹೊರೆಯ ಬಗ್ಗೆ ಯಾರಿಗೆ ಚಿಂತೆ? ಭಾರತ ಸರ್ಕಾರದ ಸಾಲಗಳು ಏರುತ್ತಿರುವ ಬಗ್ಗೆ ಭಾರತದ ಯೋಜನಾ ಆಯೋಗ ಚಿಂತೆ ವ್ಯಕ್ತಪಡಿಸಿದೆ. ಜನವರಿಯ ವೇಳೆಗೆ ಸರ್ಕಾರದ ಸಾಲಗಳ ಮೊತ್ತ 81453 ಕೋಟಿ ರೂಪಾಯಿಗಳಂತೆ. ಬಜೆಟ್ಟಿನ ಪ್ರಕಾರ ಇದು 79376 ಕೋಟಿ ರೂಪಾಯಿಗಳಷ್ಟಿರಬೇಕಾಗಿತ್ತು. ಆದರೆ ಇದು ತೀವ್ರವಾಗಿ ಹೆಚ್ಚಾಗಿದೆ.

ಇಷ್ಟೆಲ್ಲ ಆಗಿಯೂ ಸಾಮಾಜಿಕ ವಲಯದ ಹಲವು ಯೋಜನೆಗಳಿಗೆ ಘನ ಸರ್ಕಾರ ಕೊಡಲಿಯೇಟು ನೀಡಿದೆ.

ಒಂಭತ್ತನೇ ಪಂಚವಾರ್ಷಿಕ ಯೋಜನೆಯ ಅಜೆಂಡಾವನ್ನು ಅಂತಿಮಗೊಳಿಸುವ ಸಲುವಾಗಿ ಸೇರಿದ ಯೋಜನಾ ಆಯೋಗದ ಪೂರ್ಣ ಸಭೆ ಈ ಬಗ್ಗೆ ಆತಂಕ ವ್ಯಕ್ತಪಡಿಸಿದೆಯಂತೆ. ಒಂಬತ್ತನೆ ಯೋಜನೆಗೆ ಬಜೆಟ್ ಬೆಂಬಲವನ್ನು 374 00 ಕೋಟಿ ರೂಪಾಯಿಗಳಿಗೆ ಮಿತಿಗೊಳಿಸಲಾಗಿದೆ.

ಸರ್ಕಾರಿ ಸಾಲ ಏರಿದರೂ ಜನರಿಗೆ ಅನುಕೂಲತೆಗಳು ಕಡಿಮೆಯಾಗುತ್ತಿರುವುದೊಂದೇ ಕಾಣುತ್ತಿರುವುದು.

> ಸರ್ಕಾರ ಸಾಲ ಪಡೆಯುವ ಪ್ರತಿ ಒಂದು ರೂಪಾಯಿಯಲ್ಲಿನ 94 ಪೈಸೆಗಳು ಸಾಲದ ಮೇಲಿನ ಬಡ್ಡಿ ಪಾವತಿಸಲೇ ಹೋಗತ್ತದೆ ಎಂಬುದು ಆಘಾತಕಾರಿ ಸುದ್ದಿ
>
> \- ಫಿಕ್ಕಿಯ ಮಹಾಕಾರ್ಯದರ್ಶಿ.



ಐ.ಎಂ.ಎಫ್. ತನ್ನ ಧಣಿಗಳ ಸೇವೆಯಲ್ಲಿ

ಭಾರತದಲ್ಲಿ 1991 ರ ನಂತರದ ಉದಾರೀಕರಣದ ರೂವಾರಿ ಡಾ|| ಮನಮೋಹನಸಿಂಗರ ಅಭಿಪ್ರಾಯವಿದು. ಐ.ಎಂ.ಎಫ್. ಸಾಲ ನೀಡಿದವರ ಹಿತಾಸಕ್ತಿಗಳನ್ನೇ ಹೆಚ್ಚೆಚ್ಚು ಕಾಯುತ್ತದೆಯೇ ಹೊರತು ಸಾಲ ಪಡೆದವರ ಹಿತಗಳನ್ನಲ್ಲ ಎಂಬುದು ಅವರ ಇತ್ತೀಚಿನ ಅಭಿಪ್ರಾಯ.

ಸಾಲ ಎನ್ನುವುದು ಇಂದಿಗೂ ಒಂದು ಸಂಕೀರ್ಣ ರಾಜಕೀಯ ಪ್ರಕ್ರಿಯೆ. ಇದರಲ್ಲಿ ಸಾಲ ನೀಡಿದವರು ಸಾಲಗಾರರ ಮೇಲೆ ತಮ್ಮ ದೃಷ್ಟಿಕೋನವನ್ನೇ ಹೇರುವ ಕೆಲಸ ಮಾಡುತ್ತಾರೆ ಎಂದಿರುವ ಅವರು ಜಾಗತೀಕರಣವೆಂಬುದು ಅಭಿವೃದ್ಧಿಶೀಲ ದೇಶಗಳಲ್ಲಿನ ಪ್ರಜಾ ಪ್ರಭುತ್ವೀಕರಣಕ್ಕೆ ವಿರುದ್ಧವಾಗಿದೆ ಎಂದಿದ್ದಾರೆ.

ಅವರ ಪ್ರಕಾರ ಜಾಗತೀಕರಣ ಹಿನ್ನೆಡೆಯಲಾರದಂತ ಪ್ರಕ್ರಿಯೆಯಾದರೂ ಬಹುರಾಷ್ಟ್ರೀಯ ಕಂಪನಿಗಳು ಆಯಾ ದೇಶಗಳ ಸರ್ಕಾರಗಳು ತಮ್ಮ ದೇಶಗಳ ಆರ್ಥಿಕಗಳಲ್ಲಿ ಮಧ್ಯ ಪ್ರವೇಶ ಮಾಡಲಾಗದಂತಹ ಪರಿಸ್ಥಿತಿಯನ್ನು ನಿರ್ಮಿಸಿ ಜನರ ಆಶೋತ್ತರಗಳಿಗೆ ಸ್ಪಂದಿಸದಂತಹ ಸ್ಥಿತಿ ಉಂಟುಮಾಡಿ ಸಾಮಾಜಿಕ ಅಸಮತೋಲನವನ್ನು ಸೃಷ್ಟಿಸುತ್ತವೆ ಎಂದಿದ್ದಾರೆ ಅವರು. ಹಾಗೆಯೇ ಜಾಗತೀಕರಣ ವಿದೇಶೀ ವ್ಯವಹಾರ, ವಿನಿಮಯದರ, ಹಣಕಾಸು ನೀತಿಗಳು ಮತ್ತು ಆದಾಯಕರ ನೀತಿಗಳಲ್ಲಿ ಸರ್ಕಾರಕ್ಕಿರುವ ತಾಕತ್ತನ್ನೇ ಹಾಳುಮಾಡುತ್ತದೆ ಎಂದಿದ್ದಾರೆ.

ದಟ್ಟ ಉದಾರೀಕರಣವಾದಿಯೊಬ್ಬರು ಈಗ ಉದಾರೀಕರಣದ ಹುಳುಕುಗಳನ್ನು ಉದಾರೀಕರಣದ ದೃಷ್ಟಿಕೋನದಿಂದಲೇ ಕಂಡು ಹಿಡಿದಿರುವ ಸಂಗತಿ ಇದಲ್ಲವೆ?

ಭಾರತದಲ್ಲಿ ಕಡಿಮೆ ಆದಾಯ ತೆರಿಗೆ

ಭಾರತದಲ್ಲಿ ತೆರಿಗೆ ಪ್ರಮಾಣ ಅತಿಯಾಗಿದೆ ಎಂದು ಬಂಡವಾಳಶಾಹಿಗಳು ದಿನನಿತ್ಯ ಬೊಬ್ಬಿಡುತ್ತಾರೆ. ತೆರಿಗೆ ದರಗಳನ್ನು ಇಳಿಸಿದರೆ ತೆರಿಗೆ ಸಂಗ್ರಹಣೆ ಹೆಚ್ಚಾಗುತ್ತದೆ ಎಂದು ಅವರು ವಾದ ಮಾಡುತ್ತಾರೆ. ಪ್ರಜಾವಾಣಿಯಲ್ಲಿ ಬಂದಿರುವ ಈ ಕೆಳಗಿನ ಸುದ್ದಿಯನ್ನು ಓದಿ

"ಆದಾಯ ತೆರಿಗೆ ನೀಡಲು ಬೇಸರ ಪಡುವ ಭಾರತೀಯರು ವಿಶ್ವದಲ್ಲೇ ಅತ್ಯಂತ ಕಡಿಮೆ ಆದಾಯ ತೆರಿಗೆ ನೀಡುವವರ ಸಾಲಿಗೆ ಸೇರಿದವರು ಎಂದು ಇತ್ತೀಚಿನ ಸಮೀಕ್ಷೆಯೊಂದು ವರದಿ ಮಾಡಿದೆ.

ತಮ್ಮ ಆದಾಯದ ಅರ್ಧಭಾಗವನ್ನು- ಅಂದರೆ ಸರಿಯಾಗಿ ಶೇ. 50 ರಷ್ಟನ್ನು ತೆರಿಗೆ ಸಲ್ಲಿಸುವ ಜಪಾನಿಯರು ಶೇ. 54 ರಷ್ಟು ತೆರಿಗೆ ಸಲ್ಲಿಸುವ ಫ್ರೆಂಚರು ಅತಿ ಹೆಚ್ಚು ತೆರಿಗೆ ಸಲ್ಲಿಸುವವರು. ಅಮೇರಿಕದಲ್ಲೂ ಭಾರತಕ್ಕಿಂತ ಹೆಚ್ಚು ತೆರಿಗೆ ಹಾಕಲಾಗುತ್ತದೆ. ಅಲ್ಲಿನ ಶ್ರೀಮಂತರು ಶೇಕಡಾ 39.6 ರಷ್ಟು ತೆರಿಗೆ ನೀಡಬೇಕಾಗುತ್ತದೆ. ಜರ್ಮನಿಯಲ್ಲಿ ಶೇಕಡಾ 43.5, ಇಂಗ್ಲೆಂಡ್‌ನಲ್ಲಿ ಮತ್ತು ಕೊರಿಯಾದಲ್ಲಿ ಶೇ. 40 ರಷ್ಟು ತೆರಿಗೆ ವಿಧಿಸಲಾಗುತ್ತದೆ.

ಪಾಕಿಸ್ತಾನದಲ್ಲಿ ತೆರಿಗೆ ಪ್ರಮಾಣ ಭಾರತಕ್ಕಿಂತ ಕಡಿಮೆ ಇದೆ. ಅಲ್ಲಿನ ಶ್ರೀಮಂತರು ಕೇವಲ ಶೇ. 20 ರಷ್ಟನ್ನೂ ಮಾತ್ರ ತೆರಿಗೆ ನೀಡುತ್ತಾರೆ. ಶ್ರೀಲಂಕದಲ್ಲಿ ಶೇಕಡಾ 35 ತೆರಿಗೆ ವಿಧಿಸಲಾಗುತ್ತದೆ. ಭಾರತದಲ್ಲಿ ಶೇ. 30 ರಷ್ಟು ತೆರಿಗೆ ಇದೆ. ಆದರೆ ಈ ಎಲ್ಲ ದೇಶಗಳು ಮಧ್ಯಮ ವರ್ಗದವರಿಗೆ ರಿಯಾಯ್ತಿ ತೋರಿಸಿ ಅವರ ಆದಾಯದ ಮೇಲೆ ಸ್ವಲ್ಪ ಕಡಿಮೆ ತೆರಿಗೆ ವಿಧಿಸುತ್ತವೆ".

ಹೇಗಿದೆ ಈ ಸುದ್ದಿ?

ವಿಮಾ ಮಸೂದೆಗೆ ಭಾರೀ ಪ್ರತಿರೋಧ

ಮನವಿಗೆ ಒಂದು ಕೋಟಿಗೂ ಹೆಚ್ಚು ಜನಗಳ ಸಹಿ

ಕಳೆದ ಸಂಸತ್ ಅಧಿವೇಶದಲ್ಲಿ ಮಂಡಿಸಿದ ವಿಮಾ ನಿಯಂತ್ರಣ ಪ್ರಾಧಿಕಾರ (ಐ.ಆರ್.ಎ) ಮಸೂದೆಯ ವಿರುದ್ಧ ಹಾಗೂ ವಿಮಾ ಉದ್ದಿಮೆಯ ಖಾಸಗೀಕರಣದ ವಿರುದ್ಧ ಹೋರಾಟ ತೀವ್ರಗೊಳ್ಳುತ್ತಿದೆ. ಅತ್ತ ಸರಕಾರವೂ ಕೆಲವು ಮೇಲು - ಮೇಲಿನ ಬದಲಾವಣೆಗಳೊಂದಿಗೆ ಸಂಸತ್ತಿನಲ್ಲಿ ಅದನ್ನು ಪಾಸು ಮಾಡಿಸಿಕೊಳ್ಳಲು, ತರಾತುರಿ ನಡೆಸಿದೆ.

ಈ ನಡುವೆ ವಿಮಾ ನೌಕರರು ಈ ಮಸೂದೆಯ ವಿರುದ್ಧ ಲೋಕಸಭಾಧ್ಯಕ್ಷರಿಗೆ ಸಲ್ಲಿಸುವ ಮನವಿಗೆ ಒಂದು ಕೋಟಿ ಜನಗಳ ಸಹಿ ಸಂಗ್ರಹಿಸುವ ತಮ್ಮ ಗುರಿಯನ್ನು ತಲುಪಿದ್ದಾರೆ. ವಾಸ್ತವವಾಗಿ ಆ ಗುರಿಯನ್ನು ಮೀರಿದ್ದಾರೆ. ಫೆಬ್ರವರಿ 19 ರ ವೇಳೆಗೆ 1,12,00,000 ಸಹಿ ಸಂಗ್ರಹ ನಡೆಸಿದ್ದು ಅದು ಒಂದೂವರೆ ಕೋಟಿ ತಲುಪುವ ನಿರೀಕ್ಷೆಯಿದೆ. ಅಖಿಲ ಭಾರತ ವಿಮಾ ನೌಕರರ ಸಂಘದ 17ನೇ ಸಮ್ಮೇಳನ ಜನರ ನಡುವೆ ಹೋಗಿ ಒಂದು ಕೋಟಿ ಸಹಿ ಸಂಗ್ರಹಿಸುವ ಕರೆ ನೀಡಿತ್ತು. ವಿಮಾ ಖಾಸಗೀಕರಣದ ಬಗ್ಗೆ ಸಾರ್ವಜನಿಕರಲ್ಲಿ ಸಮ್ಮತಿ ಇದೆ ಎಂಬ ಸರಕಾರಿ ಹೇಳಿಕೆ ಎಷ್ಟು ಸುಳ್ಳೆಂದು ತೋರಿಸಲು ವಿಮಾ ನೌಕರರು ಈ ಸಹಿ ಸಂಗ್ರಹ ಚಳುವಳಿ ಆರಂಭಿಸಿದ್ದರು. ಸಿಐಐ, ಫಿಕ್ಕಿ, ಅಸ್ಸೋಚಾಂ ಮುಂತಾದ ಉದ್ದಿಮೆದಾರರ, ಬಂಡವಾಳದಾರರ ಅಭಿಪ್ರಾಯಗಳನ್ನು ಕೇಳಿ ಇದನ್ನೇ ರಾಷ್ಟ್ರೀಯ ಸರ್ವಸಮ್ಮತಿ ಎಂದು ಸರಕಾರ ಹೇಳಿಕೊಳ್ಳುತ್ತಿದೆ ಎಂಬ ವಿಮಾ ನೌಕರರ ಸಂಘದ ಮಾತು ಈ ಮೂಲಕ ನಿಜವಾಗಿದೆ. ಕೇವಲ ಒಂದೂವರೆ ತಿಂಗಳಲ್ಲಿ 1,12,00,000 ಜನಗಳಿಂದ ಸಹಿ ಸಂಗ್ರಹವೇ ಸರ್ವಸಮ್ಮತಿಯ ಪ್ರತೀಕ, ನಿಜವಾದ ರಾಷ್ಟ್ರೀಯ ಸರ್ವಸಮ್ಮತಿ ಇರುವುದು ಐ.ಆರ್.ಎ. ಮಸೂದೆ ಮತ್ತು ವಿಮೆಯ ಖಾಸಗೀಕರಣದ ವಿರುದ್ಧ ಎಂದು ಈಗ ದೃಢಪಟ್ಟಿದೆ. ಈ ಮನವಿ ಪತ್ರವನ್ನು ಮಾರ್ಚ್ ಆರಂಭದಲ್ಲಿ ಲೋಕಸಭೆಯ ಅಧ್ಯಕ್ಷರಿಗೆ ಸಲ್ಲಿಸಲಾಗುವುದು.

ಇಷ್ಟೇ ಅಲ್ಲ, ವಿವಿಧ ಜನವಿಭಾಗಗಳ 300 ಕ್ಕೂ ಹೆಚ್ಚು ಪ್ರಖ್ಯಾತ ವ್ಯಕ್ತಿಗಳು ಪ್ರಧಾನ ಮಂತ್ರಿಗಳಿಗೆ, ಸಂಸದೀಯ ಸ್ಥಾಯೀ ಸಮಿತಿಯ ಅಧ್ಯಕ್ಷರಿಗೆ ಈ ಮಸೂದೆಯ ವಿರುದ್ಧ ಪತ್ರ ಬರೆದು ಇದಕ್ಕೆ ಸಾಕ್ಷಿ ನೀಡಲು ಮುಂದೆ ಬಂದಿದ್ದಾರೆ. ಇವರಲ್ಲಿ ನಿವೃತ್ತ ನ್ಯಾಯಾಧೀಶರು, ಈಗಿನ ಹಾಗೂ ಹಿಂದಿನ ಅಡ್ವಕೇಟ್ ಜನರಲ್‌ಗಳು, ಸಂಪಾದಕರು, ಪತ್ರಕರ್ತರು, ಅರ್ಥಶಾಸ್ತ್ರಜ್ಞರು, ಮಾಜಿ ವಿ.ವಿ. ಉಪಕುಲಪತಿಗಳು, ರಾಜಕೀಯ ಮುಖಂಡರು, ಪ್ರಾಧ್ಯಾಪಕರು, ಅಧ್ಯಾಪಕರು, ಅಕೌಂಟೆಂಟ್‌ಗಳು ಸೇರಿದ್ದಾರೆ. ಹಲವು ನಾಗರೀಕ ಸಮಿತಿಗಳೂ ಮನವಿ ಕಳಿಸಿವೆ. ಆದರೆ ಹಣಕಾಸು ಸ್ಥಾಯಿ ಸಮಿತಿ ಅವರಲ್ಲಿ ಒಬ್ಬಬ್ಬರನ್ನು ಮಾತ್ರ ನವದೆಹಲಿಗೆ ಕರೆದು ಇತರರನ್ನು ನಿರ್ಲಕ್ಷಿಸಿದೆ ಎಂದು ಪತ್ರಿಕಾ ವರದಿಗಳಿಂದ ತಿಳಿದು ಬಂದಿದೆ.

ಈ ರೀತಿ ಸರ್ಕಾರ ಇಡೀ ಮಸೂದೆಯ ಪರೀಕ್ಷಣೆಯ ಪ್ರಕ್ರಿಯೆಯನ್ನು ಮೊಟಕು ಮಾಡಲು ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ. ಕೊನೆಗೂ ಸಾರ್ವಜನಿಕ ಅಭಿಪ್ರಾಯವೇ ಕೈಮೇಲಾಗುವಂತೆ ಅಖಿಲ ಭಾರತ ವಿಮಾ ನೌಕರರ ಸಂಘ ಪ್ರಯತ್ನ ನಡೆಸಿದೆ. ಸಹಿ ಸಂಗ್ರಹಣೆಯಲ್ಲದೆ ಸಮಾವೇಶಗಳು, ವಿಚಾರಸಂಕಿರಣಗಳು, ಜಾಥಾಗಳು, ಬೀದಿ ಬದಿ ಸಭೆಗಳು, ಕರಪತ್ರಗಳು ಇತ್ಯಾದಿಗಳ ಮೂಲಕ ಪ್ರಚಾರ ನಡೆದಿದೆ. ಐ.ಆರ್.ಎ. ಮಸೂದೆಯನ್ನು ಸಂಸತ್ತಿನಲ್ಲಿ ಚರ್ಚೆಗೆ ತಗೊಂಡರೆ ಮರುದಿನವೇ ವಿಮಾ ನೌಕರರೆಲ್ಲಾ ಒಂದು ದಿನದ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ. ಇತರ ಕಾರ್ಯಾಚರಣೆಗಳನ್ನೂ ರೂಪಿಸಲಾಗಿದೆ.

ಐಎನ್‌ಎನ್

ಬ್ಯಾಂಕ್ ನೌಕರರ ಯಶಸ್ವಿ ದೇಶವ್ಯಾಪಿ ಮುಷ್ಕರ

ಫೆಬ್ರವರಿ 25 ಹಾಗೂ 26 ರ ಂದು ಸುಮಾರು 10 ಲಕ್ಷಕ್ಕೂ ಹೆಚ್ಚು ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ನಡೆಸಿದ ಮುಷ್ಕರ ಅತ್ಯಂತ ಯಶಸ್ವಿಯಾಗಿದೆ ಎಂದು ವರದಿಯಾಗಿದೆ. ಎಲ್ಲಾ ಕಡೇ ಇಡೀ ಬ್ಯಾಂಕಿಂಗ್ ವ್ಯವಸ್ಥೆ ಸ್ತಬ್ಧಗೊಂಡಿತು. ರಿಝರ್ವ್ ಬ್ಯಾಂಕ್‌ನ ನೌಕರರೂ ಒಂದು ದಿನ ಮುಷ್ಕರದಲ್ಲಿ ಭಾಗವಹಿಸಿ ಬೆಂಬಲ ಸೂಚಿಸಿದರು.

ವೇತನ ಪರಿಷ್ಕರಣೆಯಲ್ಲಿ ವಿಪರೀತ ವಿಳಂಬ ಹಾಗೂ ಐಬಿಎ ನ ಹಠಮಾರಿತನವನ್ನು ವಿರೋಧಿಸಿ ಈ ಮುಷ್ಕರ ಕಾರ್ಯಾಚರಣೆಗೆ 5 ಬ್ಯಾಂಕ್ ನೌಕರರ ಸಂಘಟನೆಗಳು ಹಾಗೂ 4 ಬ್ಯಾಂಕ್ ಅಧಿಕಾರಿಗಳ ಸಂಘಟನೆಗಳು ಸೇರಿ ರಚಿಸಿಕೊಂಡ ಸಂಯುಕ್ತ ಬ್ಯಾಂಕ್ ನೌಕರರ ವೇದಿಕೆ ಕರೆ ನೀಡಿತ್ತು. ಈಗಲೂ ಐಬಿಎ ಹಾಗೂ ಸರಕಾರ ತಮ್ಮ ಹಠಮಾರಿ ನಿಲುವನ್ನು ಬಿಡದಿದ್ದರೆ ಮಾರ್ಚ್ 17 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸುವುದಾಗಿ ವೇದಿಕೆ ಎಚ್ಚರಿಕೆ ನೀಡಿದೆ.

ಎಡಪಕ್ಷಗಳು ಪಾರ್ಲಿಮೆಂಟಿನ ಅಧಿವೇಶನದಲ್ಲಿ ಎತ್ತಲಿರುವ ಪ್ರಶ್ನೆಗಳು

ಪಾರ್ಲಿಮೆಂಟಿನ ಅಧಿವೇಶನ ಸೇರುವ ಮೊದಲು ಎಡಪಕ್ಷಗಳ ಪ್ರಮುಖ ಪಾರ್ಲಿಮೆಂಟರಿ ಸದಸ್ಯರು ಸಭೆ ಸೇರಿ ಎಡಪಕ್ಷಗಳು ಪಾರ್ಲಿಮೆಂಟಿನಲ್ಲಿ ಎತ್ತಬೇಕಾದ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಬಿಹಾರದಲ್ಲಿ ಕಲಮು 356 ರ ಬಳಸಿ ರಾಷ್ಟ್ರಪತಿ ಆಡಳಿತ, ಚರ್ಚುಗಳ ಹಾಗೂ ಕ್ರಿಶ್ಚಿಯನ್ನರ ಮೇಲೆ ಧಾಳಿ, ಪಡಿತರ ವ್ಯವಸ್ಥೆಯ ಮೂಲಕ ಪೂರೈಕೆ ಆಗುವ ಆಹಾರ ಧಾನ್ಯಗಳ ಬೆಲೆ ಏರಿಕೆ, ಇನ್ಶೂರೆನ್ಸ್ ಮತ್ತು ಪೇಟೆಂಟ್ ಬಿಲ್‌ಗಳ ವಿರುದ್ಧ, ನೌಕಾ ಮುಖ್ಯಸ್ಥ ಅಡ್ಮಿರಲ್ ಭಾಗವತ್ ವಜಾ, ಸಾರ್ವಜನಿಕ ಘಟಕಗಳಲ್ಲಿ ಹೂಡಿಕೆ ಹಿಂತೆಗೆದುಕೊಳ್ಳುವುದು, ಸಾರ್ವಜನಿಕ ಘಟಕಗಳು, ಕಲ್ಲಿದ್ದಲು ಗಣಿಗಳ ಮುಚ್ಚುವಿಕೆ, ಮಹಿಳಾ ಮೀಸಲಾತಿ ಮತ್ತು ಕೃಷಿ ಕಾರ್ಮಿಕರ ಬಿಲ್‌ಗಳಿಗೆ ಬೆಂಬಲ, ಕೃಷಿಗೆ ಬೇಕಾದ ಗೊಬ್ಬರ ಇತ್ಯಾದಿ ವಸ್ತುಗಳ ಮೇಲೆ ಸಬ್ಸಿಡಿ ಕಡಿತಕ್ಕೆ ಮೂಲಭೂತ ಹಕ್ಕು ಮಾಡಲು ಪ್ರಯತ್ನ, ರಾಜ್ಯ ಸರ್ಕಾರಗಳಿಗೆ ಸಾಕಷ್ಟು ಹಣಕಾಸು ಒದಗಿಸುವ ಬಗ್ಗೆ - ಎಡ ಪಕ್ಷಗಳ ಎಂ.ಪಿ.ಗಳು ಪಾರ್ಲಿಮೆಂಟಿನ ಒಳಗೆ ಹೋರಾಟ ನಡೆಸುತ್ತಾರೆ ಎಂದು ಈ ಸಭೆಯಲ್ಲಿ ನಿರ್ಧರಿಸಲಾಗಿದೆ.

ಬಾಗೇಪಲ್ಲಿಯಲ್ಲಿ ಸ್ಫೂರ್ತಿಯ ಸೆಲೆ ಪಿ. ಸುಂದರಯ್ಯ ಭವನ ಉದ್ಘಾಟನೆ



ಜೋಡಿದಾರ ಪದ್ಧತಿ ವಿರುದ್ಧದ ಯಶಸ್ವಿ ಹೋರಾಟದಲ್ಲಿ ಕರ್ನಾಟಕದ ಆದರಲ್ಲಿಯೂ ಕೋಲಾರದ ಜನತೆ ಮೇಲೆ ಸದಾ ತಮ್ಮ ಛಾಪು ಮೂಡಿಸಿರುವ ತೆಲಂಗಾಣ ವೀರ, ರೈತ ಹೋರಾಟದ ರೂವಾರಿಯೂ ಆದ ಪಿ. ಸುಂದರಯ್ಯನವರ ಹೆಸರಿನ ಭವನವನ್ನು ಫೆಬ್ರವರಿ 20 ರಂದು ಕರ್ನಾಟಕದ ಕಾರ್ಮಿಕ ಚಳುವಳಿಯ ಚೇತನ ಹಾಗೂ ರಾಜ್ಯ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳೂ ಆದ ಕಾಮ್ರೇಡ್ ಎಸ್. ಸೂರ್ಯ ನಾರಾಯಣ ರಾವ್ ಉದ್ಘಾಟಿಸಿದರು.


ಅಂದು ಮುಂಜಾನೆಯಿಂದಲೇ ಬಾಗೇಪಲ್ಲಿಯಲ್ಲಿ ಸಂಭ್ರಮ ಸಡಗರದ ವಾತಾವರಣ. ತಾಲೂಕಿನ ದೂರದ ಹಳ್ಳಿಗಳಿಂದಲೂ ನೂರಾರು ರೈತ ಕೂಲಿಕಾರರು ತೊರೆ ತೊರೆಯಾಗಿ ಕೆಂಬಾವುಟ ಹಿಡಿದು ತಮ್ಮ ಶ್ರಮದ ಫಲದಿಂದ ನಿರ್ಮಾಣಗೊಂಡಿರುವ ತಮ್ಮ ಬಹುದಿನಗಳ ಕನಸಿನ ಪಿ. ಸುಂದರಯ್ಯ ಭವನದ ಉದ್ಘಾಟನಾ ಸಂಭ್ರಮ ಸಡಗರದಲ್ಲಿ ಪಾಲ್ಗೊಳ್ಳಲು ಆತುರಾತುರವಾಗಿ ಆಗಮಿಸುತ್ತಿದ್ದರು. ಮೊದಲ ಮಹಡಿಯಲ್ಲಿ ಇನ್ನೂರು ಜನರು ಕೂರುವ ಸಭಾಂಗಣ ಹೊಂದಿರುವ ಕಟ್ಟಡ ಚಿತ್ರವತಿ ನದಿಯ ದಡದಲ್ಲಿ ಸುಂದರವಾಗಿ ನಿರ್ಮಾಣಗೊಂಡಿದೆ. ಕೆಂಪು ತೋರಣ ಹಾಗೂ ಕೆಂಬಾವುಟಗಳಿಂದ ಶೃಂಗಾರಗೊಂಡು ರಂಜಿತವಾಗಿದ್ದ ಕಟ್ಟಡವನ್ನು ಮಧ್ಯಾಹ್ನ 1 ಘಂಟೆಗೆ ಕಾಂ|| ಸೂರಿ ಉದ್ಘಾಟಿಸಿದರು. ಭವನ ನಿರ್ಮಾಣದ ರೂವಾರಿಯೂ ಹಾಗೂ ಕ್ಷೇತ್ರದ ಜನಪ್ರಿಯ ಶಾಸಕರೂ ಆದ ಶ್ರೀರಾಮರೆಡ್ಡಿಯವರು ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವೈ. ಗುರುಶಾಂತ್ ಜತೆ ಸ್ಥಳೀಯ ಮುಖಂಡರು ಈ ಸ್ಮರಣೀಯ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

ಇದೇ ಸಂದರ್ಭದಲ್ಲಿ ಶ್ರೀರಾಮರೆಡ್ಡಿಯವರ ನೇತೃತ್ವದಲ್ಲಿ ಐದು ಸಾವಿರ ಜನರ ಬೃಹತ್ ಮೆರವಣಿಗೆಯನ್ನು ಸುಂದರಯ್ಯ ಭವನದಿಂದ ಪ್ರಾರಂಭಿಸಿ ಪಟ್ಟಣದ ಪ್ರಮುಖ ಬೀದಿಯಲ್ಲಿ ನಡೆಸಲಾಯಿತು. ಸಾವಿರಾರು ಉತ್ಸಾಹಿ ಗ್ರಾಮೀಣ ಯುವಕರಿದ್ದ ಈ ಮೆರವಣಿಗೆಯಲ್ಲಿ ನೂರಾರು ಗ್ರಾಮೀಣ ಮಹಿಳೆಯರು ಕೆಂಬಾವುಟದ ಹಿರಿಮೆಯನ್ನು ಎತ್ತಿ ಹಿಡಿದಿದ್ದರು. ನಂತರ ಸರ್ಕಾರಿ ಶಾಲೆ ಮೈದಾನದಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಕಾಮ್ರೇಡ್ ಪಿ. ಸುಂದರಯ್ಯ ತ್ಯಾಗದ ಪ್ರತೀಕ, ಅವರ ಹೆಸರಲ್ಲಿ ಭವನ ನಿರ್ಮಾಣಗೊಂಡಿರುವುದು ರಾಜ್ಯದ ಇಡೀ ಶ್ರಮಿಕ ವರ್ಗಕ್ಕೆ ಸಂತೋಷಕರವಾಗಿದೆ ಎಂದು ಕಾಮ್ರೇಡ್ ಸೂರಿಯವರು ಬಹಿರಂಗ ಸಭೆಯ ತಮ್ಮ ಭಾಷಣದಲ್ಲಿ ಬಾಗೇಪಲ್ಲಿಯ ಜನತೆಯನ್ನು ಪ್ರಶಂಸಿಸಿದರು.

ಕೇಂದ್ರ ರಾಜ್ಯ ಸರ್ಕಾರಗಳ ತಪ್ಪು ಆರ್ಥಿಕ ನೀತಿಯಿಂದ ರೇಷ್ಮೆ ಕಬ್ಬು, ತೊಗರಿ, ಶೇಂಗಾ ಬೆಳೆದ ರೈತರು ಕಷ್ಟ ನಷ್ಟಗಳಿಂದ ಆತ್ಮಹತ್ಯೆ ಗೋಲಿ ಬಾರಿಗೆ ಬಲಿಯಾಗಿದ್ದಾರೆ. ಇಂತಹ ಗಹನವಾದ ಸಮಸ್ಯೆ ಪರಿಹರಿಸಲಾರದ ಸರ್ಕಾರಗಳು ರೈತರ ಪ್ರಾಣದ ಜೊತೆ ಚೆಲ್ಲಾಟವಾಡುತ್ತಿದೆ ಎಂದರು. ರೇಷ್ಮೆ ಆಮದು ನೀತಿಯನ್ನು ಕೂಡಲೇ ಸರಿಪಡಿಸಿ, ರೇಷ್ಮೆ ಬೆಳೆಗಾರರಿಗೆ ಅನ್ಯಾಯ ತಪ್ಪಿಸಬೇಕು, ಉತ್ತಮ ತಳಿ ಅಭಿವೃದ್ಧಿ ಪಡಿಸುವಂತೆ ಹಾಗೂ ರೈತರ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಗೊಳಿಸುವಂತೆ ಕೇಂದ್ರ, ರಾಜ್ಯ ಸರ್ಕಾರಗಳನ್ನು ಆಗ್ರಹಿಸಿದರು.

ಬಾಗೇಪಲ್ಲಿ ಕ್ಷೇತ್ರದ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಗಳಿಗಾಗಿ ಶಾಸಕ ಶ್ರೀ ರಾಮರೆಡ್ಡಿಯವರನ್ನು ಪ್ರಶಂಸಿಸಿದ ಕಾಂ. ಸೂರಿಯವರು ಬಾಗೇಪಲ್ಲಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಿಪಿಐ(ಎಂ) ಪಕ್ಷವನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಯಾವುದೇ ಘಳಿಗೆಯಲ್ಲಿಯೂ ಜಾತಿ ಆಧಾರದಲ್ಲಿ ಬೆಂಬಲಿಸದೆ ಒಟ್ಟಾರೆ ಪ್ರಗತಿಯತ್ತ ಸಾಗಲು ಸಿಪಿಐ(ಎಂ) ಪಕ್ಷವನ್ನು ಬೆಂಬಲಿಸುವಂತೆ ಕರೆ ನೀಡಿದರು.





ವಿಚ್ಛಿದ್ರಕಾರಿ ಹಾಗೂ ಕೋಮು ಶಕ್ತಿಗಳು ನಮ್ಮ ನಡುವೆ ತಲೆ ಎತ್ತುತ್ತಿರುವಾಗ ದುಡಿಯುವ ಜನರ ಏಳಿಗೆಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟ ಸಂಗಾತಿ ಪಿ. ಸುಂದರಯ್ಯ ಭವನ ರೈತ ಕೂಲಿಕಾಂರರ ತರಬೇತಿ ಕೇಂದ್ರವಾಗಿ ಕಾರ್ಯ ನಿರ್ವಹಿಸಲೆಂದು ಕೋಲಾರ ಜಿಲ್ಲಾ ಸಿಪಿಐ(ಎಂ)ನ ಮುಖಂಡರು ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಆದ ಕಾಮ್ರೇಡ್ ಜಿ.ಸಿ. ಬಯ್ಯಾರೆಡ್ಡಿ ಆಶಿಸಿದರು. ಸುಂದರಯ್ಯ ಕೇವಲ ಆಂಧ್ರದಲ್ಲೆ ಅಲ್ಲದೆ ಇಡೀ ದೇಶದಲ್ಲಿ ಕೆಂಬಾವುಟ ಹಾರಾಡುವಂತೆ ಪ್ರೇರೇಪಿಸಿದ ಸಂಗಾತಿ ಎಂದು ಬಯ್ಯಾರೆಡ್ಡಿ ಸ್ಮರಿಸಿದರು.

ಜಾತಿ, ಧರ್ಮದ ಹೆಸರಲ್ಲಿ ದೇಶ ಅಭದ್ರಗೊಳ್ಳುತ್ತಿರುವ ಸಂದರ್ಭದಲ್ಲಿ ದೇಶದ ಸಮಗ್ರತೆ ಐಕ್ಯತೆ ಕಾಪಾಡುವ ಕೇಂದ್ರವಾಗಿ ಸುಂದರಯ್ಯ ಭವನ ಕಾರ್ಯ ನಿರ್ವಹಿಸಲಿದೆ ಎಂದು ಶಾಸಕರಾದ ಶ್ರೀ ರಾಮರೆಡ್ಡಿಯವರು ಬಹಿರಂಗ ಸಭೆಯ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಘೋಷಿಸಿದರು.

ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಗೊಂಡ ನಂತರ ಸರ್ಕಾರದ ಜನವಿರೋಧಿ ನೀತಿಗಳಾದ ಭೂಸುಧಾರಣೆ ನೀತಿಗೆ ತಿದ್ದುಪಡಿ, ಬೆಲೆ ಏರಿಕೆ, ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಸರ್ಕಾರದ ನಿಷ್ಕ್ರಿಯತೆ ಬಗ್ಗೆ ಶಾಸನ ಸಭೆಗಳಲ್ಲಿ ಏಕಾಂಗಿ ಹೋರಾಟ ನಡೆಸಿದ್ದೇನೆ ಎಂದು ಹೇಳಿದಾಗ ನೆರೆದಿದ್ದ ಜನಸ್ತೋಮ ಹರ್ಷವ್ಯಕ್ತಪಡಿಸಿತು.

ನಿಮಗೆ ಕೊಟ್ಟ ಭರವಸೆಯಂತೆ ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದೇನೆ, ಯಾವುದೇ ಭ್ರಷ್ಟ ಕೆಲಸಗಳಿಗೆ ಕೈ ಹಾಕದೆ ನಿಮ್ಮ ಮತಗಳ ಮೌಲ್ಯ ಕಾಪಾಡಿದ್ದೇನೆ ಎಂದಾಗ ಕರತಾಡನಮಾಡಿದ ಸಭಿಕರು, ನಿಮ್ಮ ಸಮಸ್ಯೆಗಳ ಜತೆ ಇಡಿ ರಾಜ್ಯದ ಜನ ಸಾಮಾನ್ಯರ ಕಷ್ಟಕಾರ್ಪಣ್ಯಗಳನ್ನು ಸರ್ಕಾರಕ್ಕೆ ವಿವರಿಸುವಲ್ಲಿ, ಗಮನ ಸೆಳೆಯುವಲ್ಲಿ ನಿಮ್ಮ ಮತಗಳಿಂದ ಸಾಧ್ಯವಾಗಿದೆ. ಇದರಿಂದ ಬಾಗೇಪಲ್ಲಿ ರಾಜ್ಯದಲ್ಲಿ ಚಿರಪರಿಚಿತವಾಗಿದೆ ಎಂದಾಗ ಇಡೀ ಜನತೆಯ ಮುಖದಲ್ಲಿ ಸಾರ್ಥಕತೆಯ ಭಾವನೆ ಮೂಡಿತ್ತು.

ವೇದಿಕೆಯಲ್ಲಿ ಎಸ್. ವೈ ಗುರುಶಾಂತ್., ತಾಲೂಕು ಕಾರ್ಯದರ್ಶಿ ವಿ. ವೆಂಕಟಸ್ವಾಮಿ ರೆಡ್ಡಿ ಹಾಗೂ ಪಕ್ಷದ ಇನ್ನಿತರ ಹಿರಿಯ ಸಂಗಾತಿಗಳು ಉಪಸ್ಥಿತರಿದ್ದರು. ಭಾಸ್ಕರ ರೆಡ್ಡಿ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಸುಂದರಯ್ಯ ಭವನ ಕಟ್ಟಡ ಕೆಲಸಗಾರರಾದ ಮೂರ್ತಿಯವರಿಗೆ ಕಾಂ. ಸೂರಿಯವರು ಒಂದು ಉಂಗುರ ಉಡುಗೊರೆಯಾಗಿ ನೀಡಿದರು. ಇದೇ ಸಂದರ್ಭದಲ್ಲಿ ಬಾಗೇಪಲ್ಲಿ ಸಾಮಿಲ್ಸ್ ವರ್ಕರ್ಸ್ ಯೂನಿಯನ್‌ನ ಪದಾಧಿಕಾರಿಗಳು ಸೂರಿಯವರಿಗೆ ಹಾಗೂ ಶ್ರೀರಾಮರೆಡ್ಡಿಯವರಿಗೆ ಮಾಲಾರ್ಪಣೆ ಮಾಡಿದರು. ○

ಪಡಿತರ ಬೆಲೆಯೇರಿಕೆ ವಿರುದ್ಧ ಹಾನಗಲ್ಲದಲ್ಲಿ ಪ್ರತಿಭಟನೆ

ಬಜೆಟ್ ಪೂರ್ವದಲ್ಲಿ ಪಡಿತರ ಅಕ್ಕಿ, ಗೋದಿ, ಸಕ್ಕರೆ ಅಲ್ಲದೆ ಅಡಿಗೆ ಅನಿಲ ಮತ್ತು ಯೂರಿಯಾ ರಸಗೊಬ್ಬರದ ಬೆಲೆಯೇರಿಕೆ ಸಾರ್ವತ್ರಿಕ ಪೇಟೆ ಧಾರಣೆಗಳ ಹೆಚ್ಚಳಕ್ಕೆ ಕಾರಣವಾಗಲಿದ್ದು ಕೇಂದ್ರದ ಬಿಜೆಪಿ ಸರ್ಕಾರ ಮತ್ತೊಮ್ಮೆ ಲಾಭಕೋರ ವರ್ತಕರಿಗೆ ಅನುಕೂಲಮಾಡಿದೆ ಎಂದು ಸಿಪಿಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಆರೋಪಿಸಿದರು. ಅವರು ಹಾನಗಲ್ಲದಲ್ಲಿ ಫೆಬ್ರವರಿ 9 ರಂದು ಪಡಿತರ ಆಹಾರ ಧಾನ್ಯಗಳ ಬೆಲೆಯೇರಿಕೆಯ ವಿರುದ್ಧ ಏರ್ಪಡಿಸಲಾಗಿದ್ದ ಪ್ರತಿಭಟನಾ ಮೆರವಣಿಗೆಯ ನಂತರದಲ್ಲಿ ನಡೆಸಲಾದ ಭಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದರು. ಎಡ ಪಕ್ಷಗಳ ಕರೆಯ ಮೇರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ನಿನ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ತಾಲೂಕಿನಲ್ಲಿ ಪಡಿತರ ವ್ಯವಸ್ಥೆಯನ್ನು ಭ್ರಷ್ಟಾಚಾರ ಮುಕ್ತಗೊಳಿಸುವಂತೆ ಒತ್ತಾಯಿಸಿ ತಹಶಿಲ್ದಾರರಿಗೆ ಮನವಿ ಸಲ್ಲಿಸಿದ ನಂತರ ಪ್ರತಿಭಟನಾ ಸಭೆಯನ್ನು ನಡೆಸಲಾಯಿತು. ರೈತ ಸಂಘದ ವ್ಹಿ.ಡಿ. ತುಪ್ಪದ್ ಮತ್ತು ಕೂಲಿಕಾರರ ಸಂಘದ ಹಕ್ಕಲಗೌಡ ಪಾಟೀಲ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರೈತ ಸಂಘದ ಜೀತೇಂದ್ರಗೌಡ ಪಾಟೀಲ್, ಕೂಲಿಕಾರರ ಸಂಘದ ಸಹ ದೇವಪ್ಪ ಶರಬಣ್ಣನವರ, ಜನವಾದಿ ಮಹಿಳಾ ಸಂಘದ ಅಂಬವ್ವ ಅಂಬಿಗೇರ ಮತ್ತು ಎಸ್.ಎಫ್.ಐ.ನ ಭಾಸ್ಕರ್ ಹುಲ್ಮನಿ ಮೆರವಣಿಗೆಯ ನೇತೃತ್ವ ವಹಿಸಿದ್ದರು

ಉಪಮುಖ್ಯ ಮಂತ್ರಿಗಳಿಗೆ ಯುವ ಜನರಿಂದ ಘೇರಾವ್

ಗುಲ್ಬರ್ಗಾ ಬೆಣ್ಣೆ ತೋರ ನದಿಯ ಅಣೆ ಕಟ್ಟಿನ ಕಾಲುವೆ ನಿರ್ಮಾಣದಲ್ಲಿ ಬಾರಿ ಅವ್ಯವಹಾರ ನಡೆಯುತ್ತಿದೆ. ಎಲ್ಲಾ ಕಾಲೂವೆಗಳು ಕಳಪೆ ಕಾಮಗಾರಿಯಿಂದ ನೆಲಸಮವಾಗಿದೆ. ಅದನ್ನು ಕೊಡಲೇ ಸರಿಪಡಿಸಿ ಹಾಗೂ ಬೆಣ್ಣೆ ತೋರಾ ಕಳದಂಡೆಯಲ್ಲಿರುವ ಶೆಳ್ಳಗಿ, ಕಮಕನೂರ, ತೊಂಚಿ ಹೆಬ್ಬಾಳ ಗ್ರಾಮಗಳನ್ನು ಸ್ಥಳಾಂತರಿಸಿ ಪುನರ್ ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿ ಡಿ.ವೈ.ಎಫ್.ಐ. ನೇತೃತ್ವದಲ್ಲಿ ನೂರಾರು ಯುವ ಜನರು ಫೆಬ್ರವರಿ 22 ರಂದು ಹೇರೂರ ಕ್ರಾಸ್ ಬಳಿ ಉಪಮುಖ್ಯ ಮಂತ್ರಿ ಸಿದ್ಧರಾಮಯ್ಯ ನವರಿಗೆ ಘೇರಾವ್ ಮಾಡಿದರು.

ಉಪಮುಖ್ಯ ಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಕಳಪೆ ಕಾಮಗಾರಿಗೆ ಕಾರಣವಾಗಿರುವ ಅಧಿಕಾರಿಗಳು ಗುತ್ತಿಗೆ ದಾರರಿಂದ ಪಡೆಯುವ ಲಂಚಗುಳಿ ತನನಿಲ್ಲಿಸಬೇಕು. ತೊಗರಿ ಬೆಳೆಗೆ ಪರಿಹಾರ ನೀಡಬೇಕು. ಪಡಿತರ ಮುಖಾಂತರ ಜೋಳ ವಿತರಿಸಬೇಕು. ಹಾಗೂ ಈ ಬಾಗದ ರಸ್ತೆಗಳ ದುರಸ್ಥಿ ಕಾರ್ಯ ನಡೆಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಡಿ.ವೈ.ಎಫ್.ಐ. ಜಿಲ್ಲಾಕಾರ್ಯದರ್ಶಿ ಶ್ರೀಮಂತ ಬಿ ಹೋಳಕರ ಮಹ್ಮದ್ ಬಾಬರ್ ಖಾನ್ ಬಸವರಾಜ ಶಾಹಾ ಕೃಷ್ಣ ಹೊಳಕರ, ಲಾಳ ಪಟೇಲ್ ಜಗನ್ನಾಥ ಕಾಂಬ್ಳೆ ನಾಗರಾಜ ಗಡ್ಡದ ಜೆ. ಎಂ.ಎಸ್.ನ ನೀಲಮ್ಮ ಕುಂಬಾರ ಸೇರಿದಂತೆ 150 ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿ 25 ನಿಮಿಷಗಳ ಕಾಲ ಘೇರಾವ್ ಮಾಡಿದರು. ○

ಕೋಮು ಸೌಹಾರ್ದತೆಗಾಗಿ ಮಾನವ ಸರಪಳಿ

ರಾಯಚೂರಿನ ಹಟ್ಟಿಯಲ್ಲಿ ಡಿ.ವೈ.ಎಫ್.ಐ., ಎಸ್.ಎಫ್.ಐ. ಹಾಗೂ ಸಿಐಟಿಯು ಜಂಟಿಯಾಗಿ ಸಮಾಜದಲ್ಲಿ ಕೋಮು ಸೌಹಾರ್ದಸೆ ಹಾಗೂ ಅಲ್ಪಸಂಖ್ಯಾತರ ಮೇಲಿನ ಹಲ್ಲೆ ಖಂಡಿಸಿ ಫೆಬ್ರವರಿ 13 ರಂದು ಮಾನವ ಸರಪಳಿ ಕಾರ್ಯಕ್ರಮ ಸಂಘಟಿಸಿದವು.

ಈ ಸಂಘಟನೆಗಳ ಕಾರ್ಯಕರ್ತರಲ್ಲದೆ. ನಾಗರೀಕರು, ಶಿಕ್ಷಕರು ಹಾಗೂ ಹಲವು ವರ್ತಕರು ಸೇರಿದಂತೆ 500 ಕ್ಕೂ ಹೆಚ್ಚು ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದರು ಈ ಸರಪಳಿ ಒಂದು ಕಿ.ಮಿ. ಉದ್ದಕ್ಕೂ ಮಿಗಿಲಾಗಿತ್ತು. ಸಿಐಟಿಯುವಿನ ಎಸುಪಾದಂ ಕೆ.ಶಿ. ವಾನಂದ, ವೆಂಕೋಬಕಲ್ ಡಿ.ವೈ.ಎಫ್.ಐನ ಬಿ. ಅಮರೇಶ ಗುರಿಕಾರ, ಬಿ. ಮೆಹಮ್ಮದ್, ಗೋವಿಂದಪ್ಪ, ಶಂಕರಪ್ಪ ರೆಂಥಣಿ ಎಂ.ಸಿ. ನಿಂಗಪ್ಪ ಹಾಗೂ ಎಸ್. ಎಫ್.ಐ.ನ ಪಕೀರಪ್ಪನ ರಂಗನಾಥ ಮುದಕಪ್ಪ, ನಿಂಗಪ್ಪ ಮತ್ತು ದೌಲಭ್ ಮೊದಲಾದವರು ಭಾಗವಹಿಸಿದ್ದರು.

ಬೆಲೆ ಏರಿಕೆ ವಿರುದ್ಧ ಗ್ರಾಮ ಪಂಚಾಯತ್ ಕಛೇರಿಗಳ ಮುಂದೆ ಧರಣಿ

ರಾಯಚೂರಿನ ದೇವ ದುರ್ಗ ತಾಲೂಕಿನಲ್ಲಿ ಫೆ. 9 ರಂದು ಸಿಪಿಐ(ಎಂ) ಮತ್ತು ಸಿಪಿಐ ನ ಕೇಂದ್ರ ಸಮಿತಿ ಕರೆಯ ಮೇರೆಗೆ ತಾಲೂಕಿನ 10 ಗ್ರಾಮ ಪಂಚಾಯತ್ ಕಛೇರಿ ಎದುರು ಪಕ್ಷದ ನೂರಾರು ಕಾರ್ಯ ಕರ್ತರು ಬೆಲೆ ಎರಿಕೆ ವಿರುದ್ಧ ಧರಣಿ ಸತ್ಯಾಗ್ರಹ ನಡೆಸಿ ಕೇಂದ್ರದ ಬೆಲೆ ಏರಿಕೆ ನೀತಿಯನ್ನು ವಿರೋಧಿಸಿದರು. ಇದಕ್ಕೂ ಮುಂಚೆ 80 ಹಳ್ಳಿಗಳಲ್ಲಿ ಕರಪತ್ರಗಳ ಮೂಲಕ ಬಿಜೆಪಿಯ ಜನವಿರೋಧಿ ಕೃತ್ಯಗಳನ್ನು ವಿವರಿಸಿದರು.

ಗಾಣದಾಳ, ನಾಗಡದಿನ್ನಿ, ಜಾಲಹಳ್ಳಿ, ಚಿಂಚೋಡಿ, ಕೆ. ಇರಬಗೇರ ಹೆಚ್. ಸಿದ್ಧಾಪುರ, ಮಸರಕಲ್, ಜೇರಬಂಡಿ ಮೂಷ್ಠೂರು ಮತ್ತು ಹಿರೇಬೂದೂರ ಕಛೇರಿಗಳ ಮುಂದೆ ಕ್ರಮವಾಗಿ ಬಿ.ಎಸ್. ದೇಸಾಯಿ, ಚಂದ್ರ ಶೇಖರ ನಾಡಗೌಡ ಪಿ. ಗಿರಿಯಪ್ಪ, ಮಲ್ಲಯ್ಯ ಜಾಲಹಳ್ಳಿ, ಅಪ್ಪಯ್ಯ ನಾಯಕ ಚಂದ್ರಪ್ಪ ಬುದ್ದಿನ್ನಿ, ಬಸವಲಿಂಗಪ್ಪ ವೈರಾಮಮ್ಮ, ರಾಮ ಲಿಂಗಪ್ಪ ಗೌಡ ಮತ್ತು ಚನ್ನಪ್ಪಬಾಳೆ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು.

ಭಟ್ಕಳ ವಿವಿಧ ಪ್ರದೇಶದಲ್ಲಿ ಡಿ.ವೈ.ಎಫ್.ಐ. ಘಟಕ ರಚನೆ

ಭಟ್ಕಳ: ಭಾರತ ಪ್ರಜಾಸತ್ತಾತ್ಮಕ ಯುವಜನ ಫೇಢರೇಶನ್‌ನ ಕೋಣಾರ ಗ್ರಾಮ ಘಟಕ ಸಭೆ ಇತ್ತೀಚಿಗೆ ಎಸ್. ಟಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ಜರುಗಿತು. ರಾಜ್ಯ ಅಧ್ಯಕ್ಷ ಶಾತಾರಾಂನಾಯಕ ಮತ್ತು ಕಾರ್ಮಿಕ ಮುಖಂಡ ಸುಭಾಸ ಕೊಪ್ಪಿಕರ ಸಭೆಯನ್ನುದ್ದೇಶಿ ಮಾತನಾಡಿದರು

ಈ ಗ್ರಾಮ ಭಟ್ಕಳ ತಾಲೂಕಿನ ಅತಿ ಹಿಂದುಳಿದ ಕುಗ್ರಾಮವಾಗಿದ್ದು ಸರಿಯಾದ ರಸ್ತೆ ಸಂಪರ್ಕವಿಲ್ಲದೇ ನಾಗರಿಕರು ಪರದಾಡುವಂತಾಗಿದ್ದು ಈ ಬಗ್ಗೆ ಚಳುವಳಿ ನಡೆಸಲು ನಿರ್ಧರಿಸಲಾಯಿತು.

ಮುಂಡೇಶ್ವರ ಪ್ರದೇಶದಲ್ಲೂ ಡಿ.ವೈ.ಎಫ್.ಐ. ಸಬೆ ನಡೆದು ಘಟಕ ರಚಿಸಲಾಗಿದೆ ಭಟ್ಕಳ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಘಟಕ ರಚನೆ ಪ್ರಯತ್ನ ನಡೆದಿದ್ದು ಮಾರ್ಚ್ 7 ರಂದು ಹೊನ್ನಾವರದಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರಥಮ ಸಮ್ಮೇಳನ ವಿವಿಧ ಘಟಕಗಳ ಪ್ರತಿನಿಧಿಗಳ ಆಯ್ಕೆ ನಡೆಯುತ್ತಿದೆ.

ಬಿಜೆಪಿ ಸರಕಾರದ ಸಂಪೂರ್ಣ ದಿವಾಳಿಕೋರತನವನ್ನು ಹೊರಗೆಡಹಿದ

ರಾಷ್ಟ್ರಪತಿ ಭಾಷಣ

ಪ್ರತಿವರ್ಷ ಬಜೆಟ್ ಅಧಿವೇಶನದ ಆರಂಭದಲ್ಲಿ ರಾಷ್ಟ್ರಪತಿಗಳು ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ಮಾಡುವ ಭಾಷಣ ಸಾಮಾನ್ಯವಾಗಿ ಪ್ರಸಕ್ತ ಸರಕಾರದ ಧೋರಣೆಗಳನ್ನು, ಕಾರ್ಯಕ್ರಮಗಳನ್ನು ಬಿಂಬಿಸುವ ಭಾಷಣ. ಈ ದೃಷ್ಟಿಯಲ್ಲಿ ಈ ಬಾರಿಯ ರಾಷ್ಟ್ರಪತಿ ಭಾಷಣ ದಿಶಾಹೀನವಾಗಿದ್ದು, ಗೊಂದಲಮಯವಾಗಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಈಗಿನ ನರಬೇಕಲ ಸರಕಾರದಿಂದ ಬೇರೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ ಎನ್ನುತ್ತಾ ಈ ಭಾಷಣದ ವಿಶ್ಲೇಷಣೆ ನಡೆಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು

ಈ ವರ್ಷ ಭಾರತದ ರಾಷ್ಟ್ರಪತಿಗಳು ಸಂಸತ್ತಿನ ಎರಡೂ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಗಮನಾರ್ಹ ಅಂಶವೆಂದರೆ ಅದರಲ್ಲಿ ಒಂದು ನಿರ್ದಿಷ್ಟ ದಿಕ್ಕಿನ ಅಭಾವ ಈ ರಾಷ್ಟ್ರಪತಿಗಳ ಭಾಷಣ ಪ್ರಸಕ್ತ ಸರಕಾರದ ಧೋರಣೆಗಳು, ಕಾರ್ಯಕ್ರಮಗಳನ್ನು ಬಿಂಬಿಸುವ ಒಂದು ಸಾಂಪ್ರದಾಯಿಕ ಭಾಷಣ. ಆದ್ದರಿಂದ ಸಹಜವಾಗಿಯೇ ಈ ವರ್ಷದ ರಾಷ್ಟ್ರಪತಿ ಭಾಷಣ ಬಿಜೆಪಿ-ನೇತೃತ್ವದ ಸಮ್ಮಿಶ್ರ ಸರಕಾರದಲ್ಲಿ ರಾರಾಜಿಸುತ್ತಿರುವ ಗೊಂದಲವನ್ನು ಎತ್ತಿ ತೋರಿದೆ. ಪ್ರಶ್ನೆಗಳನ್ನು ನಿರ್ದಿಷ್ಟವಾಗಿ ಮುಂದಿಟ್ಟು ಆದ್ಯತೆಗಳನ್ನು ಗುರುತಿಸದೆ ಅದು ಭ್ರಮೆಗಳನ್ನು ಸೃಷ್ಟಿಸಲು, ಸರಕಾರದ ವಿಫಲತೆಗಳನ್ನು, ದುಷ್ಕೃತ್ಯಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದೆ. ಕೇವಲ ಅಧಿಕಾರವನ್ನು ಹಂಚಿಕೊಳ್ಳಲು ಒಟ್ಟು ಸೇರಿದ ರಾಜಕೀಯ ಪಕ್ಷಗಳ ಇಂತಹ ಸಮ್ಮಿಶ್ರಣದಿಂದ ಇನ್ನೇನನ್ನು ತಾನೇ ನಿರೀಕ್ಷಿಸಲು ಸಾಧ್ಯ?

ಸರ್ವತೋಮುಖ ಬಿಕ್ಕಟ್ಟು

ಬಿಜೆಪಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಳೆದ ಹನ್ನೊಂದು ತಿಂಗಳು ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಜೀವನವನ್ನೆಲ್ಲಾ ವ್ಯಾಪಿಸಿದ ಸರ್ವತೋಮುಖ ಬಿಕ್ಕಟ್ಟನ್ನು ದೇಶ ಕಾಣುತ್ತಿದೆ.

'ಆಡಳಿತಈ ರಾಷ್ಟ್ರೀಯ ಅಜೆಂಡಾ' ಸರಕಾರದ ಧೋರಣಾ ದಸ್ತಾವೇಜು, ಅದನ್ನು 'ವಿಧೇಯತೆಯಿಂದ ಜಾರಿಗೆ ತರಲಾಗುತ್ತಿದೆ' ಎಂದು ರಾಷ್ಟ್ರಪತಿ ಭಾಷಣ ಹೇಳಿಕೊಂಡಿದೆಯಾದರೂ ನಿಜ ಸಂಗತಿ ಬೇರೆಯೇ. ರಾಷ್ಟ್ರೀಯ ಅಜೆಂಡಾ ಎಂಬುದು ಬಿಜೆಪಿ ತಯಾರಿಸಬೇಕಾಗಿ ಬಂದ ಒಂದು ರಾಜಿ ದಸ್ತಾವೇಜು. ಆದರೆ ಕಳೆದ ಹನ್ನೊಂದು ತಿಂಗಳಲ್ಲಿ ಈ ಅಜೆಂಡಾದ ಜಾರಿಗಿಂತ ಕಾವಿ ಪಡೆಗಳ ಬಚ್ಚಿಟ್ಟ ಅಜೆಂಡಾ ಜಾರಿಯಾದುದನ್ನೇ ನಾವು ಕಂಡಿದ್ದೇವೆ.

"ಹಲವು ರಂಗಗಳಲ್ಲಿ ಜನಗಳ ಕಲ್ಯಾಣಕ್ಕೆ ಆರ್ಥಿಕ ಬೆಳವಣಿಗೆಯ ವೇಗವರ್ಧನೆಗೆ, ಆಂತರಿಕ-ಹೊರಗಿನ ಭದ್ರತೆಯನ್ನು ಬಲಪಡಿಸಲು, ಭಾರತದ ನೆರೆದೇಶಗಳೊಂದಿಗೆ ಮತ್ತು ಇತರ ದೇಶಗಳೊಂದಿಗೆ ಗೆಳೆತನದ, ಸಹಕಾರದ ಆಳವಾದ ಸಂಬಂಧಗಳನ್ನು ಬೆಳೆಸಲು ನಿರ್ಣಾಯಕವಾಗಿ ಕಾರ್ಯಪ್ರವೃತ್ತವಾಗಿದೆ. ಇವೆಲ್ಲಾ ಒಟ್ಟಾಗಿ ಭಾರತೀಯರಲ್ಲಿ ಹೊಸದೊಂದು ಆತ್ಮವಿಶ್ವಾಸವನ್ನು ಉಂಟು ಮಾಡಿದೆ. ಪ್ರಸ್ತುತ ಮತ್ತು ಭವಿಷ್ಯದ ಸವಾಲು ಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿದೆ" ಎಂದಿದೆ ರಾಷ್ಟ್ರಪತಿ ಭಾಷಣ. ಮಾತಿನಲ್ಲೇನೋ ಶ್ಲಾಘನಾರ್ಹ ಸಂಗತಿ. ಆದರೆ ಈ ದಿಕ್ಕಿನಲ್ಲಿ ಸರಕಾರ ಕೈಗೊಂಡ ನಿರ್ದಿಷ್ಟ ಕ್ರಮಗಳೇನು? ಈ ಭಾಷಣ ಅದನ್ನು ವಿವರಿಸುಲ್ಲಿ ವಿಫಲವಾಗಿದೆ.

'ಜನಕಲ್ಯಾಣ'?

'ಜನಗಳ ಕಲ್ಯಾಣ'ಕ್ಕೆ ಈ ಸರಕಾರ ಕೈಗೊಂಡ ಕ್ರಮಗಳೇನು? ಜನಸಾಮಾನ್ಯರ ಕನಿಷ್ಟ ಅಗತ್ಯಗಳಾದ ಆಹಾರ, ಬಟ್ಟೆ, ವಸತಿ, ಆರೋಗ್ಯ ಇವನ್ನು ಪೂರೈಸಲು ಸರಕಾರ ಏನು ಕ್ರಮ ಕೈಗೊಳ್ಳಲಿದೆ ಎಂದು ನಿರ್ದಿಷ್ಟವಾಗಿ ಹೇಳದೆ "ನಮ್ಮ ಸಮಾಜದ ಅತಿ ಬಡ ವಿಭಾಗಗಳಿಗೆ ಸಾಮಾಜಿಕ ಸುರಕ್ಷಾ ಜಾಲವನ್ನು ಬಲಪಡಿಸಲು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲಾಗುವುದು" ಎಂದಷ್ಟೇ ಹೇಳಲಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ಸ್ಥಾನವನ್ನು ಉತ್ತಮಗೊಳಿಸುವುದು ತನ್ನ ಒಂದು ಆದ್ಯತೆಯ ಕೆಲಸ ಎಂದು ಸರಕಾರ ಹೇಳಿಕೊಂಡಿದೆ. ಆದರೆ 1991 ರಿಂದ ಸಾಮಾಜಿಕ ವಲಯದಲ್ಲಿ ಸರಕಾರ ತನ್ನ ಜವಾಬ್ದಾರಿಯನ್ನು ತ್ಯಜಿಸುವ ಪ್ರಕ್ರಿಯೆಯನ್ನು ಈ ಸರಕಾರವೂ ಮುಂದುವರಿಸಿದೆ. "ಸಾಮಾಜಿಕ ವಲಯದ ಬೆಳವಣಿಗೆಗೆ ಹೆಚ್ಚಿನ ಹಣಕಾಸು ಸಂಪನ್ಮೂಲವನ್ನಷ್ಟೇ ಅವಲಂಬಿಸಿಲ್ಲ....." ಎಂಬ ರಾಷ್ಟ್ರಪತಿ ಭಾಷಣದ ಮಾತು ಈ ಸರಕಾರದ ನಿಜ ಆಶಯವೇನು ಎಂಬುದನ್ನು ಸ್ಪಷ್ಟಪಡಿಸಿದೆ.

"ಗಂಭೀರ ಆರೋಗ್ಯ ಸವಾಲು ಅರ್ಥಾತ್ ಏಡ್ಸ್‌ನ ತ್ವರಿತ ಹರಡಿಕೆ" ಮೇಲೆ ಒಂದು ಪ್ಯಾರಾವನ್ನೇ ಕೊಟ್ಟಿರುವ ಈ ಭಾಷಣದಲ್ಲಿ ಕ್ಷಯ, ಮಲೇರಿಯಾ ಮತ್ತಿತರ ಕಾಯಿಲೆಗಳು ವ್ಯಾಪಕಗೊಳ್ಳುತ್ತಿರುವುದರ ಬಗ್ಗೆ ಪ್ರಸ್ತಾಪವೂ ಇಲ್ಲ. ಸರಕಾರದ ಆದ್ಯತೆಗಳೇನು ಎಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೇ?

ಆರ್ಥಿಕ ರಂಗದಲ್ಲಿ ಈ ಸರಕಾರ ನಿರ್ಣಾಯಕವಾಗಿ ಹೇಗೆ ಕಾರ್ಯಪ್ರವೃತ್ತವಾಗಿದೆ? ಭಾರತೀಯ ಉದ್ದಿಮೆ ಹಿಂಜರಿತ ಅನುಭವಿಸುತ್ತಿದೆ. 1998-99 ರ ಕೃಷಿ ಉತ್ಪಾದನೆ ಗುರಿ ತಲುಪಿಲ್ಲ. ಆಹಾರ ಧಾನ್ಯಗಳ ಉತ್ಪಾದನೆ ಏರಿಕೆ ದರ ಜನಸಂಖ್ಯೆ ಏರಿಕೆ ದರಕ್ಕಿಂತ ಕಮ್ಮಿಯಿದೆ. ಹಣಕಾಸು ಕೊರತೆ ಹೆಚ್ಚುತ್ತಿದೆ. ರಫ್ತು ಡಾಲರು ಬೆಲೆಗಳಲ್ಲಿ ತೀವ್ರವಾಗಿ ಇಳಿದಿದೆ. ಮುಕ್ತ ಮಾರುಕಟ್ಟೆಯ ಭಕ್ತ ಈ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ದೇಶೀ ಉತ್ಪಾದಕರನ್ನು, ಸ್ಥಳೀಯ ಉದ್ದಿಮೆಗಳನ್ನು ಬಲಿಗೊಟ್ಟು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶದ ಆರ್ಥಿಕವನ್ನು ಹೆಚ್ಚೆಚ್ಚು ತೆರೆದುಕೊಡುತ್ತಿದೆ.

ಭದ್ರತೆಯ ಹೆಸರಲ್ಲಿ

ಆಂತರಿಕ ಹಾಗೂ ಹೊರಗಿನ ಭದ್ರತೆಯನ್ನು ಉತ್ತಮಪಡಿಸಲಾಗಿದೆ ಎಂದು ಹೇಳಿಕೊಂಡಿದೆ ಸರಕಾರ. ಕಾಶ್ಮೀರದಲ್ಲಿ ಪರಿಸ್ಥಿತಿ ಉತ್ತಮಗೊಂಡಿದೆ ಎಂದು ಹೇಳಿಕೊಂಡಿವೆ. ನಿಜ. ಆದರೆ ಇದು ಬಿಜೆಪಿ ನೇತೃತ್ವದ ಸರಕಾರದಿಂದಾಗಿ ಅಲ್ಲ. ಸಂಯುಕ್ತ ರಂಗ ಅಧಿಕಾರದಲ್ಲಿದ್ದಾಗ ಕಾಶ್ಮೀರದಲ್ಲಿ ನಡೆಸಿದ ಚುನಾವಣೆ ಇದಕ್ಕೆ ದಾರಿ ಮಾಡಿಕೊಟ್ಟಿತ್ತು. ಈಶಾನ್ಯ ಭಾಗದಲ್ಲಿನ ಪರಿಸ್ಥಿತಿಯೇನು? ಅಲ್ಲೇನಾದರೂ ಸುಧಾರಣೆಯಿದೆಯೇ? ತ್ರಿಪುರಾದಲ್ಲಿ ಎಡರಂಗ ಸರ್ಕಾರ ಉಗ್ರಗಾಮಿ ಸಂಘಟನೆಗಳೆದುರು ತೀವ್ರ ಹೋರಾಟದಲ್ಲಿ ತೊಡಗಿರುವಾಗ ಕೇಂದ್ರ ಸರಕಾರ ಅದಕ್ಕೆ ಸಾಕಷ್ಟು ನೆರವು ಒದಗಿಸಲು ನಿರಾಕರಿಸಿಕೊಂಡೇ ಬಂದಿದೆ. ಇದು ಆಂತರಿಕ ಭದ್ರತೆಯನ್ನು ಉತ್ತಮಪಡಿಸುವ ರೀತಿಯಂತೂ ಖಂಡಿತ ಅಲ್ಲ.

ಇನ್ನು ಹೊರಗಿನ ಭದ್ರತೆಯ ವಿಷಯದಲ್ಲಂತೂ ಸರಕಾರದ ದೃಷ್ಟಿಕೋಣವೇ ಬದಲಾಗಿದೆ. ಕಳೆದ ಮೇ ತಿಂಗಳಲ್ಲಿ ಪೋಖ್ರಾನ್ ಪರೀಕ್ಷಣೆಯ ನಂತರ ಇದು ಸ್ಪಷ್ಟವಾಯಿತು. ಪೋಖ್ರಾನ್ ಪರೀಕ್ಷಣೆಗಳ ನಂತರ

ಪುಟ 5 ಕ್ಕೆ

ಭಾರತದ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ತಳಪಾಯದ ರಕ್ಷಣೆಗೆ ಒಂದು ಕೋಟಿ ಜನಗಳಿಂದ ಸಹಿ ಸಂಗ್ರಹ

ಕೋಮುವಾದದ ವಿರುದ್ಧ ಜನತಾ ಸಮಾವೇಶ ನಿರ್ಧಾರ

ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಫೆಬ್ರವರಿ ೨೦ ರಂದು ಎಡಪಕ್ಷಗಳ ಮುತುವರ್ಜಿಯಿಂದ ನಡೆದ "ಕೋಮುವಾದದ ವಿರುದ್ಧ ಜನತಾ ಸಮಾವೇಶ" ದೇಶಾದ್ಯಂತ ಒಂದು ಕೋಟಿ ಸಹಿ ಸಂಗ್ರಹ ಮಾಡಲು ನಿರ್ಧರಿಸಿದೆ. ಈ ಮೂಲಕ ಕಳೆದ ಹನ್ನೊಂದು ತಿಂಗಳಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಬಂದ ಮೇಲೆ ಅಲ್ಪಸಂಖ್ಯಾತರ ಮೇಲಿನ ಅಭೂತಪೂರ್ವ ಹಲ್ಲೆಗಳಿಂದ ತೀವ್ರ ಬೆದರಿಕೆಗೊಳಗಾಗಿರುವ ದೇಶದ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ತಳಪಾಯವನ್ನು ಉಳಿಸಿ, ಬಲಿಷ್ಠಗೊಳಿಸಲು ದೇಶದ ಜನತೆ ವಚನಬದ್ಧರು ಎಂದು ಈ ಸಮಾವೇಶ ಮತ್ತೆ ಒತ್ತಿ ಹೇಳಿದೆ.



ಕೇಂದ್ರದಲ್ಲಿ ಬಿಜೆಪಿ ಅಧಿಕಾರದ ಲಗಾಮು ಹಿಡಿದ ಮೇಲೆ ವಿವಿಧ ಕಾವಿ ಪಡೆಗಳ ಅನಿಷ್ಟಕಾರೀ ಚಟುವಟಿಕೆಗಳಿಗೆ ಬಹಿರಂಗವಾಗಿಯೇ ಪ್ರೋತ್ಸಾಹ, ನೆರವು ನೀಡುತ್ತಿರುವುದರಿಂದ ಸ್ಫುರಣಗೊಂಡಿರುವ ಕೋಮುವಾದದ ವಿರುದ್ಧ ಮುಖಾಮುಖಿ ಹೋರಾಟಕ್ಕಿಳಿಯಲು ಸಮಾವೇಶದಲ್ಲಿ ಭಾಗವಹಿಸಿದ ವಿಭಿನ್ನ ವಿಭಾಗಗಳ ಜನರು ಪ್ರತಿಜ್ಞೆಗೈದರು. ಮೂರು ಗಂಟೆಗಳ ಕಾಲ ನಡೆದ ಸಮಾವೇಶ ಸರ್ವಸಮ್ಮತಿಯಿಂದ ಒಂದು ಠರಾವನ್ನು ಅಂಗೀಕರಿಸಿ (ಬಾಕ್ಸ್ ನೋಡಿ) ಸ್ವತಂತ್ರ ಭಾರತ ಎದುರಿಸುತ್ತಿರುವ ಅತ್ಯಂತ ಗಂಭೀರ ಸವಾಲನ್ನು ಐಕ್ಯತೆಯಿಂದ ವಿಫಲ ಗೊಳಿಸಲು ಪ್ರತಿಜ್ಞೆಗೈದರು. ಸಮಾವೇಶ ಮುಗಿದ ಕೂಡಲೇ ಸಮಾವೇಶದಲ್ಲಿ ಭಾಗವಹಿಸಿದ ರಾಜಕೀಯ ಪಕ್ಷಗಳ ಮುಖಂಡರ ಹನ್ನೊಂದು ಸದಸ್ಯರ ನಿಯೋಗವೊಂದು ರಾಷ್ಟ್ರಪತಿ ಭವನಕ್ಕೆ ತೆರಳಿ ರಾಷ್ಟ್ರಪತಿಗಳನ್ನು ಭೇಟಿಯಾಗಿ ಸಮಾವೇಶದ ಘೋಷಣೆಯನ್ನು ಸಲ್ಲಿಸಿತು. ಈ ನಿಯೋಗದಲ್ಲಿ ಸೀತಾರಾಂ ಯೆಚೂರಿ (ಸಿಪಿಐ(ಎಂ), ಎ.ಬಿ.ಬರ್ಧನ್ (ಸಿಪಿಐ), ದೇವವ್ರತ ಬಿಸ್ವಾಸ್ (ಫಾರ್ವರ್ಡ್ ಬ್ಲಾಕ್), ಪಂಕಜಾಕ್ಷನ್ (ಆರ್.ಎಸ್.ಪಿ.), ಮಾಜಿ ಪ್ರಧಾನಿ ಐ.ಕೆ.ಗುಜ್ರಾಲ್, ಮುರುಸೋಳಿ ಮಾರನ್(ಡಿಎಂಕೆ), ಜಿ.ಕೆ. ಮೂಪನಾರ್(ಟಿ.ಎಂ.ಸಿ.), ಮುಲಾಯಂ ಸಿಂಗ್ ಯಾದವ್ (ಸಮಾಜವಾದಿ ಪಾರ್ಟಿ), ಲಾಲೂ ಪ್ರಸಾದ್ ಯಾದವ್(ಆರ್.ಜೆ.ಡಿ), ಬೀರೇಂದ್ರ ಕುಮಾರ್ ವೈಶ್ಯ(ಎ.ಜಿ.ಪಿ.) ಹಾಗೂ ಸೈಫುದ್ದೀನ್ ಸೋಜ್ (ನ್ಯಾಶನಲ್ ಕಾನ್ಫರೆನ್ಸ್) ಇದ್ದರು.

ಎ.ಬಿ.ಬರ್ಧನ್, ದೇಬಬ್ರತ್ ಬಿಸ್ವಾಸ್, ಪಂಕಜಾಕ್ಷನ್ ಮತ್ತು ಸೀತಾರಾಂ ಯೆಚೂರಿಯವರಿದ್ದ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟ ಸಮಾವೇಶದ ಆರಂಭಿಕ ಭಾಷಣವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಕೊಡಬೇಕಾಗಿತ್ತು. ಅವರಿಗೆ ಕಣ್ಣಿನ ಗಾಯಕ್ಕಾಗಿ ಶಸ್ತ್ರಚಿಕಿತ್ಸೆ ನಡೆದದ್ದರಿಂದ ಅವರ ಭಾಷಣವನ್ನು ಸೀತಾರಾಂ ಯೆಚೂರಿ ಯವರು ಓದಿದರು. ಕೋಮುವಾದಿ ಬೆದರಿಕೆ ಬಿಜೆಪಿ 18 ಪಕ್ಷಗಳ ಊರುಗೋಲು ಗಳಿಂದ ಅಧಿಕಾರಕ್ಕೆ ಬಂದ ನಂತರದ ಕಳೆದ ಹನ್ನೊಂದು ತಿಂಗಳಲ್ಲಿ ಹಲವು ಪಟ್ಟು ಹೆಚ್ಚಿದೆ ಎಂದು ಎಚ್ಚರಿಸಿದ ಸುರ್ಜಿತ್ ಪರಿಸ್ಥಿತಿ ಅಲ್ಪ ಅವಧಿಯಲ್ಲೇ ವಿಪರೀತ ಹದಗೆಟ್ಟಿತು ಎಂದು

ಪುಟ 8ಕ್ಕೆ

ಸಮಾವೇಶದ ಠರಾವು

ಬಿಜೆಪಿ-ನೇತೃತ್ವದ ಸರಕಾರ ವಾಸ್ತವವಾಗಿ ಹಿಂಸಾತ್ಮಕ ಅಪರಾಧ ಎಸಗುತ್ತಲೇ ಇರುವ ವಿಹೆಚ್‌ಪಿ, ಭಜರಂಗದಳ ಮತ್ತು ಇತರೆ ಆರ್.ಎಸ್.ಎಸ್. ಗೆ ಸಂಬಂಧ್ಧ ಸಂಘಟನೆಗಳಿಗೆ ಆಶ್ರಯ ನೀಡುತ್ತಿದೆ. ಇತ್ತೀಚೆಗೆ ಗುಜರಾತ್, ಒರಿಸ್ಸಾ ಮತ್ತಿತರ ಕಡೆ ಕ್ರೈಸ್ತ ಅಲ್ಪಸಂಖ್ಯಾತರ ವಿರುದ್ಧ ಇದನ್ನು ಕಂಡಿದ್ದೇವೆ. ಇದರ ಬಗ್ಗೆ ಎಷ್ಟೇ ಸಾರ್ವಜನಿಕ ಆಕ್ರೋಶ ವ್ಯಕ್ತವಾದರೂ ಈ ಶಕ್ತಿಗಳು ನಮ್ಮ ಸಮಾಜವನ್ನು ಕೊಳ್ಳೆ ಹೊಡೆಯುವುದನ್ನು ಮುಂದುವರಿಸಲು ಏನೊಂದು ಹಿಂಜರಿಕೆ ತೋರುವಂತೆ ಕಾಣಿಸುತ್ತಿಲ್ಲ. ಕೋಮು ವಿಭಜನೆಯನ್ನು ಆಳಗೊಳಿಸುವಲ್ಲಿ ವಿಭಿನ್ನ ನಂಬಿಕೆಗಳ ಜನಗಳ ನಡುವಿನ ಸಾಮಾಜಿ ಸಾಮರಸ್ಯವನ್ನು ಛಿದ್ರಗೊಳಿಸುವಲ್ಲಿ ಮತ್ತು ತತ್ಪರಿಣಾಮವಾಗಿ ಉಂಟಾಗುವ ಅಭದ್ರತೆಯಲ್ಲಿ ಕೇಂದ್ರ ಸರ್ಕಾರದ ಶಾಮೀಲು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಭೀರ ಅಪಾಯವೊಡ್ಡಿದೆ.

ದೇಶದ ಐಕ್ಯತೆಯನ್ನು ದೇಶದ ಸಾಮಾಜಿಕ ಹಂದರದ ಸಮಗ್ರತೆಯನ್ನು ಛಿದ್ರ-ವಿಚ್ಛಿದ್ರಗೊಳಿಸುವ ಇಂತಹ ಗಂಭೀರ ಸವಾಲನ್ನು ಹಿಂದೆಂದೂ ಭಾರತ ಎದುರಿಸಿರಲಿಲ್ಲ.

ಬ್ರಿಟಿಶರು ತಮ್ಮ ಕುಖ್ಯಾತ ಒಡೆದು ಆಳುವ ನೀತಿಯ ಮೂಲಕ ತತ್ಪರತೆಯಿಂದ ಪೋಷಿಸಿದ ಕೋಮುವಾದಿ ವಿಷಾಣು ಪ್ರಸಾರಕ್ಕೆ ದೇಶದ ಒಳಗಿನ ಕೋಮುವಾದಿ ಶಕ್ತಿಗಳಿಂದ ಅವರು ಮೆಚ್ಚುವ ರೀತಿಯ ಬೆಂಬಲ ದೊರಕ್ಕಿತ್ತು. ಸುಮಾರು ಒಂದು ಶತಮಾನದ ಕಾಲ ದ್ವೇಷ ಮತ್ತು ವೈರ ಭಾವ ಅಧಿಕೃತ ಧೋರಣೆಯಾಗಿ ರಾಜಾಶ್ರಯ ಪಡೆಯಿತು. ಕೊನೆಗೆ ಇದು ನಮ್ಮ ದೇಶದ ದುರಂತಮಯ ಹಾಗೂ ನೋವಿನ ವಿಭಜನೆಯಲ್ಲಿ ಪರ್ಯಾವಸಾನ ಗೊಂಡಿತು. ನಮ್ಮ ಜನತೆ ಎಲ್ಲಾ ಕೋಮುವಾದಿ ತಂತ್ರಗಳನ್ನು ವಿಫಲಗೊಳಿಸಿ ಧರ್ಮನಿರಪೇಕ್ಷತೆ ಯನ್ನು ನಮ್ಮ ಗಣತಂತ್ರ ಸಂವಿಧಾನದ ಒಂದು ಮೂಲಭೂತ ಲಕ್ಷಣವೆಂದು ಅಂಗೀಕರಿಸಿದರು. ಅತ್ಯುನ್ನತ ದೇಶಪ್ರೇಮಿ ಹುರುಪಿನಿಂದ ನಾವು ನಮ್ಮ ಮಹಾನ್ ದೇಶದ ಐಕ್ಯತೆ ಸಮಗ್ರತೆ ಮತ್ತು ಧರ್ಮನಿರಪೇಕ್ಷ ಹಂದರವನ್ನು ಬಲಿಷ್ಠಗೊಳಿಸಿದೆವು. ನಾವು ಪಡೆದಿರುವ ಹೆಮ್ಮೆಯ ಪರಂಪರೆ ಇದು.

ಆದರೆ ಈಗ ಪ್ರಸಕ್ತ ಬಿಜೆಪಿ ನೇತೃತ್ವದ ಸರಕಾರದ ಪ್ರತಿಷ್ಠಾಪನೆಯ ನಂತರ ಉನ್ಮತ್ತ ಕೋಮುವಾದಿ ಅಸಹಿಷ್ಣುತೆಯನ್ನು ಅನುಸರಿಸಲಾಗುತ್ತದೆ. ಕೋಮುವಾದಿ ಶಕ್ತಿಗಳು ಅಂಗೀಕರಿಸಿರುವ ಅಪಪ್ರಚಾರ, ಕಟ್ಟುಕಥೆ ಮತ್ತು ಅಮಾನವೀಯ ಹಿಂಸಾಚಾರದ ಫ್ಯಾಸಿಸ್ಟ್ ವಿಧಾನಗಳು ನಮ್ಮ ಗಣತಂತ್ರ ಸಂವಿಧಾನದ ಒಂದು ಬಹಿರಂಗ ಉಲ್ಲಂಘನೆಯಷ್ಟೇ ಅಲ್ಲ, ಭಾರತದ ಇಡೀ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಸೌಧದ ಮೇಲೆ ಮಾಡಿರುವ ಒಂದು ದುಷ್ಟ ಹಲ್ಲೆ; ಅಲ್ಲದೆ ವಿಶ್ವಾದ್ಯಂತ ಭಾರತದ ಪ್ರತಿಷ್ಠೆಗೆ ಮಸಿ ಬಳಿದಿದೆ.

ತಮ್ಮನ್ನು ಧರ್ಮನಿರಪೇಕ್ಷರೆಂದು ಕರೆದುಕೊಳ್ಳುವ ಬಿಜೆಪಿ ನೇತೃತ್ವದ ಸರಕಾರದ ಕೆಲವು ಭಾಗೀದಾರರು ಕೋಮುವಾದಿ ಮತ್ತು ಫ್ಯಾಸಿಸ್ಟ್ ಶಕ್ತಿಗಳನ್ನು ಬಲಿಷ್ಠಗೊಳಿಸುವಲ್ಲಿ ತಮ್ಮ ಕಾಣಿಕೆ ನೀಡುತ್ತಿದ್ದಾರೆ.

ಅಧಿಕೃತವಾಗಿ ಖಂಡನೆಯ ಹೇಳಿಕೆಗಳೇನೇ ಇರಲಿ

ನಾವು, ಭಾರತದ

ಜನತೆ ಭಾರತೀಯ ಗಣತಂತ್ರದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ತಳಪಾಯವನ್ನು ಕಾಪಾಡಿ ಕೊಳ್ಳಲು ಮತ್ತು ಬಲಪಡಿಸಲು ಕಂಕಣಬದ್ಧರು ಎಂದು ಪುನರುಚ್ಚರಿಸುತ್ತೇವೆ;

ಹಲವಾರು ಶತಮಾನಗಳಲ್ಲಿ ವಿಕಾಸಗೊಂಡಿರುವ ನಮ್ಮ ಬಹುಮುಖೀ ಹಾಗೂ ಸಮನ್ವಯದ ನಾಗರಿಕತೆಯ ಪರಂಪರೆಯನ್ನು ಕಾಯ್ದುಕೊಳ್ಳ ವಚನಬದ್ಧರಾಗುತ್ತೇವೆ.

ಇಂತಹ ದುಷ್ಟ ಶಕ್ತಿಗಳ ಧ್ವಂಸಕಾರ್ಯಗಳಿಂದ ನಮ್ಮ ತಾಯ್ನಾಡನ್ನು ರಕ್ಷಿಸಲು, ಅದರ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳಲು ದೃಢ ನಿರ್ಧಾರ ಮಾಡಿದ್ದೇವೆ

ಮತ್ತು ಅತ್ಯುನ್ನತ ದೇಶಪ್ರೇಮದ ಹುರುಪಿನಿಂದ

ಸ್ವತಂತ್ರ ಭಾರತ ಹಿಂದೆಂದೂ ಎದುರಿಸದಿರುವ ಗಂಭೀರ ಸವಾಲನ್ನು ಎದುರಿಸಲು ಮತ್ತು ಸೋಲಿಸಲು ಐಕ್ಯತೆಯಿಂದ ಪ್ರತಿಜ್ಞೆ ಗೈಯುತ್ತೇವೆ.

ಪುಟ 4 ರಿಂದ

ಹೊರಗಿನ ಬೆದರಿಕೆ ಕಮ್ಮಿಯಾಗಿದೆ ಎಂದು ಸರಕಾರ ಹೇಳಿಕೊಳ್ಳುವಂತಿದೆ. ಪರೀಕ್ಷಣೆಗಳನ್ನು ಸಮರ್ಥಿಸಿಕೊಳ್ಳಲು ಕೊಟ್ಟ ಕಾರಣ ಇದೇ ತಾನೆ?

"ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿಯಲು ಸರಕಾರ ಕಟಿಬದ್ಧವಾಗಿದೆ" ಎಂದು ರಾಷ್ಟ್ರಪತಿ ಭಾಷಣ ಹೇಳಿದರೂ ನಿಜ ಸಂಗತಿ ಹೇಳುತ್ತಿರುವುದು ಬೇರೆಯೇ. ಬಾಬ್ರಿ ಮಸೀದಿ ಇದ್ದಲ್ಲಿ ದೇವಸ್ಥಾನ ಕಟ್ಟುವ ಕೆಲಸಕ್ಕೆ ತಯಾರಿ ನಡೆಧಿದೆಯಷ್ಟೇ ಅಲ್ಲ, ಎಲ್ಲಾ ವಲಯಗಳಲ್ಲಿ ತನ್ನ ಅಜೆಂಡಾವನ್ನು ಕಳ್ಳತನದಿಂದ ತರುವ ಬಿಜೆಪಿ ಪ್ರಯತ್ನ ನಡೆದಿದೆ. ಕಳೆದ ವರ್ಷ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿನ ಪ್ರಯತ್ನ ಒಂದು ಉದಾಹರಣೆಯಷ್ಟೆ.

ಈಗ ಹೊಸದೊಂದು ಆಯಾಮವನ್ನು ಇದಕ್ಕೆ ಸೇರಿಸಲಾಗಿದೆ - ಗುಜರಾತ್, ಮಧ್ಯಪ್ರದೇಶ, ಒರಿಸ್ಸಾಗಳಲ್ಲಿ ಭಜರಂಗ ದಳ ಮತ್ತಿತರ ಆರ್.ಎಸ್.ಎಸ್. ಸಂಘಟನೆಗಳಿಂದ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಧಾಳಿಗಳು ರಾಷ್ಟ್ರಪತಿಗಳ ಭಾಷಣದ ಈ ಬಗ್ಗೆ ದಿವ್ಯ ಮೌನ ತಾಳಿದೆ - ಆತಂಕವನ್ನಷ್ಟೇ ವ್ಯಕ್ತಪಡಿಸಿದೆ. ಈ ಮೌನ ಉದ್ದೇಶಪೂರ್ವಕವಾದದ್ದು. ಏಕೆಂದರೆ ಇಂತಹ ಚಟುವಟಿಕೆಗಳನ್ನು ನಡೆಸುತ್ತಿರುವ ಆರ್.ಎಸ್.ಎಸ್. ಮತ್ತದರ ಸಂಘಟನೆಗಳನ್ನು ರಕ್ಷಿಸಲು ಬಿಜೆಪಿ ನೇತೃತ್ವದ ಸರಕಾರವೇ ಧಾವಿಸಿದೆ.

ಈರುಳ್ಳಿಯ ಉದಾಹರಣೆ

ಕೃಷಿ ಸರಕುಗಳ ಬೆಲೆಗಳ ನಿರ್ವಹಣೆಯು ಬಗ್ಗೆ ರಾಷ್ಟ್ರಪತಿ ಭಾಷಣದಲ್ಲಿ ಪ್ರಸ್ತಾಪವಿದೆ. ಕೃಷಿ ಲಾಗುವಾಡುಗಳ ಖರ್ಚುಗಳ ಏರಿಕೆ ಸಣ್ಣ ಮತ್ತು ಬಡ ರೈತರನ್ನು ಬಹಳವಾಗಿ ತಟ್ಟಿದ್ದರೆ ಇದು ವ್ಯಾಪಾರಸ್ಥರಿಗೆ, ಕಳ್ಳ ದಾಸ್ತಾನುಗಾರರಿಗೆ ಭಾರೀ ಪ್ರಯೋಜನ ತಂದಿದೆ. ಈರುಳ್ಳಿ ಇದಕ್ಕೊಂದು ಉದಾಹರಣೆ. ಇದರ ಬೆಲೆ ಸಾಮಾನ್ಯ ಬಳಕೆದಾರರ ಖರೀದಿ ಸಾಮರ್ಥ್ಯವನ್ನು ಮೀರಿಹೋಯಿತು. ಆದರೆ ಇದರಿಂದ ಸರಾಸರಿ ರೈತನಿಗೇನೂ ಪ್ರಯೋಜನ ಸಿಗಲಿಲ್ಲ. ಪ್ರಯೋಜನ ಪಡೆದದ್ದು ವ್ಯಾಪಾರಿಗಳು ಮತ್ತು ಕಳ್ಳದಾಸ್ತಾನುದಾರರು.

'ಉದ್ದಿಮೆರಂಗವನ್ನು ಅಧಿಕಾರಶಾಹಿ ಹತೋಟಿಗಳಿಂದ ಮುಕ್ತಗೊಳಿಸುವ' ಪ್ರಯತ್ನದಲ್ಲಿ ಈ ಸರಕಾರ ಕೆಲವು ಉದ್ದಿಮೆಗಳನ್ನು ಲೈಸೆನ್ಸ್ ಮುಕ್ತಗೊಳಿಸಿದೆಯಷ್ಟೇ ಅಲ್ಲ, ಸಾರ್ವಜನಿಕ ವಲಯವನ್ನು ಕಳಚಿಹಾಕಲು ಹೊರಟಿದೆ. ಲಾಭದಲ್ಲಿರುವ ಸಾರ್ವಜನಿಕ ವಲಯದ ಘಟಕಗಳು ಸರಕಾರದಿಂದ ತನ್ನ ಶೇರುಗಳನ್ನು ಮರು ಖರೀದಿಸುವಂತೆ, ತಮ್ಮ ಆಸ್ತಿಗಳ ಅಪಮೌಲ್ಯ ಮಾಡುವಂತೆ ಹೇಳಿದೆ.

ಈ ಸರಕಾರ ಪೇಟೆಂಟ್ ಮಸೂದೆ ಮತ್ತು ವಿಮಾ ವಲಯವನ್ನು ತೆರೆಯಲು ತಾನು ಬದ್ಧ ಎಂದೂ ಒತ್ತಿ ಹೇಳಿದೆ.

ವಿದೇಶಾಂಗ ನೀತಿಯಲ್ಲಿ

ಪಾಕಿಸ್ತಾನದೊಡನೆ ಸಂಬಂಧಗಳನ್ನು ಉತ್ತಮಪಡಿಸಲು ಪ್ರಧಾನ ಮಂತ್ರಿಗಳು ತೋರಿರುವ ಮುತುವರ್ಜಿ ಸ್ವಾಗತಾರ್ಹ. ಲಾಹೋರಿಗೆ ಪ್ರಧಾನಮಂತ್ರಿ ವಾಜಪೇಯಿಯವರ ಭೇಟಿ ಹಾಗೂ ಪಾಕಿಸ್ತಾನದ ಪ್ರಧಾನ ಮಂತ್ರಿಗಳೊಂದಿಗೆ ನಡೆಸಿದ ಚರ್ಚೆ ಪಾಕಿಸ್ತಾನದೊಂದಿಗೆ ಮಾತುಕತೆಯನ್ನು ಮುಂದುವರೆಸಲು ಒಂದು ಅನುಕೂಲಕರ ವಾತಾವರಣ ಸೃಷ್ಟಿಸಲು ನೆರವಾಗಬೇಕು. ನಮ್ಮ ಪಕ್ಷ ಒಂದೆಡೆ ಕಾಶೀರದಲ್ಲಿ ಸೇರಿದಂತೆ ಎಲ್ಲಾ ವಿವಾದಗಳನ್ನು ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳುತ್ತಲೇ ಹೆಚ್ಚೆಚ್ಚು ವ್ಯಾಪಾರ, ಸಾಂಸ್ಕೃತಿಕ ಮತ್ತು ಜನಗಳ ನಡುವಿನ ಸಂಪರ್ಕಗಳ ಮೂಲಕ ಪಾಕಿಸ್ತಾನದೊಂದಿಗೆ ಸಂಬಂಧಗಳನ್ನು ಸುಧಾರಿಸಬೇಕು ಎಂದು ಸತತವಾಗಿ ಹೇಳಿಕೊಂಡು ಬಂದಿದೆ.

ಪೋಖ್ರಾನ್ ಪರೀಕ್ಷಣೆ, ಅದಕ್ಕೆ ಪ್ರತಿಯಾಗಿ ಪಾಕಿಸ್ತಾನೀ ಪರೀಕ್ಷಣೆಗಳು ಪರಿಸ್ಥಿತಿಯನ್ನು ಕ್ಲಿಷ್ಟಗೊಳಿಸಿದವು. ಲಾಹೋರ್ ಮಾತುಕತೆಗಳು ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯನ್ನು ತಪ್ಪಿಸುವುದು ಹೇಗೆ ಎಂದು ಪರಿಶೀಲಿಸಲಿಲ್ಲ. ಎರಡೂ ದೇಶಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ನೆಲೆಗೊಳಿಸುವುದಿಲ್ಲ ಎಂದು ನಿರ್ಧರಿಸಿದರೆ ಮಾತ್ರವೇ ಇದು ಸಾಧ್ಯ. ಅದೇ ರೀತಿ ಚೀಣಾದ ವಿಷಯದಲ್ಲೂ ಇಂತಹ ಮುತುವರ್ಜಿ ವಹಿಸಬೇಕು. ಚೀಣಾ ಭಾರತಕ್ಕೆ ಪ್ರಧಾನ ಬೆದರಿಕೆ ಎಂಬ ರಕ್ಷಣಾಮಂತ್ರಿ ಜಾರ್ಜ್ ಫರ್ನಾಂಡೀಸ್‌ರ ಕೆಟ್ಟ ಬೊಬ್ಬಾಟದ ನಂತರ ಈ ವಲಯದಲ್ಲಿ ಹಿನ್ನಡೆಯಾಗಿದೆ. ಈ ಹಿನ್ನೆಲೆಯಲ್ಲಿ ಚೀಣಾದೊಂದಿಗೆ ಸಂಬಂಧಗಳನ್ನು ಉತ್ತಮಪಡಿಸುವ ಬಗ್ಗೆ ಪರಿಶೀಲಿಸಬೇಕು.

ರಾಷ್ಟ್ರಪತಿ ಭಾಷಣ ಅಲಿಪ್ತ ಆಂದೋಲನಕ್ಕೆ ನಾವು ಬದ್ಧರು ಎಂದಿದೆ, ಪರಮಾಣು ಶಸ್ತ್ರಾಸ್ತ್ರಗಳ ಸಂಪೂರ್ಣ ನಿರ್ಮೂಲನದ ಬಗ್ಗೆ ಹೇಳಿದೆ. ಆದರೆ ಪೋಖ್ರಾನ್ ಪರೀಕ್ಷಣೆಗಳು ಭಾರತದ ದೀರ್ಘ ಕಾಲದ ವಿದೇಶಾಂಗ ನೀತಿಯನ್ನು ತಲೆಕೆಳಗು ಮಾಡಿದ ಹಿನ್ನೆಲೆಯಲ್ಲಿ ಇದನ್ನು ಒತ್ತಿಹೇಳಬೇಕು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸಂಯುಕ್ತ ರಂಗ ಸರಕಾರ ನಮ್ಮ ನೆರೆದೇಶಗಳೊಂದಿಗೆ ಸಂಬಂಧ ಸುಧಾರಣೆಗೆ ಅಪಾರ ಪ್ರಯತ್ನ ನಡೆಸಿತು. ಅದನ್ನು ಮುಂದೊಯ್ಯುವ ಬದಲು ಬಿಜೆಪಿ-ನೇತೃತ್ವ ಸರಕಾರ ಅಧಿಕಾರ ವಹಿಸಿಕೊಂಡಾಗ ಆ ಪ್ರಕ್ರಿಯೆಗೆ ಹಿನ್ನಡೆಯಾಯಿತು. ನಿಜವಾಗಿಯೂ ನಮ್ಮ ವಿದೇಶಾಂಗ ಮಂತ್ರಿಗಳು ದಿಲ್ಲಿ, ವಾಶಿಂಗ್ಟನ್ ನಡುವೆ ಓಡಾಡುತ್ತಾ, ಬೆನ್ನು ಬಾಗಿಸಿ ಅತ್ಯಂತ ಗುಪ್ತ ಮಾತುಕಗಳನ್ನು ನಡೆಸುತ್ತಿರುವ ದೃಶ್ಯ ಅತ್ಯಂತ ನಾಚಿಕೆಗೇಡಿನದ್ದು. ಅಂತರ್ರಾಷ್ಟ್ರೀಯ ರಂಗದಲ್ಲಿ ಭಾರತದ ಪ್ರತಿಷ್ಠೆಯನ್ನು ಹಾಳುಗೆಡವಲಾಯಿತು.

ರಣವೀರ ಸೇನೆಗೆ ಪೋಷಣೆ

ರಾಷ್ಟ್ರಪತಿಗಳ ಭಾಷಣದಲ್ಲಿ ಬಿಹಾರ ಮತ್ತು ಗೋವಾದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿದುದರ ಸಂದರ್ಭಗಳ ಬಗ್ಗೆ ವಿವರಣೆ ನೀಡುವ ಒಂದು ಪರಿಚ್ಛೇದವಿದೆ. ಜಹಾನಾಬಾದಿನಲ್ಲಿ ದಲಿತರ ಹತ್ಯೆಗಳ ನೆಪಮೊಡ್ಡಿ ಬಿಹಾರದಲ್ಲಿ 356ನೇ ಕಲಮನ್ನು ಸರಕಾರ ಬಳಸಿದ್ದು ಸ್ವಯಂವೇದ್ಯ. ಬಿಜೆಪಿ ನೇತೃತ್ವದ ಸರಕಾರ ಆರ್.ಎಸ್.ಎಸ್.ನ ಒಬ್ಬ ಶಕ್ತಿಪುರುಷ ಸುಂದರ್ ಸಿಂಗ್ ಭಂಡಾರಿಯವರನ್ನು ಪಾಟ್ನಾದ ರಾಜಭವನಕ್ಕೆ ಕಳಿಸಿದಂದಿನಿಂದ ರಾಬ್ಡಿದೇವಿ ಸರಕಾರದ ಕೊನೆದಿನಗಳು ಬಂದಿವೆ ಎಂದು ಭಾವಿಸಲಾಗಿತ್ತು. ಬಿಜೆಪಿಯಾಗಲೀ, ಅದರ ಮಿತ್ರ ಪಕ್ಷ ಸಮತಾಪಕ್ಷವಾಗಲೀ ತಮ್ಮ ನಿಜ ಯೋಜನೆಯನ್ನು ಎಂದೂ ಮರೆ ಮಾಚಲಿಲ್ಲ. ಸೆಪ್ಟೆಂಬರ್‌ನಲ್ಲಿ ಮೊದಲ ಶಿಫಾರಸನ್ನು ರಾಷ್ಟ್ರಪತಿಗಳು ಹಿಂದಕ್ಕೆ ಕಳಿಸಿದ ಮೇಲೆ ಅದನ್ನು ಮತ್ತೆ ಕಳಿಸಲು ಯಾವುದಾದರೂ ನೆವವನ್ನು ಬಳಸಬಹುದು ಎಂದು ನಿರೀಕ್ಷಿಸಲಾಗಿತ್ತು. ಜಹಾನಾಬಾದ್ ಹತ್ಯೆಗಳಲ್ಲಿ ಬಿಜೆಪಿಗೆ ಒಳ್ಳೆಯ ಅವಕಾಶ ಕಂಡುಬಂತು. ಆದರೆ ಬಿಹಾರದ ಪ್ರಸಕ್ತ ಆಡಳಿತ ಈ ಜಘನ್ಯ ಹತ್ಯಾಕಾಂಡ ನಡೆಸಿದ ರಣವೀರ ಸೇನೆಯ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳುತ್ತದೆಯೇ? ಭೂಮಾಲಕರ ಹಿತಾಸಕ್ತಿ ಕಾಯುತ್ತಿರುವ ಈ ಕಾನೂನುಬಾಹಿರ ಸಂಘಟನೆಗೆ ಬಿಜೆಪಿ ಮತ್ತು ಸಮತಾ ಪಕ್ಷಗಳೆರಡೂ ಬೆಂಬಲ ನೀಡಿಕೊಂಡು ಬಂದಿವೆ.

ಒಟ್ಟಿನಲ್ಲಿ ಆರಂಭದಲ್ಲೇ ಹೇಳಿದಂತೆ ಈ ಭಾಷಣ ಸರಕಾರದ ಸಂಪೂರ್ಣ ದಿವಾಳಿಕೋರತನವನ್ನು, ಗೊಂದಲವನ್ನು ಹೊರಗೆಡಹಿದೆ. ಸದಾ ಒಳಗಡೆಯಿಂದ ಎಳೆದಾಟ, ಒತ್ತಡಗಳಿಗೆ ಸಿಲುಕಿರುವ ಒಂದು ನರಪೇತಲ ಸಮ್ಮಿಶ್ರ ಸರಕಾರದಿಂದ ಇದಕ್ಕಿಂತ ಉತ್ತಮವಾದುದೇನನ್ನು ನಿರೀಕ್ಷಿಸುವುದೂ ಸಾಧ್ಯವಿಲ್ಲ.



"ಕೂಲಿಯವರಿಗೇ ಏಕೆ ಸಾವು......?"

ನಿತ್ಯಾನಂದ ಸ್ವಾಮಿ

ಆತ ನೆಲದಲ್ಲಿ ಹೊರಳಾಡುತ್ತಿದ್ದ. ಅತ್ತು ಅತ್ತು ಸುಸ್ತಾಗಿದ್ದ. "ಕೂಲಿಯವರಿಗೇ ಏಕೆ ಸಾವು ಬರತದ.... "ಅನ್ನುತ್ತಿದ್ದ ಆತ ಎದೆ ಎದೆ ಬಡಕೊಂಡು.

1998 ಡಿಸೆಂಬರ್ ಒಂದರ ನಸುಕು. ಕಲ್ಬುರ್ಗಿ ನಗರದ ಹೊರವಲಯದಲ್ಲಿ ಲಾರಿಯೊಂದು ಮಗುಚಿ ಬಿದ್ದ ಪರಿಣಾಮವಾಗಿ ಏಳು ಮಕ್ಕಳು ಸೇರಿದಂತೆ ಒಟ್ಟು 14 ಮಂದಿ ಸಾವಿಗೀಡಾಗಿದ್ದರು. ಯಾದಗಿರಿಯ ತಾಂಡಾಗಳ, 50 ಜನ ಲಂಬಾಣಿ ಕೂಲಿಕಾರರು ವಾಡಿಗೆ ಬಂದಿದ್ದರು. ಹಸಿ ಬರದಿಂದ ಕಂಗೆಟ್ಟು ಜೀವನ ನಿರ್ವಹಣೆಗಾಗಿ ಕೂಲಿ ಕೆಲಸ ಹುಡುಕಿಕೊಂಡು ಇವರು ಮುಂಬೈ ದಾರಿ ಹಿಡಿದ್ದರು. ವಾಡಿಯಲ್ಲಿ ಮುಂಬೈಗೆ ಹೋಗುವ ರೈಲು ಸ್ವಲ್ಪದರಲ್ಲೇ ತಪ್ಪಿ ಹೋದ ಕಾರಣ ಕಡಿಮೆ ದರದಲ್ಲಿ ಮುಂಬೈ ಮುಟ್ಟಿಸುವ ಲಾರಿ ಚಾಲಕನ ಆಮಿಷಕ್ಕೆ ಒಳಗಾಗಿ ಇವರು ಮುಂಬೈಗೆ ಕಲ್ಲು ಸಾಗಿಸುತ್ತಿದ್ದ ಎರಡು ಲಾರಿಗಳನ್ನು ಹತ್ತಿದರು. ಲಾರಿಗಳು ಕಲ್ಬುರ್ಗಿ ಪ್ರವೇಶಿಸುವುದರೊಳಗಾಗಿ ಈ ದುರಂತ ಸಂಭವಿಸಿತು. ಕಲ್ಬುರ್ಗಿಯಿಂದ ಸುಮಾರು 10 ಕಿ.ಮೀ. ದೂರದಲ್ಲಿ ನಂದೂರಿನ ಬಳಿ ಇರುವ ತಿರುವಿನಲ್ಲಿ ನಿಂತಿದ್ದ ಲಾರಿಯೊಂದನ್ನು ನೋಡಿ ಚಾಲಕ ಪಕ್ಕಕ್ಕೆ ಲಾರಿ ಹೊರಳಿಸಿದಾಗ ಲಾರಿ ಆಯತಪ್ಪಿ ಬಲಗಡೆ ಮುಗುಚಿ ಬಿದ್ದಿತು. ಲಾರಿಯ ಮೇಲೆ ಬಲಗಡೆ ಕುಳಿತಿದ್ದವರು ನೆಲಕ್ಕೆ ಉರುಳಿದಾಗ ಅವರ ಮೇಲೆ ಲಾರಿಯಲ್ಲಿದ್ದ ಕಲ್ಲುಗಳು ಉರುಳಿ ಬಿದ್ದ ಕಾರಣ ಸ್ಥಳದಲ್ಲಿಯೇ 13 ಮಂದಿ ಸಾವನ್ನಪ್ಪಿದರೆ, ಜಿಲ್ಲಾ ಆಸ್ಪತ್ರೆಯಲ್ಲಿ ಒಬ್ಬಾತ ಮೃತಪಟ್ಟ. ಲಾರಿಯ ಇನ್ನೊಂದು ಬದಿ ಕುಳಿತಿದ್ದವರು ಹೊರಕ್ಕೆ ಜಿಗಿದ ಕಾರಣ ಅವರು ಪ್ರಾಣಾಪಾಯದಿಂದ ಪಾರಾದರು: ಬದುಕುಳಿದವರ ಗೋಳು ಮುಗಿಲು ಮುಟ್ಟುವಂತಿತ್ತು. ಚಿಕ್ಕ ಚಿಕ್ಕ ಮಕ್ಕಳು ಸಾವನ್ನಪ್ಪಿದ ದೃಶ್ಯ ನೋಡುಗರಲ್ಲಿ ಕಣ್ಣೀರು ಬರಿಸುತ್ತಿತ್ತು. ಎದೆಯ ಹಾಲು ಕುಡಿಯುತ್ತಿದ್ದ ಹಸುಗೂಸೊಂದು ಹಾಗೆಯೇ ತಾಯಿಯೊಂದಿಗೆ ಸಾವನ್ನಪ್ಪಿದ ದೃಶ್ಯ ಹೃದಯ ವಿದ್ರಾವಕವಾಗಿತ್ತು.

ಚಿಕ್ಕಪುಟ್ಟ ಮಕ್ಕಳನ್ನು ಕಟ್ಟಿಕೊಂಡು ಇವರು ಯಾಕೆ ಊರೂರು ಅಲೆಯಬೇಕು? ಇದ್ದಲ್ಲೇ ಏನಾದ್ರೂ ಕೂಲಿನಾಲಿ ಮಾಡಿಕೊಂಡು ಇರಬಾರ್ದಾ.......? ಎಂದು ಕೆಲವರು ಕಾಸು ಖರ್ಚಾಗದ ಸಹಾನುಭೂತಿ ವ್ಯಕ್ತಪಡಿಸಿರಬಹುದು. ಅವರಿಗೇನು ಗೊತ್ತು ಕೂಲಿಕಾರರ ಗೋಳು? ಕೆಲವರಿಗೆ ಬಡವರು ಮಾಡಿದೆಲ್ಲವೂ ತಪ್ಪಾಗಿಯೇ ಕಾಣುತ್ತದೆ. **"ಇಲ್ಲೇ ಕೂಲಿ ಸಿಕ್ಕಿದ್ದರೆ ಯಾರು ಬಾಂಬೇಗೆ ಹೋಗ್ತಿದ್ದರ್ರಿ"** ಎಂದು ಸೆರಗು ಅಡ್ಡ ಹಿಡಿದು ಬಿಕ್ಕುತಿದ್ದ ಮಹಿಳೆ ತನ್ನ ಬದುಕುಳಿದ ಮಕ್ಕಳನ್ನು ಎದೆಗೆ ಅವಚಿಕೊಂಡಳು.

ಉತ್ತರ ಕರ್ನಾಟಕದ ಜಿಲ್ಲೆಗಳ ಕೂಲಿಕಾರ ಕುಟುಂಬಗಳು ಉದ್ಯೋಗ ಹುಡುಕಿಕೊಂಡು ಗುಳೆ ಹೋಗುವುದು ಇಂದಿನ ಹೊಸ ಬೆಳವಣಿಗೆಯೇನಲ್ಲ. ಪ್ರತಿ ವರ್ಷ ಇವರು ತಮ್ಮ ಊರು ಬಿಟ್ಟು ಮುಂಬೈ, ಗೋವಾ ಮೊದಲಾದ ಕಡೆ ಹೋಗುತ್ತಾರೆ. ಆದರೆ ಹೊರಟವರೆಲ್ಲರೂ ತಾವು ಸೇರಬೇಕಾದ ಸ್ಥಳಕ್ಕೆ ಸೇರುತ್ತಾರೆ ಎಂಬ ಗ್ಯಾರಂಟಿ ಇಲ್ಲ. ಹೋಗಿ ತಲಪಿದವರು ವಾಪಸ್ ತಮ್ಮ ಊರುಗಳಿಗೆ ವಾಪಸಾಗುತ್ತಾರೆ ಎಂಬ ಭರವಸೆ ಇರುವುದಿಲ್ಲ. ಊರು ಬಿಟ್ಟು ಗುಳೆ ಹೋಗುವುದು ಇವರಿಗೆ ಮೋಜಿನ ವಿಷಯವೇನಲ್ಲ.

ಉತ್ತರ ಕರ್ನಾಟಕದ ಕೂಲಿಕಾರರೆಂದರೆ ಅವರು ಭೂಹೀನ ಬಡವರು ಅಥವಾ ಅಲ್ಪ ಸ್ವಲ್ಪ ಭೂಮಿಯನ್ನು ಹೊಂದಿರುವ ಬಡರೈತರು. ಮಳೆ ಕೈಕೊಟ್ಟು "ಒಣ ಬರ" ಆವರಿಸಿಕೊಂಡಾಗ ಇವರು ಊರು ಬಿಡುತ್ತಾರೆ. ಈ ಸಲ ಅತಿವೃಷ್ಟಿಯಿಂದ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡ ಕಾರಣದಿಂದಾಗಿ ಕೂಲಿಕಾರರು ಗುಳೆ ಹೋಗುವಂತಾಯಿತು. ಹೀಗೆ ಪ್ರತಿ ವರ್ಷವೂ "ಬೀದಿ ಬದಿಯ ಬದುಕು" ಇವರನ್ನು ಕರೆಯುತ್ತಾ ಇರುತ್ತದೆ. ಮುಂಬೈ ಅಂತಹ ನಗರಗಳಿಗೆ ಹೋದವರು ಅಲ್ಲಿಯ ಕೊಳಚೆ ಪ್ರದೇಶಗಳಲ್ಲಿ ಆಶ್ರಯ ಪಡೆಯುತ್ತಾರೆ. ಅನೇಕ ಸಲ ಅಲ್ಲಿ ನಡೆಯುವ ಸಮಾಜಘಾತಕ ಸಂಚುಗಳಿಗೆ ಬಲಪಶುವಾಗುತ್ತಾರೆ. ಕುಡುಕರ, ಕಾಮುಕರ, ರೌಡಿಗಳ ನಡುವೆ ಮಹಿಳಾ ಕೂಲಿಕಾರರ ಬದುಕಂತೂ ನರಕಯಾತನೆಯಾಗಿರುತ್ತದೆ. ಹಾನಗಲ್ಲ ತಾಲೂಕ ಹಾಸನಾಬಾದಿ ಎಂಬ ಗ್ರಾಮದ ಕೂಲಿಕಾರ ಮಹಿಳೆಯೊಬ್ಬಳು ಗೋವಾದಲ್ಲಿ ಕಳೆದುಕೊಂಡ ವಯಸ್ಸಿಗೆ ಬಂದ ತನ್ನ ಮಗಳನ್ನು ನಾಲ್ಕು ವರ್ಷಗಳಿಂದ ಹುಡುಕುತ್ತಿದ್ದಾಳೆ. ಆಕಸ್ಮಿಕವಾಗಿ ಸಮುದ್ರದಲ್ಲಿ ಮುಳುಗುತ್ತಿದ್ದ ಆ ಯುವತಿಯನ್ನು ನೀರಿನಿಂದ ಎತ್ತಿ ಜೀವ ಉಳಿಸಿದ ನೆಪಮಾಡಿಕೊಂಡು ಇಬ್ಬರು ವಿದೇಶಿ ಪ್ರವಾಸಿಗರು ಆ ಹುಡುಗಿಯೊಂದಿಗೆ ನಾಪತ್ತೆಯಾಗಿದ್ದಾರೆ.

ಬೆಳಗಾಂವ, ಧಾರವಾಡ, ಹಾವೇರಿ ಮೊದಲಾದ ಜಿಲ್ಲೆಗಳ ಕೂಲಿಕಾರರು ಕಾಫಿ ಸೀಮೆಗೆ ಗುಳೆ ಹೋಗುತ್ತಾರೆ. ಕಾಫಿ ತೋಟಗಳಲ್ಲಿ ಕಾಯಂ ಕಾರ್ಮಿಕರಾಗಿ ನೆಲೆಸಿರುವವರಿಗೆ ಕೆಲವಾರು ಕಾನೂನು ಬದ್ಧ ಸೌಲಭ್ಯಗಳು ದೊರಕುತ್ತಿರುತ್ತವೆ. ಆದರೆ ವರ್ಷಕ್ಕೊಮ್ಮೆ ಕಾಫಿ ಹಣ್ಣುಗಳನ್ನು ಸಂಗ್ರಹಿಸುವ ಸೀಜನಿನಲ್ಲಿ ಏಜೆಂಟರು ಕರೆತರುವ ಕೂಲಿಕಾರರಿಗೆ ಯಾವುದೇ ಕಾನೂನು ಸೌಲಭ್ಯಗಳು ದೊರೆಯುವುದಿಲ್ಲ. ನೆಲವೇ ಹಾಸಿಗೆ, ಆಕಾಶವೇ ತಲೆಯ ಮೇಲಿನ ಸೂರೆಂದು ಭಾವಿಸಿ ಕಾಲ ಕಳೆಯುವ ಇವರು ಸಹಜವಾಗಿ ನ್ಯುಮೋನಿಯಾ ಮೊದಲಾದ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಾರೆ. ಸಂಪಾದನೆಯಲ್ಲಿ ಅಳಿದುಳಿದುದನ್ನು ಊರಿಗೆ ಹಿಂತಿರುಗಿದ ನಂತರ ವೈದ್ಯರ ಜೇಬಿಗೆ ಹಾಕುತ್ತಾರೆ. ಹಾವು ಕಚ್ಚಿ ಸಾಯುವವರ ಸಂಖ್ಯೆಗೆ ಲೆಕ್ಕವೇ ಇಲ್ಲ. ಆತನ ಆಯುಷ್ಯ ಅಷ್ಟೇ ಎಂದು ನೋವು ನುಂಗಿಕೊಳ್ಳುತ್ತಾರೆ.

ರಾಯಚೂರು, ಬಳ್ಳಾರಿಯಂತಹ ಜಿಲ್ಲೆಗಳಿಂದ ಕೂಲಿಕಾರರು ಕೆಲಸ ಹುಡುಕಿಕೊಂಡು ಹೆಚ್ಚಾಗಿ ಬರುವುದು ಬೆಂಗಳೂರಿಗೆ. ಇಲ್ಲಿ ಬೆಳೆಯುತ್ತಿರುವ ಕಾಂಕ್ರಿಟ್ ಕಾಡು ಇವರು ಸುರಿಸಿದ ಬೆವರು ರಕ್ತದ ಗೊಬ್ಬರದಿಂದ ಬೆಳೆದಿದೆ. ಗಂಗಾರಾಮನಂತಹ ಕಟ್ಟಡಗಳು ಕುಸಿದಾಗ ಹೆಣವಾದವರು ಇವರೇ. ಬಾಲಕಾರ್ಮಿಕ ಪಿಡುಗಿಗೆ ಬೆಂಗಳೂರಿನ ಕಟ್ಟಡ ನಿರ್ಮಾಣ ಕೈಗಾರಿಕೆ ಫಲವತ್ತಾದ ನೆಲ. ಬಹುಮಹಡಿ ಕಟ್ಟಡಗಳ ನಿರ್ಮಾಣದಲ್ಲಿ ಗಗನೆತ್ತರಕ್ಕೆ ಇಟ್ಟಿಗೆ, ಕಲ್ಲು, ಸಿಮೆಂಟ್ ಹೊತ್ತ ಈ ಎಳೆಯ ಕೈಗಳು ಕೈಗಳಾಗಿ ಉಳಿದಿಲ್ಲ. ಎತ್ತರದಿಂದ ಆಯತಪ್ಪಿ ಕೆಳಗೆ ಬಿದ್ದು ಸೊಂಟ ಮುರಿದುಕೊಂಡವರು ಹೆತ್ತವರಿಗೂ ಭಾರವಾಗಿ ಬದುಕುತ್ತಿರುವ ಉದಾಹರಣೆಗಳು ನೂರಾರು.

ಕಟ್ಟಡ ನಿರ್ಮಾಣ ಕೈಗಾರಿಕೆಯ ಗುತ್ತಿಗೆದಾರರೂ ಈಗ ಜಾಣರಾಗಿದ್ದಾರೆ. ಯಾಂತ್ರೀಕರಣದ ಉಚ್ಚ ತಂತ್ರಜ್ಞಾನ ಅವರ ನೆರವಿಗೆ ಬಂದಿದೆ. ನೂರಾರು ಕೂಲಿಕಾರರನ್ನು ಇಟ್ಟುಕೊಂಡು ಅವರಿಗೆ ಸಂಬಳ ಕೊಡುವ, ಅಪಘಾತ ಪರಿಹಾರ ನೀಡುವ ಜವಾಬ್ದಾರಿಯನ್ನು ತಪ್ಪಿಸಲು ದೊಡ್ಡ ದೊಡ್ಡ ಕ್ರೈನುಗಳನ್ನು ಲಿಫ್ಟ್‌ಗಳನ್ನು ಬಳಸಲಾಗುತ್ತಿದೆ. ಈ ಬೆಳವಣಿಗೆಯಿಂದ ಬೆಂಗಳೂರಿನಂತಹ ನಗರಗಳಿಗೆ ವಲಸೆ ಬರುವ ಕೂಲಿಕಾರರ ಬದುಕು ಇನ್ನಷ್ಟು ಆತಂಕಕಾರಿಯಾಗುತ್ತಿದೆ. ತಮ್ಮ ಹಳ್ಳಿಗಳಲ್ಲಿ ಬದುಕಿಲ್ಲದ ಈ ಜನ ಬದುಕು ಹುಡುಕಿಕೊಂಡು ಪಟ್ಟಣಕ್ಕೆ ಬಂದವರು. ಇವರಂತವರ ಸಹಸ್ರಾರು ಜನಗಳ ಬದುಕನ್ನು ಹಸನುಗೊಳಿಸಬೇಕಾದ ಆಧುನಿಕ ತಂತ್ರಜ್ಞಾನ ಇವರ ಬದುಕಿಗೆ ಕುತ್ತು ತರುತ್ತಿರುವುದು ಕ್ರೂರ ವಿಪರ್ಯಾಸ. ಬೆಂಗಳೂರಿಗೆ ಬಂದವರು ಮರಳಿ ಹೋಗಲಾಗದೆ, ಇಲ್ಲಿಯೂ ಉಪಯುಕ್ತ ಉದ್ಯೋಗ ಸಿಗದೆ ಅಲೆಯುತ್ತಾರೆ. ಬೆಳೆಯುತ್ತಿರುವ ಗೂಂಡಾ ರಾಜ್ಯಕ್ಕೆ ಕುರಿಗಳಾಗಿ ಲಭ್ಯವಾಗುತ್ತಾರೆ. ಭೂಗತ ದೊರೆಗಳೊಂದಿಗೆ ಶಾಮೀಲಾಗಿರುವ ಪೋಲೀಸರ ಕ್ರೌರ್ಯಕ್ಕೆ ಬಲಿಯಾಗುತ್ತಾರೆ. ಹೀಗೆ "ಕೂಲಿಯವರಿಗೇ ಏಕೆ ಸಾವು?" ಎಂಬ ಪ್ರಶ್ನೆ ಮತ್ತೆ ಮತ್ತೆ ಏಳುತ್ತದೆ.

ಈ ಪ್ರಶ್ನೆಗೆ ಉತ್ತರ ಇಲ್ಲವೆ? ಇದೆ. ಗ್ರಾಮೀಣ ನಿರುದ್ಯೋಗಿಗಳು ಊರೂರು ಅಲೆಯುವುದು ತಪ್ಪಬೇಕು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚೆಚ್ಚು ಉದ್ಯೋಗದ ಅವಕಾಶಗಳು ಸೃಷ್ಟಿಯಾಗುವಂತಾಗ ಬೇಕು. ಹಳ್ಳಿಗಳಲ್ಲಿ ಲಭ್ಯ ಇರುವ ಕೃಷಿಯೋಗ್ಯ ಸರ್ಕಾರಿ ಬಂಜರು ಭೂಮಿಯನ್ನು ಭೂಹೀನರಿಗೆ ವಿತರಣೆಮಾಡಲು ಸಾಧ್ಯವಾದರೆ ಗ್ರಾಮೀಣ ನಿರುದ್ಯೋಗ ಸಮಸ್ಯೆಗೆ ಕೆಲಮಟ್ಟದ ಪರಿಹಾರ ಸಾಧ್ಯ. ನೀರಾವರಿ ಯೋಜನೆಗಳ ತೀವ್ರ ಅನುಷ್ಠಾನ ಸಾಧ್ಯವಾಗುವಂತಾದರೆ ಕೂಲಿಕಾರರಿಗೆ ಕೆಲಸದ ಅವಕಾಶಗಳು ಗಣನೀಯವಾಗಿ ಹೆಚ್ಚುತ್ತವೆ. ಸತತವಾಗಿ ಬರಗಾಲಕ್ಕೆ ತುತ್ತಾಗುವ ಜಿಲ್ಲೆಗಳಲ್ಲಿ ಕೂಲಿಕಾರರಿಗೆ ಉದ್ಯೋಗ ಒದಗಿಸುವ ಯೋಜನೆಗಳು ಜಾರಿಯಾಗುತ್ತಿರಬೇಕು. "ಕೂಲಿಗಾಗಿ ಕಾಳು" ಅಂತಹ ಯೋಜನೆಗಳಿಗೆ ಬಹಳ ಮಹತ್ವವಿದೆ. ಇಷ್ಟು ಪ್ರಗತಿಪರವಾದ ಭೂಸುಧಾರಣೆಗಾಗಿ ಒತ್ತಾಯ ನಡೆಯಬೇಕು. ಆದರೆ ಜಾರಿಯಲ್ಲಿರುವ ಭೂಸುಧಾರಣಾ ಕಾಯ್ದೆಯಲ್ಲಿರುವ ಲೋಪ ದೋಷಗಳನ್ನು ತೆಗೆದು ಹಾಕಲು ಸಾಧ್ಯವಾಗಬೇಕು ಮತ್ತು ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಒತ್ತಾಯಬೇಕು. ಕೂಲಿಕಾರರ ಕೂಲಿಯ ಪ್ರಶ್ನೆಯನ್ನೂ ಗಂಭೀರವಾಗಿ ಎತ್ತಿಕೊಳ್ಳಬೇಕು. ಎಲ್ಲಕ್ಕೂ ಹೆಚ್ಚಾಗಿ ಕೃಷಿ ಕೂಲಿಕಾರರ ಕೂಲಿ ಹಾಗೂ ಕೆಲಸದ ಪರಿಸ್ಥಿತಿ ಕುರಿತಾದ ಸಮಗ್ರ ಕೇಂದ್ರ ಕಾನೂನೊಂದು ಜಾರಿಗೆ ಬರುವುದು ಅವಶ್ಯವಿದೆ. ಕೊಟಿಗಟ್ಟಲೆ ಇರುವ ದೇಶದ ಕೂಲಿಕಾರರ ಬದುಕಿನಲ್ಲಿ ಬದಲಾವಣೆಯಾಗದೆ, ಅವರ ಗೋಳಿನ ಕಥೆ ಕೊನೆಯಾಗದೆ ನಮ್ಮ ಭಾರತ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಆದ್ದರಿಂದ ಗ್ರಾಮೀಣ ಕೃಷಿ ಕೂಲಿಕಾರರನ್ನು, ಪಟ್ಟಣದ ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವುದು ತುರ್ತಾಗಿ ಆಗಬೇಕಾದ ಕೆಲಸ. ಕೂಲಿಕಾರರ ರಾಜಿ ಇಲ್ಲದ ಹೋರಾಟ ಮಾತ್ರ ಬಡ ಭಾರತದ ಚಿತ್ರವನ್ನು ಬದಲಾಯಿಸಬಲ್ಲದು.

ಪ.ಬಂಗಾಳದಾದ್ಯಂತ ಪೇಟೆಂಟ್, ಇನ್ಶೂರೆನ್ಸ್ ಬಿಲ್ ವಿರುದ್ಧ ಪ್ರದರ್ಶನ

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (NPMO) ದ ಕರೆಯ ಮೇರೆಗೆ ಪಶ್ಚಿಮ ಬಂಗಾಳದಾದ್ಯಂತ ಪೇಟೆಂಟ್, ಇನ್ಶೂರೆನ್ಸ್ ಬಿಲ್‌ಗಳ ವಿರುದ್ಧ ಪ್ರದರ್ಶನ, ರ್‍ಯಾಲಿ, ಬೀದಿ ಸಭೆಗಳು, ಜಾಥಾ, ಸಮಾವೇಶಗಳನ್ನು ಸಂಘಟಿಸಲಾಯಿತು. ಪ್ರಸ್ತುತ ಅಧಿವೇಶನದಲ್ಲಿ ಬಿಜೆಪಿ ಸರ್ಕಾರ ಮಂಜೂರು ಮಾಡಿಸಬೇಕೆಂದಿರುವ ಈ ಎರಡು ಬಿಲ್ ಗಳ ವಿರುದ್ಧ ಈ ಮೂಲಕ ಜನಜಾಗೃತಿ ಮೂಡಿಸಲಾಯಿತು.

ಈ ಪ್ರದರ್ಶನಗಳನ್ನು ಸಂಘಟಿಸುವಲ್ಲಿ NPMO ಇತ್ತೀಚೆಗೆ ರಚಿಸಲಾದ ಇನ್ನೊಂದು ಸಂಘಟನೆ CAPIB(Campaign Against Patent and Insurance Bill - ಪೇಟೆಂಟ್, ಇನ್ಶೂರೇನ್ಸ್ ಬಿಲ್‌ಗಳ ವಿರುದ ಪ್ರಚಾರ) ಜತೆ ಕೈಗೂಡಿಸಿತ್ತು. CAPIB 68 ಸಾಮೂಹಿಕ ಸಂಘಟನೆಗಳ ಜಂಟಿ ಸಂಘಟನೆಯಾಗಿದೆ. ಕೇಂದ್ರ ಪ್ರತಿಭಟನಾ ರ್‍ಯಾಲಿ ಕಲ್ಕತ್ತಾದ ಶಹೀದ್ ಮಿನಾರ್ ಮೈದಾನದಲ್ಲಿ ನಡೆಯಿತು. ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಚಿತ್ತಬ್ರತ ಮಜುಂದಾರ್ ಈ ಎರಡೂ ಬಿಲ್‌ಗಳ ಜನ-ವಿರೋಧಿ ಸ್ವರೂಪವನ್ನು ಬಯಲಿಗೆಳೆದರು. ಆ ನಂತರ ಎರಡೂ ಭಾರೀ ಮೆರವಣಿಗೆಗಳಲ್ಲಿ ಲಕ್ಷಾಂತರ ಜನ ಭಾಗವಹಿಸಿದರು. ಇದಲ್ಲದೆ ಹೆಚ್ಚು ಕಡಿಮೆ ಎಲ್ಲಾ ಜಿಲ್ಲೆಗಳಲ್ಲಿ, ತಾಲ್ಲೂಕು, ಬ್ಲಾಕ್ ಹಂತಗಳಲ್ಲಿ ಲಕ್ಷಾಂತರ ಜನ ಭಾಗವಹಿಸಿದ ಪ್ರತಿಭಟನಾ ಕಾರ್ಯಕ್ರಮಗಳು ನಡೆದವು. ವಿಮಾ ನೌಕರರ ಸಂಘಟನೆಗಳು ಅದೇ ದಿನ ಎಲ್‌ಐಸಿ ಆಫೀಸುಗಳ ಮುಂದೆ ಪ್ರದರ್ಶನ ನಡೆಸಿದವು. ಈ ಪ್ರದರ್ಶನಗಳಲ್ಲಿ ಎಲ್ಲಾ ಎಲ್‌ಐಸಿ ಯೂನಿಯನ್‌ಗಳು ಭಾಗವಹಿಸಿದ್ದವು.

ರೈಲು ಭವನದ ಮುಂದೆ ಪ.ಬಂಗಾಳದ ಡಿವೈಎಫ್‌ಐ ಪ್ರತಿಭಟನೆ

ಪಶ್ಚಿಮ ಬಂಗಾಳದ 18 ಜಿಲ್ಲೆಗಳಿಂದ ಬಂದ ನಾಲ್ಕು ನೂರು ಯುವಕ- ಯುವತಿಯರು ನವದೆಹಲಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ರೈಲು ಭವನದ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಅವರು ರೈಲ್ವೇ ಮಂತ್ರಿಗಳನ್ನು ಭೇಟಿ ಮಾಡಿ ಕೊಟ್ಟ ಮನವಿ ಪತ್ರದಲ್ಲಿ ಪಶ್ಚಿಮ ಬಂಗಾಳದ ಹಲವು ರೈಲ್ವೇ ಪ್ರಾಜೆಕ್ಟ್‌ಗಳನ್ನು ಶೀಘ್ರವಾಗಿ ಮುಗಿಸಬೇಕೆಂದು ಒತ್ತಾಯಿಸಿದ್ದಾರೆ. ಗುಂಪು ಸಿ ಮತ್ತು ಡಿಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಭ್ರಷ್ಟಾಚಾರ- ರಹಿತ ರಿಕ್ರೂಟ್‌ಮೆಂಟ್ ಮೂಲಕ ಭರ್ತಿ ಮಾಡಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ. ಪಶ್ಚಿಮ ಬಂಗಾಳದ ಜನರನ್ನು ಕಾಡಿಸುವ 39 ಅಂಶಗಳನ್ನು ಕಳೆದ ವರ್ಷ ಒಂಭತ್ತು ಎಡ ವಿದ್ಯಾರ್ಥಿ ಯುವಜನ ಸಂಘಟನೆಗಳು ಕೊಟ್ಟಿರುವ ಮನವಿ ಪತ್ರದ ಜಾರಿಗೂ ಅವರು ಒತ್ತಾಯಿಸಿದ್ದಾರೆ.

ಮಹಿಳೆಯರ ಮೇಲೆ ಜಬರ್‌ದಸ್ತಿ ಮಾಡುವ ಈ ತಾಲಿಬಾನ್‌ಗಳನ್ನು ಶಿಕ್ಷಿಸಿ

ಜನವಾದಿ ಮಹಿಳಾ ಸಂಘಟನೆ ಹೇಳಿಕೆ

ಇಬ್ಬರು ಹುಡುಗಿಯರ ಮೇಲೆ ಅವರು ಜೀನ್ಸ್ ಪ್ಯಾಂಟ್ ಧರಿಸಿದ್ದರು ಎಂಬ ಏಕಮಾತ್ರ ಕಾರಣಕ್ಕಾಗಿ ಶ್ರೀನಗರದಲ್ಲಿ ಭಯೋತ್ಪಾದಕರು ಗುಂಡು ಹಾರಿಸಿದ ಪ್ರಕರಣವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತೀವ್ರವಾಗಿ ಖಂಡಿಸಿದೆ. ಇನ್ನೊಂದು ಮೂಲಭೂತವಾದಿ ಸಂಘಟನೆ ಹಿಜಬುಲ್ ಮುಜಾಹಿದ್ದೀನ್ ಹುಡುಗಿಯರು ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಿಸಬಾರದು ಎಂದು ನಿಷೇಧಿಸಿದೆಯಂತೆ. ಇದು ತಾಲಿಬಾನ್ ಸಿದ್ಧಾಂತದ ಫಲ. ಇದು ಭಾರತೀಯ ಮುಸ್ಲಿಮರು ಬದುಕು, ಸಂಪ್ರದಾಯಗಳಿಗೆ ವ್ಯತಿರಿಕ್ತವಾದದ್ದು. ಕಾಶ್ಮೀರದಲ್ಲಿ ಹಿಂದೆ ಮಹಿಳೆಯರು ಬುರ್ಖಾವನ್ನು ತೊಡುತ್ತಿರಲಿಲ್ಲ. ಆದರೂ ವಿದ್ಯಾರ್ಥಿನಿಯರು ಬುರ್ಖಾವನ್ನು ಧರಿಸಬೇಕು ಇಲ್ಲವೇ ಆಸಿಡ್‌ನ್ನು ಮುಖಕ್ಕೆ ಎರಚಿದ ಘಟನೆಗಳು ವರದಿಯಾಗಿವೆ. ಪಾಕಿಸ್ತಾನ ಮತ್ತು ಅಫಘಾನಿಸ್ತಾನದ ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳ ಕುಮ್ಮಕ್ಕಿನಿಂದ ಭಯೋತ್ಪಾದಕರು ಬಲಪೂರ್ವಕ ಭಾರತೀಯ ಮಹಿಳೆ ಮೇಲೆ ಉಡುಪಿನ ಬಗ್ಗೆ ಜಬರ್‌ದಸ್ತಿ ನಡೆಸುವುದೆಂದರೆ ಕೆಲವು ವೈಯಕ್ತಿಕ ಸ್ವಾತಂತ್ರ್ಯಗಳನ್ನು ಕೊಡುವ ಸಂಧಾನದ ಅವಹೇಳನವೇ ಸರಿ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಈ ತಪ್ಪಿತಸ್ಥರ ಮೇಲೆ ತೀವ್ರ ಹಾಗೂ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದೆ.

'ಏಕುಶೆ ಫೆಬ್ರವರಿ' 1952 ರ ಭಾಷೆ ಚಳುವಳಿ ಹುತಾತ್ಮರ ಸ್ಮರಣ

ಪಶ್ಚಿಮ ಬಂಗಾಳದಾದ್ಯಂತ 'ಫೆಬ್ರವರಿ 21' ನ್ನು ಹುತಾತ್ಮ ದಿನವಾಗಿ ಆಚರಿಸಲಾಯಿತು. 47 ವರ್ಷಗಳ ಹಿಂದೆ ತಮ್ಮ ಮಾತೃಭಾಷೆ ಬಂಗಾಳದಲ್ಲಿ ವ್ಯವಹರಿಸುವ ಪ್ರಜಾಸತ್ತಾತ್ಮಕ ಹಕ್ಕು ರಕ್ಷಿಸಿಕೊಳ್ಳುವ ಚಳುವಳಿಯಲ್ಲಿ ಆರು ವಿದ್ಯಾರ್ಥಿ ಹುತಾತ್ಮರ ಸ್ಮರಣೆಗೆ ಈ ದಿನಾಚರಣೆ. ಈ ದಿನವನ್ನು 'ಏಕುಶೆ ಫೆಬ್ರವರಿ' ಎಂಬ ಹೆಸರಿನಿಂದ ಬಾಂಗ್ಲಾ ದೇಶ, ಪಶ್ಚಿಮ ಬಂಗಾಳ ಎರಡರಲ್ಲೂ ಆಚರಿಸಲಾಗುತ್ತದೆ. ಕಲ್ಕತ್ತಾದಲ್ಲಿ ಸೆಮಿನಾರುಗಳು, ಸಭೆ, ರ್‍ಯಾಲಿ, ಮೆರವಣಿಗೆಗಳನ್ನು ಹಲವಾರು ಸಾಮೂಹಿಕ ಹಾಗೂ ಸಾಂಸ್ಕೃತಿಕ ಸಂಘಟನೆಗಳು ನಡೆಸಿದವು. ಈಗ ನಡೆಯುತ್ತಿರುವ ಮೂರನೇ ಕಲ್ಕತ್ತಾ ಜನತಾ ಆರೋಗ್ಯ ಮೇಳದಲ್ಲಿ ಇದನ್ನು 'ಸಾಮ್ರಾಜಶಾಹಿ-ವಿರೋಧಿ ಮತ್ತು ಭಾಷಾ ಹುತಾತ್ಮರ ದಿನ'ವಾಗಿ ಆಚರಿಸಲಾಯಿತು.

1952 ರಲ್ಲಿ ನಡೆದ ಈ ಚಳುವಳಿ ಹೊಸ ದೇಶ ಪಾಕಿಸ್ತಾನದಲ್ಲಿ ಉರ್ದು ಏಕಮಾತ್ರ ಅಧಿಕೃತ ಭಾಷೆ ಎಂದು ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಆಗಿತ್ತು. ಆಗಿನ ಪೂರ್ವ ಪಾಕಿಸ್ತಾನದ ಬಂಗಾಳಿ ಜನ ಇದನ್ನು ವಿರೋಧಿಸಿದಾಗ, ಸರ್ಕಾರ ಗುಂಡುಗಳಿಂದ ಉತ್ತರಿಸಿತ್ತು. ಈ ಚಳುವಳಿ ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದ ಪ್ರಥಮ ಹೆಜ್ಜೆ ಎನ್ನಲಾಗುತ್ತದೆ.

ಸಾಲ ಮುಕ್ತಿ ಆಂದೋಲನ: ಪಂಜಾಬ್ ರೈತರ ನಿರ್ಧಾರ

ಫೆಬ್ರವರಿ 8 ರಿಂದ 10 ರವರೆಗೆ ನವಾಶಹರ್‌ನಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾದ ಪಂಜಾಬ್ ಘಟಕದ 33ನೇ ರಾಜ್ಯ ಸಮ್ಮೇಳನ ರಾಜ್ಯದಲ್ಲಿ "ಸಾಲ ಮುಕ್ತಿ ಆಂದೋಲನ' ನಡೆಸಲು ಕರೆ ನೀಡಿದೆ. ಈ ಆಂದೋಲನದ ಭಾಗವಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಿಸಾನ್ ಸಭಾ ಕಾರ್ಯಕರ್ತರು ಬಂಧನಕ್ಕೊಳಗಾಗುತ್ತಾರೆ.

30 ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ ರ್‍ಯಾಲಿಯೊಂದಿಗೆ ಆರಂಭ ವಾದ ಸಮ್ಮೇಳನದಲ್ಲಿ 380 ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನ ನಡೆದ ಸ್ಥಳಕ್ಕೆ ಸರ್ದಾರ ಅಜಿತ್ ಸಿಂಗ್‌ರ ಹೆಸರಿಡ ಲಾಗಿತ್ತು. ಇವರು ಹುತಾತ್ಮ ಭಗವತ್ ಸಿಂಗರ ಚಿಕ್ಕಪ್ಪ ಹಾಗೂ 1907 ರಲ್ಲಿ ಪಂಜಾಬಿನಲ್ಲಿ ರೈತ ಚಳುವಳಿ ಆರಂಭಿಸಿ ದರು. ಅವರು ಹೇಳಿದ "ಪಗಡಿ ಸಂಭಾರ್ ಜತ್ತಾ"(ಓ ರೈತ, ನಿನ್ನ ಮಾನರಕ್ಷಣೆಗೆ ಎದ್ದು ನಿಲ್ಲು) ನಂತರ ರಾಜ್ಯಾದ್ಯಂತ ಅಣುರಣನಗೊಂಡ ಕ್ರಾಂತಿ ಘೋಷವಾಯಿತು. ಪ್ರತಿನಿಧಿ ಅಧಿವೇಶನ ವನ್ನು ಎಐಕೆಎಸ್ ಉಪಾಧ್ಯಕ್ಷರೂ ಆದ ಹರ್ಕಿಶನ್ ಸಿಂಗ್ ಸುರ್ಜಿತ್ ಉದ್ಘಾಟಿಸಿದರು. 'ಸಾಲ ಮುಕ್ತಿ ಆಂದೋಲನ' ಒಂದು ಸರಿಯಾದ ಸಮಯಕ್ಕೆ ತಗೊಂಡ ನಿರ್ಧಾರ ಎಂದ ಅವರು ಇದನ್ನು ಎಲ್ಲಾ ರೈತರನ್ನು ಒಳ ಗೊಂಡ ವಿಶಾಲ ಸ್ವರೂಪದ ಆಂದೋಲನವಾಗಿ ಬೆಳೆಸಬೇಕು ಎಂದರು.

ಹಾಸ್ಟೆಲ್ ವಿದ್ಯಾರ್ಥಿಗಳ ಪ್ರತಿಭಟನೆ

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ಧ ಮತ್ತು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಂಡ್ಯ ಜಿಲ್ಲಾ ಹಾಸ್ಟೆಲ್ ವಿದ್ಯಾರ್ಥಿ ತೀವ್ರ ಪ್ರತಿಭಟನೆ ನಡೆಸಿದರು.

ಫೆಬ್ರವರಿ 20 ರಂದು ಎಸ್.ಎಫ್.ಐ. ನೇತೃತ್ವದಲ್ಲಿ ಮಂಡ್ಯ ನಗರದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಜಿಲ್ಲೆಯಾದ್ಯಂತ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆ ಹೊರಟ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಮತ್ತು ಜಿ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ನಂತರ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್.ಲಕ್ಷ್ಮಿ ಹಾಗೂ ಜಿಲ್ಲಾ ಕಾರ್‍ಯದರ್ಶಿ ಟಿ.ಎಲ್. ಕೃಷ್ಣೇಗೌಡ, ಜಿಲ್ಲಾಧ್ಯಕ್ಷರಾದ ಎಸ್. ವಜ್ರಮುನಿ ಮಾತನಾಡಿದರು.

ಅಂಗನವಾಡಿ ನೌಕರರ ಪ್ರತಿಭಟನೆ

ಅಖಿಲ ಭಾರತ ಕರೆಯ ಮೇರೆಗೆ ಮಂಡ್ಯದಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ ಫೆ. 18 ರಂದು ಯಶಸ್ವಿಯಾಗಿ ನಡೆಯಿತು. 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಈ ಪ್ರತಿಭಟನೆಯಲ್ಲಿ ನೌಕರರು ನಗರದ ಸಿಲ್ವರ್ ಜ್ಯೂವಿಲಿ ಪಾರ್ಕನಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದರು.

ಅಂಗನವಾಡಿ ಕೇಂದ್ರಗಳ ಖಾಸಗೀಕರಣದ ವಿರುದ್ಧ ವೇತನ ಹೆಚ್ಚಳ ಸೇರಿದಂತೆ ಖಾಯಂಗಾಗಿ ಒತ್ತಾಯಿಸಿ ಈ ಕಾರ್‍ಯಕ್ರಮ ನಡೆಯಿತು.

ನಂತರ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ, ಟಿ.ಎಲ್. ಕೃಷ್ಣೇಗೌಡ, ಸಿ.ಐ.ಟಿ.ಯು ಜಿಲ್ಲಾ ಕಾರ್‍ಯದರ್ಶಿ ಹನುಮಂತು, ಪುಟ್ಟಮಾದು, ಡಿ.ಸಿ. ಚೌಡೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಮಾತನಾಡಿದರು.

ಎರಡು ಗಂಟೆಗಳಿಗೂ ಹೆಚ್ಚಿನ ಸಮಯ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದ್ದ ಕಾರ್‍ಯಕರ್ತರು ಜಿಲ್ಲಾಧಿಕಾರಿಗಳು ಸಭೆ ಕರೆದು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸುವುದಾಗಿ ಭರವಸೆ ಕೊಟ್ಟ ನಂತರ ಮುತ್ತಿಗೆ ಕಾರ್‍ಯಕ್ರಮವನ್ನು ವಾಪಸ್ಸು ತೆಗೆದು ಕೊಳ್ಳಲಾಯ್ತು.

ಪ್ರತಿಭಟನೆಯ ನೇತೃತ್ವವನ್ನು ಶಹಜಹಾನ್, ಜಯಲಕ್ಷ್ಮಿ, ಪಂಕಜ, ರಾಜರಾಜೇಶ್ವರಿ ಮುಂತಾದವರು ವಹಿಸಿದ್ದರು.

ಡಿ.ವೈ.ಎಫ್.ಐ. ತಾ|| ಮಟ್ಟದ ಅಧ್ಯಯನ ಶಿಬಿರ

ಮಳವಳ್ಳಿ ತಾ|| ಮಟ್ಟದ ಡಿ.ವೈ.ಎಫ್.ಐ. ಕಾರ್ಯಕರ್ತರ ಅಧ್ಯಯನ ಶಿಭಿರವು ಫೆಬ್ರವರಿ 6 ರಂದು ಮಳವಳ್ಳಿಯ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಕಛೇರಿಯಲ್ಲಿ ನಡೆಯಿತು.

50 ಕ್ಕೂ ಹೆಚ್ಚು ಕಾರ್‍ಯಕರ್ತರು ಭಾಗವಹಿಸಿದ್ದ ಈ ಶಿಬಿರದಲ್ಲಿ "ರಾಜಕೀಯ ಮತ್ತು ಯುವಜನತೆ" ಎಂಬ ವಿಷಯದ ಬಗ್ಗೆ ಕೃಷ್ಣೇಗೌಡ ಟಿ.ಎಲ್., "ಯುವಜನತೆ ಮತ್ತು ಸಂಘಟನೆ" ಎಂಬ ವಿಷಯದ ಬಗ್ಗೆ ಕೆ.ಪ್ರಕಾಶ್ ಉಪನ್ಯಾಸ ನೀಡಿದರು. ಭರತ್ ರಾಜ್, ಪ್ರಕಾಶ್ ಕೆ. ಉಪಸ್ಥಿತರಿದ್ದರು.

ಮಂಡ್ಯಾ ಜಿಲ್ಲಾ

ಟಿ.ಎಲ್.ಕೃಷ್ಣೇಗೌಡ

ಎಸ್.ಎಫ್.ಐ. ನೂತನ ಜಿಲ್ಲಾ ಸಮಿತಿ

ಇತ್ತೀಚೆಗೆ ಮದ್ದೂರು ನಗರದಲ್ಲಿ ಜರುಗಿದ ಮಂಡ್ಯ ಜಿಲ್ಲಾ ಎಸ್.ಎಫ್.ಐ. ನಾಲ್ಕನೇ ಸಮ್ಮೇಳನದಲ್ಲಿ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯ್ತು.

ಅಧ್ಯಕ್ಷರು - ವಜ್ರಮುನಿ.ಎಸ್.

ಉಪಾಧ್ಯಕ್ಷರುಗಳು - ಮಹದೇವಮ್ಮ, ಲಿಂಗರಾಜು, ಶ್ರೀನಿವಾಸ್, ದೊಡ್ಡಮಾದೇಗೌಡ.

ಕಾರ್ಯದರ್ಶಿ ಕೃಷ್ಣೇಗೌಡ ಟಿ.ಎಲ್.

ಸಹಕಾರ್ಯದರ್ಶಿಗಳು ಮಹೇಶ.ಟಿ.ಎಲ್., ಯಶವಂತ .ಟಿ., ಯೋಗೇಶ್

ಇತರೆ 10 ಜನರನ್ನು ಜಿಲ್ಲಾ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯ್ತು.

ಪಡಿತರ ಚೀಟಿಗೆ ಆಗ್ರಹಿಸಿ ಮತ್ತು ಬೆಲೆಏರಿಕೆ ವಿರುದ್ಧ ಡಿ.ವೈ.ಎಫ್.ಐ. ಪ್ರತಿಭಟನೆ

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ಧ ಹಾಗೂ ಸಮರ್ಪಕ ಪಡಿತರ ಚೀಟಿ ವಿತರಣೆಗಾಗಿ ಮದ್ದೂರು ನಗರದಲ್ಲಿ ಪ್ರತಿಭಟನೆ ನಡೆಯಿತು. ಡಿ.ವೈ.ಎಫ್.ಐ. ತಾ|| ಸಮಿತಿ ನೇತೃತ್ವದಲ್ಲಿ ಫೆಬ್ರವರಿ 25 ರಂದು ನಡೆದ ಈ ಪ್ರತಿಭಟನೆಯಲ್ಲಿ ನೂರಾರು ಡಿ.ವೈ.ಎಫ್.ಐ. ಕಾರ್‍ಯಕರ್ತರು ಭಾಗವಹಿಸಿದ್ದರು. ಹಳೇ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟು ತಹಶೀಲ್ದಾರರಿಗೆ ಮನವಿ ಅರ್ಪಿಸ ಲಾಯ್ತು. ಈ ಸಂದರ್ಭದಲ್ಲಿ ಪ್ರತಿಭಟನಾ ಕಾರರನ್ನು ದ್ದೇಶಿಸಿ ಸಿಪಿಐ(ಎಂ) ಕಾರ್‍ಯದರ್ಶಿ ಎಂ. ಪುಟ್ಟಮಾದು, ಎಸ್.ಎಫ್.ಐ. ಜಿಲ್ಲಾ ಕಾರ್‍ಯದರ್ಶಿ ಟಿ.ಎಲ್. ಕೃಷ್ಣೇಗೌಡ, ಪತ್ರಕರ್ತ ರಾದ ದೇಶಹಳ್ಳಿ ಆರ್. ಮೋಹನ್ ಕುಮಾರ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಡಿ.ವೈ.ಎಫ್.ಐ. ತಾ|| ಅಧ್ಯಕ್ಷ ಎಂ.ಆರ್. ಈರೇಶ್ ಕಾರ್‍ಯದರ್ಶಿ ಧನರಾಜಯ್ಯ, ಖಜಾಂಚಿ ಸಿದ್ದೇಗೌಡ ವಹಿಸಿದ್ದರು.

ಫೆ.9 ದಾಂಡೇಲಿಯಲ್ಲಿ ಪ್ರತಿಭಟನೆ

ಕೇಂದ್ರ ಸರ್ಕಾರದ ಅಗತ್ಯವಸ್ತುಗಳ ಬೆಲೆ ಏರಿಕೆ ನೀತಿ ವಿರುದ್ಧ ದಾಂಡೇಲಿ ನಗರದಲ್ಲಿ ಪ್ರತಿಭಟನೆ ನಡೆಸಲಾಯ್ತು.

ಪಕ್ಷದ ಕೇಂದ್ರ ಸಮಿತಿ ಕರೆಯ ಮೇರೆಗೆ ಫೆ. 9 ರಂದು ನಡೆದ ಈ ಪ್ರತಿಭಟನೆಯಲ್ಲಿ ಪಕ್ಷದ ನೂರಾರು ಕಾರ್‍ಯಕರ್ತರು ಭಾಗವಹಿಸಿದ್ದರು.

ಸಿ.ಐ.ಟಿ.ಯು ಕಛೇರಿಯಿಂದ ಮೆರವಣಿಗೆ ಹೊರಟು ರಸ್ತೆ ಉದ್ದಕ್ಕೂ ಪ್ರತಿಭಟನಾ ಘೋಷಣೆ ಕೂಗುತ್ತಿದ್ದ ಕಾರ್‍ಯಕರ್ತರು ಸಂತೆ ಮೈದಾನದಲ್ಲಿ ಸಭೆ ನಡೆಸಿದರು.

ಸಭೆಯನ್ನುದ್ದೇಶಿಸಿ ಕಾಂ| ಟಿ.ಎಸ್. ನಾಯ್ಕ, ಕಾಂ. ಮಾಧವ ಕಾಂ. ಬೀಮರಾವ್, ಎಂ.ಬಿ. ನಾಯ್ಕ ರವರು ಮಾತನಾಡಿದರು.

ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ

ಬಾಗೇಪಲ್ಲಿ: ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಫೆಬ್ರವರಿ 9 ರಂದು ಬಾಗೇಪಲ್ಲಿಯ ತಾಲೂಕು ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು..

ಐದುನೂರು ಜನರ ಮೆರವಣಿಗೆ ಡಾ|| ಹೆಚ್.ಎನ್. ವೃತ್ತದಿಂದ ಹೊರಟು ತಾಲೂಕು ಕಛೇರಿ ಮುಂದೆ ಒಂದು ಘಂಟೆಗೆ ಕಾಲ ಪಿಕೆಟಿಂಗ್ ನಡೆಸಿತು. ಪ್ರತಿಭಟನಾ ಕಾರರನ್ನುದ್ದೇಶಿಸಿ, ರೈತ ಮುಖಂಡರು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರೂ ಆದ ಗಂಗಲಪ್ಪ ಮಾತನಾಡಿ ಕೇಂದ್ರ ಸರ್ಕಾರದ ಈ ಬೆಲೆಏರಿಕೆ ರೈತರು ಮತ್ತು ಕೃಷಿ ಕಾರ್ಮಿಕರ ಬದುಕನ್ನು ವಿನಾಶದ ಅಂಚಿಗೆ ತಲುಪಿಸುತ್ತಿದೆ ಎಂದ ಅವರು ಕೂಡಲೇ ಪಡಿತರ ಬೆಲೆ ಏರಿಕೆ ಕೈ ಬಿಡುವಂತೆ ಆಗ್ರಹಿಸಿದರು. ಭಾಸ್ಕರ ರೆಡ್ಡಿ ಮಾತನಾಡುತ್ತಾ ಕೇಂದ್ರದ ಆರ್ಥಿಕ ನೀತಿ ಸಾಮಾನ್ಯ ಜನರ ಕೋಳ್ಳುವ ನೀತಿಯನ್ನು ಕುಗ್ಗಿಸುವುತ್ತಿದೆ ಎಂದರು. ಪಕ್ಷದ ತಾಲೂಕು ಕಾರ್ಯದರ್ಶಿ ವಿ. ವೆಂಕಟ ಸ್ವಾಮಿ ರೆಡ್ಡಿಹಾಗೂ ಮಹಮ್ಮದ್ ಆಗ್ರಂ ಮೊದಲಾದವರು ಪಾಲೊಂಡಿದ್ದರು

ಗುಡಿ ಬಂಡೆ: ಸುಮಾರು 250 ಜನರು ಸಿಪಿಐ(ಎಂ) ನೇತೃತ್ವದಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಅಂಚೆ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು. ತಾಲೂಕು ಕಾರ್ಯದರ್ಶಿ ಬಾಬು ರೈತ ಮುಖಂಡ ಗಂಗಿ ರೆಡ್ಡಿ ಮುಂತಾದವರು ಪಾಲ್ಗೊಂಡಿದ್ದರು.

ಜೆ.ಓ.ಸಿ. ತರಗತಿಗಳ ಪ್ರಾರಂಭಕ್ಕೆ ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಶಿರಸಿ: ಈಗಾಗಲೇ ಮುಚ್ಚಿರುವ ಜೆ.ಓ.ಸಿ. ತರಗತಿಗಳನ್ನು ಕೂಡಲೇ ಪ್ರಾರಂಭಿಸುವಂತೆ ಒತ್ತಾಯಿಸಿ ಎಸ್.ಎಫ್.ಐ. ನೇತೃತ್ವದಲ್ಲಿ ವಿದ್ಯಾರ್ಥಿಗಳು ಫೆಬ್ರವರಿ 11 ರಂದು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಜೆ.ಓ.ಸಿ. ಕಾಲೇಜಿನಿಂದ ಪ್ರಾರಂಭ ವಾದ ಮೆರವಣಿಗೆಯು ಉಪ ವಿಭಾಗಾಧಿಕಾರಿ ಕಛೇರಿವರೆಗೆ ಪ್ರತಿಭಟನೆ ನಡೆಸಿ ಜೆ.ಓ.ಸಿ. ಕೋರ್ಸುಗಳನ್ನು ಮುಚ್ಚುವ ಸರ್ಕಾರದ ನೀತಿಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು, ಪಠ್ಯಕ್ರಮ ಮುಗಿಯದ ಹೊರತು ಪರೀಕ್ಷೆ ದಿನಾಂಕ ನಿಗದಿಗೊಳಿಸಬಾರದು, ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಧ್ಯಂತರ ಪರಿಕ್ಷೆ ನಡೆಸಿ ಅಂತಿಮ ಪರಿಕ್ಷೆಗೆ ಅನುಮತಿ ನೀಡಬೇಕು ಹಾಗೂ ಜೆ.ಓ.ಸಿ. ಉಪನ್ಯಾಸಕರ ಮತ್ತು ಸಿಬ್ಬಂದಿ ವರ್ಗದ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸ ಬೇಕೆಂಬ ಮನವಿ ಸಲ್ಲಿಸಲಾಯಿತು.

ಎಸ್.ಎಫ್.ಐ. ಮುಖಂಡರಾದ ಸಿ.ಎಫ್. ಈರೇಶ್, ಬಾಲಕೃಷ್ಣ ಗೌಡ, ಈರೇಶ ಕೋರ್ಚರ್, ತುಕಾರಾಮ ನಾಯ್ಕ, ಬಸವ ರಾಜ್ ವಿ.ಎಚ್ ಹಾಗೂ ರಾಜೇಶ ಕರುಣಾಕರ, ಯಶವಂತ ರುದ್ರೇಶ, ಗಣೇಶ, ಎಸ್.ವಿ. ಮುಂತಾದವರು ಪ್ರತಿಭಟನಾ ನೇತೃತ್ವ ವಹಿಸಿದ್ದರು.

ಶಿಕ್ಷಣಕ್ಕೆ ರಿಯಾಯತಿ ಕಡಿತ ದೇಶಕ್ಕೆ ಮಾರಕ

ಶಿರಸಿ: ಶಿಕ್ಷಣ ವಿದ್ಯುತ್ ಹಾಗೂ ಕುಡಿಯುವ ನೀರಿಗೆ ರಿಯಾಯಿತಿ ರದ್ದುಗೊಳಿಸುವ ಅಭಿಪ್ರಾಯವನ್ನು ಪ್ರಧಾನಿ ವಾಜಪೇಯಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ವ್ಯಕ್ತಪಡಿಸಿರು ವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿ ಅಧ್ಯಕ್ಷ ಕೆ.ಎನ್. ಉಮೇಶ್ ಖಂಡಿಸಿದರು. ಅವರು ಫೆಬ್ರವರಿ 20 ರಂದು ನಡೆದ ಎಸ್.ಎಫ್.ಐ.ನ 8ನೇ ರಾಜ್ಯ ಸಮ್ಮೇಳನ ಯಶಸ್ವಿಗೊಳಿಸಿದ ಕಾರ್ಯ ಕರ್ತರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ಡಿ.ವೈ.ಎಫ್.ಐ. ರಾಜ್ಯಾಧ್ಯಕ್ಷರಾದ ಶಾಂತರಾಮ ನಾಯಕ್, ಜಿಲ್ಲಾ ಸಂಚಾಲಕ ವಿಠಲ ಭಂಡಾರಿ, ವಿಮಾ ನೌಕರರ ಮುಖಂಡರಾದ ಸಿ.ಆರ್. ಶಾನ್‌ಭಾಗ್, ಎಸ್.ವಿ. ಭಟ್, ರೈತ ಸಂಘದ ಬಂಗಾರೇಶ್ವರ ಗೌಡ ಮತ್ತು ಪಿ.ಜಿ.ಮಶಾಲ್ದಿ ಪಾಲ್ಗೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಯಮುನಾ ಗಾವಂಕರ ವಹಿಸಿದ್ದರು. ಯುವರಾಜ ಕಂಬಾಳಿ ಮಠ ಕಾರ್ಯಕ್ರಮ ನಿರ್ವಹಿಸಿ, ಈರೇಶ ಸ್ವಾಗತಿಸಿದರೆ, ಬಾಲಕೃಷ್ಣಗೌಡ ವಂದನೆ ಸಲ್ಲಿಸಿದರು.

ಕುರ್ದಿಶ್ ನಾಯಕನ ಅಪಹರಣ-ವ್ಯಾಪಕ ಪ್ರತಿಭಟನೆ

ಕುರ್ದಿಶ್ ಜನರ ಪ್ರಮುಖ ರಾಜಕೀಯ ಮಿಲಿಟರಿ ದನಿಯಾದ ಕುರ್ದಿಶ್ ವರ್ಕರ್ಸ್ ಪಾರ್ಟಿ (ಪಿಕೆಕೆ)ಯ ಪ್ರಮುಖ ನಾಯಕ ಅಬ್ದುಲ್ಲಾ ಬಕಲಾನ್‌ರನ್ನು ಟರ್ಕಿಯ ಪೋಲೀಸರು ಕೆನ್ಯಾದಿಂದ ಅಪಹರಿಸಿ, ಟರ್ಕಿಗೆ ಕೊಂಡು ಹೋಗಿ ಅಲ್ಲಿ ಬಂಧನದಲ್ಲಿಟ್ಟಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದಂತೆ ಯುರೋಪಿನ ತುಂಬಾ ಕುರ್ದಿಶ್ ಜನರಿಂದ ವ್ಯಾಪಕ ಪ್ರತಿಭಟನೆ ನಡೆದಿದೆ. ಕುರ್ದಿಶ್ ನಾಯಕ ಬಕಲಾನ್‌ನ್ನು ಕೆನ್ಯಾದ ಗ್ರೀಕ್ ರಾಯಭಾರಿಯ ಮನೆಯಿಂದ ಅಪಹರಿಸಿ ಬಂಧಿಸಲಾಯಿತು. ಇದರಲ್ಲಿ ಗ್ರೀಕ್, ಟರ್ಕಿ, ಕೆನ್ಯಾ ಸರ್ಕಾರ ಮತ್ತು ಗೂಢಾಚಾರ ಸಂಸ್ಥೆಗಳ ಸಹಕಾರ ವಲ್ಲದೆ, ಇಸ್ರೇಲ್ ಅಮೆರಿಕದ ಗೂಢಚಾರ ಸಂಸ್ಥೆಗಳ ಕೈವಾಡವೂ ಇದೆ ಎಂದು ಸಂಶಯ ಪಡಲಾಗಿದೆ. ಇದರಿಂದ ಉದ್ರಿಕ್ತರಾದ ಕುರ್ದಿಶ್ ಜನ ಗ್ರೀಕ್, ಟರ್ಕಿ, ಇಸ್ರೇಲಿ ರಾಯಭಾರ ಕಚೇರಿಗಳ ಮುಂದೆ ಭಾರಿ ಪ್ರತಿಭಟನೆ ನಡೆಸಿದರು. ಹಲವು ಕಡೆ ಹಿಂಸೆಗೂ ಇಳಿದರು. ಗ್ರೀಕ್‌ನಲ್ಲಿ ಪಾರ್ಲಿಮೆಂಟಿನ ಮುಂದೆ ಇಬ್ಬರು ಆತ್ಮಾಹುತಿ ಸಹ ಮಾಡಿಕೊಂಡಿದ್ದಾರೆ. ಹಲವು ಕಡೆ ಗ್ರೀಕ್, ಟರ್ಕಿ, ಇಸ್ರೇಲಿ ರಾಯಭಾರಿ ಕಚೇರಿಗಳ ಮೇಲೆ ಅಗ್ನಿ ದಾಳಿಯ ವರದಿಗಳು ಬಂದಿವೆ. ಟರ್ಕಿ, ಇರಾಕ್‌ಗಳಲ್ಲೂ ಇಂತಹ ಪ್ರತಿಭಟನೆಗಳು ಕಂಡು ಬಂದಿವೆ.

ಪಿ.ಕೆ.ಕೆ. ಕುರ್ದಿಶ್ ಜನರನ್ನು ಪ್ರತಿನಿಧಿಸುವ ಅತಿ ದೊಡ್ಡ ಸಂಘಟನೆ. ಕುರ್ದಿಶ್ ಜನ ಬಹುಶಃ ತಮ್ಮದೇ ತಾಯ್ನೆಲ ಇಲ್ಲದ ಜಗತ್ತಿನ ಅತಿ ದೊಡ್ಡ ಜನಾಂಗ. ಮುಖ್ಯವಾಗಿ ಇರಾಕ್ ಮತ್ತು ಟರ್ಕಿಗಳಲ್ಲಿ ವಾಸಿಸುವ ಕುರ್ದಿಶ್ ಜನರ ಜಗತ್ತಿನಾದ್ಯಂತ ಒಟ್ಟು ಸಂಖ್ಯೆ 1.7 ಕೋಟಿ. ಇದರಲ್ಲಿ 20 ಲಕ್ಷ ಯುರೋಪಿನ ಹತ್ತು ಹಲವು ದೇಶಗಳಲ್ಲಿ ಹಂಚಿ ಹೋಗಿದ್ದಾರೆ. ಇದರಲ್ಲಿ 10 ಲಕ್ಷ ಜರ್ಮನಿ ಒಂದರಲ್ಲೇ ವಾಸಿಸುತ್ತಿದ್ದಾರೆ. ಟರ್ಕಿ ಮತ್ತು ಇರಾಕ್‌ಗಳು ಕುರ್ದಿಶ್ ಜನರನ್ನು ದಮನಮಾಡಿ ಅವರ ರಾಷ್ಟ್ರೀಯ ಆಕಾಂಕ್ಷೆಗಳನ್ನು ಅದುಮಿಟ್ಟಿದ್ದಾರೆ. ಇದರ ವಿರುದ್ಧ ಕೆ.ಪಿ.ಪಿ. ಗೆರಿಲ್ಲಾ ಹೋರಾಟ ನಡೆಸಿದೆ. ಹಲವು ದಶಕಗಳಿಂದ ಎಲ್ಲೆಲ್ಲೂ ಸ್ವಾತಂತ್ರ್ಯ, ಮಾನವ ಹಕ್ಕುಗಳ ಬಗ್ಗೆ ಮಾತನಾಡುವ ಯುರೋಪಿಯನ್ನರು ಅಮೇರಿಕನ್ನರಿಗೆ ಕುರ್ದಿಶ್ ಜನರ ಸಮಸ್ಯೆ ಕಂಡಿಲ್ಲ. ಕುರ್ದಿಶ್ ಜನರನ್ನು ದಮನ ಮಾಡುವ ತುರ್ಕಿ, ಇರಾಕ್‌ಗಳನ್ನು ಖಂಡಿಸುವ ಬದಲು, ಪಿ.ಕೆ.ಕೆ. ನಾಯಕ ಬಕಲನ್‌ನ್ನು ಭಯೋತ್ಪಾದಕ ಎಂಬ ಹಣೆಪಟ್ಟಿ ಹಚ್ಚಿದ್ದಾರೆ.

ತುರ್ಕಿ, ಉತ್ತರ ಇರಾಕ್‌ನಲ್ಲಿ ಪಿ.ಕೆ.ಕೆ.ಯ ನೆಲೆಗಳ ಮೇಲೆ ದಾಳಿ ನಡೆಸಿದೆ. ಇರಾಕ್‌ನಲ್ಲಿರುವ ಕುರ್ದಿಶ್ ಸಮಸ್ಯೆಯ ಬಗ್ಗೆ ಹಿಂದೆ ಮೊಸಳೆ ಕಣ್ಣೀರು ಸುರಿಸಿದ್ದ ಅಮೇರಿಕ ಮೌನವಾಗಿದೆ. ತುರ್ಕಿ ಬಕಲಾನ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಗಲ್ಲುಶಿಕ್ಷೆ ಕೊಡಲು ಪ್ರಯತ್ನಿಸುತ್ತಿದೆ. ಹೆಚ್ಚು ಕಡಿಮೆ ಮಿಲಿಟರಿ ಸರ್ವಧಿಕಾರದಂತೆ ಆಡಳಿತ ನಡೆಸುವ ತುರ್ಕಿ ಸರ್ಕಾರ ಎಷ್ಟರ ಮಟ್ಟಿಗೆ ಬಕಲಾನ್‌ಗೆ ನ್ಯಾಯಯುತ ವಿಚಾರಣೆ ಕೊಡುತ್ತದೆ ಎನ್ನುವುದು ತೀರಾ ಅನುಮಾನಾಸ್ಪದ.

ಯುರೋಪು, ಅಮೇರಿಕಗಳಲ್ಲಿ ಎಡ ಪಂಥೀಯ ಮಾನವ ಹಕ್ಕು ಕಾರ್ಯಕರ್ತರು ಕುರ್ದಿಶ್ ನಾಯಕನ ಬಂಧನ, ವಿಚಾರಣೆಯನ್ನು ಖಂಡಿಸಿದ್ದಾರೆ. ಕುರ್ದಿಶ್ ಸಮಸ್ಯೆಯನ್ನು ಮಾತುಕತೆಯಿಂದ ಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ. ದಕ್ಷಿಣ ಆಫ್ರಿಕಾ, ಕೆನಡಾದ ಕಮ್ಯುನಿಸ್ಟ್ ಪಕ್ಷಗಳು ಟರ್ಕಿ ಸರ್ಕಾರ ಮಾನವ ಹಕ್ಕುಗಳು ದೊಡ್ಡ ಹಂತಕ ಬಕಲಾನ್‌ನ್ನು ಭಯೋತ್ಪಾದಕ ಎಂದು ಕರೆಯುವುದು ತಪ್ಪು, ಕುರ್ದಿಶ್ ಜನರ ಪ್ರಜಾಸತ್ತಾತ್ಮಕ ರಾಷ್ಟ್ರೀಯ ಆಶಯಗಳನ್ನು ತುಳಿಯುವ ಟರ್ಕಿ ಭಯೋತ್ಪಾದಕ ಬಕಲಾನ್‌ನ್ನು ತತಕ್ಷಣ ಬಿಡುಗಡೆ ಮಾಡಬೇಕು, ಕುರ್ದಿಶ್ ಸಮಸ್ಯೆ ಶಾಂತಿಯುತವಾಗಿ ಬಗೆಹರಿಸಲು ಮಾತುಕತೆ ನಡೆಸಬೇಕು ಎಂದು ಕರೆ ಕೊಟ್ಟಿವೆ.

ಅತಿ ಹೆಚ್ಚು ಕಾಲ ಜೈಲು ಕಂಡ ಕಮ್ಯುನಿಸ್ಟ್ ನಾಯಕ

ವಾರಾಂತ್ಯದಲ್ಲಿ ದಕ್ಷಿಣ ಕೊರಿಯಾದ ಜೈಲಿನಿಂದ ಬಿಡುಗಡೆ ಹೊಂದಲಿರುವ ಹಿರಿಯ ಕಮ್ಯುನಿಸ್ಟ್ ನಾಯಕ ವೋ ಯೆಂಗ್ ಗಾತ್ ಅವರು ಬಹುಶಃ ಜಗತ್ತಿನಲ್ಲಿ ಹೆಚ್ಚು ಕಾಲ ಬಂಧಿಯಾಗಿದ್ದ ವಯೋವೃದ್ಧ ರಾಜಕೀಯ ಕೈದಿ.

71 ವರ್ಷ ವಯಸ್ಸಿನ ಯಂಗ್ ಗಾತ್ ಅವರು ತಮ್ಮ ಜೀವನದ ಮೂರನೆಯ ಎರಡು ಭಾಗವನ್ನು ಜೈಲಿನಲ್ಲಿ ಕಳೆದಿದ್ದಾರೆ. 1958 ರಲ್ಲಿ ದಕ್ಷಿಣ ಕೊರಿಯಾ ಸರ್ಕಾರ ಯಂಗ್‌ಗಾತ್ ಅವರನ್ನು ಬಂಧಿಸಿತ್ತು. ಅಂದಿನಿಂದಲೂ ಅವರು 41 ವರ್ಷಗಳ ಕಾಲ ಜೈಲಿನ ಕೋಣೆಯಲ್ಲಿ ಒಬ್ಬರೇ ಬಂಧನದಲ್ಲಿ ಇದ್ದಾರೆ.

ತಾವು ನಂಬಿದ ಸಿದ್ಧಾಂತವನ್ನು ಅವರು ತಿರಸ್ಕರಿಸಿದ್ದರೆ ತುಂಬಾ ಹಿಂದೆಯೇ ಬಿಡುಗಡೆ ಹೊಂದಬಹುದಿತ್ತು. ಆದರೆ ಇಂಥ ಆಹ್ವಾನವನ್ನು ಅವರು ಅನೇಕ ಬಾರಿ ತಿರಸ್ಕರಿಸಿದರು. ಸಿದ್ಧಾಂತದಲ್ಲಿ ನಂಬಿಕೆಯನ್ನು ತಿರಸ್ಕರಿಸುವ ಬದಲಿಗೆ ಅವರು ಜೈಲನ್ನೇ ಒಪ್ಪಿಕೊಂಡರು.

ಕಮ್ಯುನಿಸ್ಟ್ ಸಿದ್ಧಾಂತವನ್ನು ತಿರಸ್ಕರಿಸುವ ಅಥವಾ ದಕ್ಷಿಣ ಕೊರಿಯಾ ಸರ್ಕಾರಕ್ಕೆ ವಿಧೇಯತೆಯನ್ನು ಸಾರುವ ಯಾವುದೇ ಮುಚ್ಚಳಿಕೆಗೆ ಸಹಿ ಹಾಕಲು ಅವರು ಒಪ್ಪಲಿಲ್ಲ. ಕಳೆದ ವರ್ಷ ದಕ್ಷಿಣ ಕೊರಿಯಾದ ಅಧ್ಯಕ್ಷ ಕಿಮ್ ಡೆ ಜಂಗ್ ಅವರು ಕ್ಷಮಾದಾನ ಘೋಷಿಸಿದಾಗ ಷರತ್ತುಗಳನ್ನು ಒಪ್ಪದ ಅನಾರೋಗ್ಯ ಪೀಡಿತ, ವಯೋವೃದ್ಧ ಯಂಗ್ ಗಾತ್ ಅವರು ಇದಕ್ಕೆ ಮಣಿಯಲಿಲ್ಲ. ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಿಂದ 160 ಕಿ.ಮಿ. ದೂರದ ಜೈಲಿನ ಚಿಕ್ಕ ಕೋಣೆಯಲ್ಲಿ ಒಬ್ಬರೇ ದಶಕಗಳನ್ನು ಕಳೆದ ಗಾತ್ ಅವರು ಇತರರ 16 ಮಂದಿ ಕೈದಿಗಳ ಜತೆ ಮುಂದಿನ ವಾರ ಬಿಡುಗಡೆ ಹೊಂದಲಿದ್ದಾರೆ ಎಂದು ತಿಳಿದುಬಂದಿವೆ.



ಯುಗೋಸ್ಲಾವಿಯದಲ್ಲಿ ಮಿಲಿಟರಿ ಮಧ್ಯ ಪ್ರವೇಶಕ್ಕೆ ಅಮೇರಿಕದ ಹುನ್ನಾರ-ರಶ್ಯದ ಎಚ್ಚರಿಕೆ

ಕೊಸೊವೊ ಬಗ್ಗೆ ಫ್ರಾನ್ಸ್‌ನಲ್ಲಿ ಯುಗೋಸ್ಲಾವಿಯಾ ಮತ್ತು ನಾಟೋದ ನಡುವೆ ನಡೆಯುತ್ತಿರುವ ಮಾತುಕತೆ ಫಲಪ್ರದವಾಗಲಿದ್ದು ಯುಗೋಸ್ಲಾವಿಯದ ಮೇಲೆ ನಾಟೋ ಮತ್ತು ಅಮೇರಿಕದ ಪಡೆಗಳು ದಾಳಿ ನಡೆಸುತ್ತವೆ ಎಂದು ಅಮೇರಿಕ ಬೆದರಿಸಿದೆ. ಇದಕ್ಕಾಗಿ 51 ಹೆಚ್ಚುವರಿ ಯುದ್ಧ ವಿಮಾನಗಳಲ್ಲದೆ, ಹಲವು ಸಾವಿರ ಸೈನಿಕರನ್ನು ಅಮೆರಿಕ ಕಳುಹಿಸಿದೆ. ನಾಟೋದ ಯರೋಪಿಯನ್ ತುಕಡಿಗಳು ಸಹ ಈ ದಾಳಿಯಲ್ಲಿ ಭಾಗವಹಿಸುವವು ಎನ್ನಲಾಗಿದೆ. ಈ ಬೆದರಿಕೆಗೆ ಮಣಿಯಲು ಯುಗೋಸ್ಲಾವಿಯಾ ಅಧ್ಯಕ್ಷ ಮಿಲೋಸೊವಿಕ್ ನಿರಾಕರಿಸಿದ್ದಾರೆ. ಹಣೆಗೆ ಗನ್ನು ಹಿಡಿದು, ಶಾಂತಿ ಮಾತುಕತೆ ಸಾಧ್ಯವಿಲ್ಲ ಎಂದಿದ್ದಾರೆ.

ಈ ನಡುವೆ ಯುಗೋಸ್ಲಾವಿಯಕ್ಕೆ ನಾಟೋ ಬೆದರಿಕೆಯನ್ನು ಖಂಡಿಸಿ ರಶ್ಯನ್ ಅಧ್ಯಕ್ಷರು ಹೇಳಿಕೆ ನೀಡಿದ್ದಾರೆ. ಗಡುವು ಹಾಗೂ ಮಿಲಿಟರಿ ದಾಳಿ ಬೆದರಿಕೆಯ ಅಗತ್ಯವಿಲ್ಲ ಮತ್ತು ಅವಕ್ಕೆ ರಶ್ಯನ್ ಬೆಂಬಲವಿಲ್ಲವೆಂದಿದ್ದಾರೆ.

ಮೂವರಲ್ಲಿ ಒಂದು ರಶ್ಯನ್ ಮಗು ಅನಾಥಾಶ್ರಮದಲ್ಲಿ

ಹಿಂದೆ ರವೀಂದ್ರನಾಥ ಟಾಗೋರ್ ಸೋವಿಯೆತ್ ಒಕ್ಕೂಟಕ್ಕೆ ಭೇಟಿ ನೀಡಿ ಬಂದು ಉದ್ಗರಿಸಿದ್ದರಂತೆ - ಈ ದೇಶದಲ್ಲಿ ಹೆಚ್ಚಿನ ಸವಲತ್ತುಗಳು ಉಳ್ಳ ವರ್ಗ ಒಂದೇ - ಅದು ಮಕ್ಕಳದ್ದು! ಅಂತ. ಮಕ್ಕಳ ಬಗ್ಗೆ ಅಷ್ಟು ಕಾಳಜಿ ವಹಿಸಿದ್ದ ಸಮಾಜವಾದಿ ಸೋವಿಯೆತ್ ಒಕ್ಕೂಟ ವಿಘಟನೆಯಾಗಿ ಬಂಡವಾಳಶಾಹಿಯ ಅಧಃಪತನಕ್ಕೆ ಇಳಿದ ಒಂದು ದಶಕದ ಒಳಗೆ ಈ ವರ್ಗ ಅತ್ಯಂತ ದರಿದ್ರ ವರ್ಗವಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಮೂವರು ಮಕ್ಕಳಲ್ಲಿ ಒಂದು 'ಪಾಲಕರ ಪೋಷಣೆ ಕಳೆದುಕೊಂಡು' ರಶ್ಯಾದ ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವ ಅನಾಥಾಶ್ರಮಗಳಲ್ಲಿ ಬೆಳೆಯುತ್ತಿವೆ.

ರಶ್ಯದ ಈ ಸಾವಿರಾರು ಅನಾಥಾಲಯಗಳಲ್ಲಿ ಇಷ್ಟು ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ ಇಲ್ಲ. ಅನಾಥಾಲಯದಲ್ಲಿರುವ ಈ ಮಕ್ಕಳಿಗೆ ಸಾಕಷ್ಟು ಆಹಾರದ ಪೂರೈಕೆಯೇ ಇಲ್ಲ. ವೈದ್ಯಕೀಯ ಸೇವೆಯ ಮಾತಂತೂ ದೂರ ಉಳಿಯಿತು. ಹಲವು ಕಡೆ ಮಕ್ಕಳನ್ನು ನಿಯಂತ್ರಿಸಲಾಗದೆ, ಹಗಲು ಹೊತ್ತಿನಲ್ಲಿ ಕಟ್ಟಿ ಹಾಕಲಾಗುತ್ತಿದೆಯಂತೆ. ಈ ಅನಾಥಾಲಯಗಳನ್ನು ಕೆಲವು ಮಾನವ ಹಕ್ಕು ಕಾರ್ಯಕರ್ತರು 'ಮರಣ ಕ್ಯಾಂಪ್'ಗಳು ಎಂದು ಕರೆದಿದ್ದಾರೆ.

ಸತ್ಯ ಹೇಳಿದ ವಿಜ್ಞಾನಿ ಸಸ್ಪೆಂಡ್

ಜೀವ ತಂತ್ರಜ್ಞಾನ ಬಳಸಿ ತಯಾರಿಸಿದ ಬೆಳೆಯ ಉತ್ಪನ್ನಗಳನ್ನು (ಆಲೂಗಡ್ಡೆ) ತಿಂದ ಕೆಲವು ಇಲಿಗಳು ಆರೋಗ್ಯ ಸಮಸ್ಯೆಗಳನ್ನು ಬೆಳೆಸಿಕೊಂಡಿವೆ ಎಂಬ ತೀರ್ಮಾನಕ್ಕೆ ಒಬ್ಬ ಸ್ಕಾಟ್‌ಲ್ಯಾಂಡ್‌ನ ಸಂಶೋಧನಾ ಸಂಸ್ಥೆಯ ವಿಜ್ಞಾನಿಯೊಬ್ಬ ಬಂದು ಆತ ತನ್ನ ಸಂಶೋಧನೆ ಬಗ್ಗೆ ಪ್ರಚಾರ ಪಡಿಸಿದಾಗ ಆತನನ್ನು ಆ ಇನ್ಸ್‌ಟಿಟ್ಯೂಟ್ ಸಸ್ಪೆಂಡ್ ಮಾಡಿದೆ. ಈ ಬಗ್ಗೆ ಹೆಚ್ಚು ವಿಚಾರಿಸಲಾಗಿ ಆ ಇನ್ಸ್‌ಟಿಟ್ಯೂಟನ್ ಜಗತ್ತಿನ ದೈತ್ಯ ಕಂಪನಿ ಮೊನ್‌ಸಾಂಟೊ 2.3 ಲಕ್ಷ ಡಾಲರಿನಷ್ಟು ಧನಸಹಾಯ ಮಾಡುತ್ತಿತ್ತು. ಆ ಕಂಪನಿ ಜೀವ ತಂತ್ರಜ್ಞಾನ ಬಳಸಿ ತಯಾರಿಸಿದ ಹಲವು ಉತ್ಪನ್ನಗಳ ಬೀಜ ಮಾರುವ ದೊಡ್ಡ ವಹಿವಾಟು ನಡೆಸುತ್ತಿದ್ದು, ಅದು ಅಪಾಯಕಾರಿ ಎಂಬ ಟೀಕೆಯನ್ನು ಅಲ್ಲಗಳೆಯುತ್ತಾ ಬಂದಿದೆ. ಈ ಬಗ್ಗೆ ವಿಜ್ಞಾನಿಯೊಬ್ಬ ಮಾಹಿತಿ ನೀಡುವುದು ಆ ಕಂಪನಿಯ ಹಿತಾಸಕ್ತಿಗೆ ಒಳ್ಳೆಯದಲ್ಲ. ಆದ್ದರಿಂದ ಈ ಸಸ್ಪೆನ್ಶನ್. ಈ ಇನ್ಸ್‌ಟಿಟ್ಯೂಟ್‌ನ ಈ ಕ್ರಮವನ್ನು 13 ದೇಶಗಳಿಂದ 20 ಪ್ರಮುಖ ವಿಜ್ಞಾನಿಗಳು ಖಂಡಿಸಿದ್ದಾರೆ.

ಬೆಕ್ಟೀರಿಯಾ ಯುದ್ಧಕ್ಕೆ ಬ್ರಿಟಿಷ್ ತಯಾರಿ?

ಬ್ರಿಟಿಷ್ ಸೈನ್ಯ ಬೆಕ್ಟೀರಿಯಾ ಯುದ್ಧದ ಕವಾಯತು ಆಗಾಗ ನಡೆಸುತ್ತಿದ್ದು ಇದಕ್ಕೆ ಇ-ಕಾಲ್ ಮತ್ತಿತರ ಬೆಕ್ಟೀರಿಯಾವನ್ನು ಬಳಸುತ್ತಿದೆ. ಅದು ಇಂತಹ ಪ್ರಯೋಗಗಳ ಪ್ರದೇಶ ದಾಟಿ, ಜನಜೀವನದ ಪ್ರದೇಶಗಳಿಗೆ ಪ್ರವೇಶಿಸಿ ಅಪಾಯ ಉಂಟು ಮಾಡಬಹುದು ಎಂದು ಹಲವು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಬ್ರಿಟಿಷ್ ಸರ್ಕಾರ 60 ರ ದಶಕದಿಂದಲೂ ಇಂತಹ ಪ್ರಯೋಗವನ್ನು ದೇಶದ ಒಳಗೆ ನಡೆಸಿದೆ. ಕೆಲವೊಮ್ಮೆ ಬೆಕ್ಟೀರಿಯಾಗಳನ್ನು ವಿಮಾನಗಳಿಂದ ಸಿಂಪಡಿಸಲಾಗುತ್ತದೆ. ಕೆಲವೊಮ್ಮೆ ಲಂಡನಿನ ಮೆಟ್ರೋಗಳಲ್ಲಿ ಸಿಂಪಡಿಸಲಾಯ್ತು ಎಂದು ವರದಿಯಾಗಿದ್ದು, ಇದು ತೀವ್ರ ಆತಂಕಕ್ಕೆ ಕಾರಣವಾಗಿದೆ. ಹಲವು ಎಂಪಿಗಳು ಈ ಬಗ್ಗೆ ಸರ್ಕಾರ ಹೇಳಿಕೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಕ್ರೂರ ಸರ್ವಾಧಿಕಾರಿ ಪಿನೋಶೆ ಬೆಂಬಲಕ್ಕೆ ಪೋಪ್

ಚಿಲಿಯ ಕ್ರೂರ ಸರ್ವಾಧಿಕಾರಿ ಪಿನೋಶೆ ಬ್ರಿಟನ್‌ನಲ್ಲಿ ಮಾನವ ಹಕ್ಕು ಉಲ್ಲಂಘನೆ ಬಗ್ಗೆ ಮೊಕದ್ದಮೆ, ಸ್ಪೈನ್‌ಗೆ ಗಡೀಪಾರು ಕ್ರಮ ಎದುರಿಸುತ್ತಿದ್ದಾನೆ. ಆತನಿಗೆ ಅನಿರೀಕ್ಷಿತ ವಲಯಗಳಿಂದ ಬೆಂಬಲ ಬಂದಿದೆ. ಚೀಲಿಯ ಮಿಲಿಟರಿ ಆಡಳಿತ ವರ್ಗ ಬಿಟ್ಟರೆ ಆತನಿಗೆ ಬೆಂಬಲವಿಲ್ಲ. ಬೇರೆಯವರೆಲ್ಲಾ ಆತನಿಗೆ ತಕ್ಕ ಶಿಕ್ಷೆಯಾಗಬೇಕು ಎನ್ನುವವರು. ಪೋಪ್ ಬ್ರಿಟಿಷ್ ಸರ್ಕಾರಕ್ಕೆ ಕಾಗದ ಬರೆದು ಆತ ಧಾರ್ಮಿಕ ಪ್ರವೃತ್ತಿಯವನು, ಆತ ಸ್ವಾತಂತ್ರ್ಯದ ರಕ್ಷಣೆಗೆ ಕಾರ್ಯರಚನೆ ಮಾಡಿದ್ದ - ಎಂಬ ಅಪ್ಪಟ 'ಸಿಐಎ' ಭಾಷೆಯಲ್ಲಿ ಆತನನ್ನು ರಕ್ಷಣೆ ಮಾಡಿದ್ದಾರೆ ಎಂದು ವರದಿಯಾಗಿದೆ. ಪೋಪರ ಈ ಅನಗತ್ಯ ಔದಾರ್ಯದ ಬಗ್ಗೆ ಮಾನವ ಹಕ್ಕು ಕಾರ್ಯಕರ್ತರು, ಪ್ರಜಾ ಪ್ರಭುತ್ವವಾದಿಗಳು ಆತಂಕಗೊಂಡಿದ್ದಾರೆ.

ಜೀನ್ಸ್ ಹಾಕಿಕೊಂಡ ಮಹಿಳೆಯ ರೇಪ್ ಸಾಧ್ಯವಿಲ್ಲ - ಇಟಲಿ ಕೊರ್ಟಿನ ತಿಕ್ಕಲು ತೀರ್ಪಿನ ವಿರುದ್ಧ ಮಹಿಳಾ ಚಳುವಳಿ

ಜೀನ್ಸ್ ಹಾಕಿಕೊಂಡ ಮಹಿಳೆಯ ಮೇಲೆ ಬಲತ್ಕಾರ ಮಾಡಲು ಸಾಧ್ಯವೇ ಇಲ್ಲ ಎಂಬ ತೀರ್ಮಾನದೊಂದಿಗೆ ಮಹಿಳೆಯೊಬ್ಬಳು 'ರೇಪ್' ಸಮಯದಲ್ಲಿ ಜೀನ್ಸ್ ಧರಿಸಿದ್ದಳು ಎಂಬ ಒಂದೇ ಕಾರಣಕ್ಕೆ ಆ ಕೇಸನ್ನು ವಜಾ ಮಾಡಿದ್ದ ಇಟಲಿಯ ಒಂದು ಕೋರ್ಟಿನ ತೀರ್ಪು ತೀವ್ರ ವಿವಾದಕ್ಕೆ ಕಾರಣವಾಗಿದೆ. ಈ ತೀರ್ಪಿನ ವಿರುದ್ಧ ಇಟಲಿಯ ಮಹಿಳಾ ಚಳುವಳಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಇಟಲಿಯ ಮಹಿಳಾ ಎಂ.ಪಿಗಳು ಎಲ್ಲರೂ ಜೀನ್ಸ್ ಧರಿಸಿ ಪಾರ್ಲಿಮೆಂಟಿಗೆ ಬಂದು 'ರೇಪ್‌ಗೆ ಜೀನ್ಸ್ ಕವಚವಾಗದಿರಲಿ' ಎಂಬ ಪ್ಲೇಕಾರ್ಡ್ ಜತೆ ಪ್ರತಿಭಟಿಸಿದರು.

ಇತ್ತೀಚೆಗೆ ಮಹಿಳೆಯರ ವಿರುದ್ಧ ಇಟಲಿಯ ಕೋರ್ಟು ಗಳಲ್ಲಿ ವಿಚಿತ್ರ ತೀರ್ಪುಗಳು ಬಂದಿದ್ದು, ಮಹಿಳಾ ಚಳುವಳಿ ಈ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಮುನಿಸಿಪಲ್ ಚುನಾವಣೆಯ ಬಹಿಷ್ಕಾರಕ್ಕೆ ಕರೆ ಬಾಂಗ್ಲಾ ದೇಶದಲ್ಲಿ ಹೊಸ ಬಿಕ್ಕಟ್ಟು

ಬಾಂಗ್ಲಾದೇಶವನ್ನು ಕಳೆದ ಹಲವು ವರ್ಷಗಳಿಂದ ರಾಜಕೀಯ ಬಿಕ್ಕಟ್ಟು ಸತತವಾಗಿ ಕಾಡುತ್ತಿದೆ. ಸಾರ್ವತ್ರಿಕ ಮುಷ್ಕರ, ಬಂದ್, ಪಾರ್ಲಿಮೆಂಟ್ ಬಹಿಷ್ಕಾರ ಸತತವಾಗಿ ನಡೆದು ದೇಶದ ಗತಿ ನಿಂತೇ ಹೋಗಿದೆ. ಈಗ ಶೇಖ್ ಹಸೀನಾ ಸರ್ಕಾರ ನಡೆಸಬೇಕೆಂದಿರುವ ಮುನಿಸಿಪಲ್ ಚುನಾವಣೆ ಬಗೆಗೆ ತೀವ್ರ ಬಿಕ್ಕಟ್ಟನ್ನು ಬೇಗಂ ಜಿಯಾ ಹಾಗೂ ಆಕೆಯ ಸಹಚರ ಪಕ್ಷಗಳು ಸೃಷ್ಟಿಸುತ್ತಿವೆ. ವಿರೋಧ ಪಕ್ಷಗಳ ನಾಲ್ಕು ಅಂಶದ ಬೇಡಿಕೆ ಮನ್ನಿಸದೆ ಮುನಿಸಿಪಲ್ ಚುನಾವಣೆ ನಡೆಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಪ್ರಸ್ತುತ ಚುನಾವಣಾ ಕಮೀಶನರ್ ರಾಜೀನಾಮೆ, ಎಲ್ಲಾ ರಾಜಕೀಯ ಪಕ್ಷಗಳ ಜತೆ ಮಾತುಕತೆ ನಡೆಸಿ ಹೊಸ ಚುನಾವಣಾ ಕಮೀಶನ್ ಮತ್ತು ಕಮೀಶನರ್ ನೇಮಕ, ಮುನಿಸಿಪಲ್ ಪ್ರದೇಶಗಳಲ್ಲಿ ಗುರುತಿನ ಚೀಟಿ ಹಂಚಿಕೆ ಮತ್ತು ವಿರೋಧ ಪಕ್ಷ ಕಾರ್ಯಕರ್ತರ, ನಾಯಕರ ಮೇಲಿನ ತಪ್ಪು ಕೇಸುಗಳನ್ನು ಹಿಂತೆಗೆದುಕೊಳ್ಳುವುದು-ಇವೇ ವಿರೋಧ ಪಕ್ಷದ ನಾಲ್ಕು ಬೇಡಿಕೆಗಳು. ಇದನ್ನು ಶೇಖ್ ಹಸೀನಾ ಸರ್ಕಾರ ತಿರಸ್ಕರಿಸಿದ್ದು ಬಿಕ್ಕಟ್ಟಿಗೆ ಕಾರಣವಾಗಿದೆ. ಮುನಿಸಿಪಾಲ್ ಚುನಾವಣೆಯು ನಡೆಯಬೇಕಾಗಿರುವ ಫೆ. 22 ಹಿಂದಿನ ದಿನದಿಂದ ನಾಲ್ಕು ದಿನಗಳ ಕಾಲ ಹರತಾಳ, ಬಂದ್, ಚುನಾವಣಾ ಬಹಿಷ್ಕಾರವನ್ನು ಬೇಗಂ ಜೀಯಾ ಮತ್ತು ಆಕೆಯ ಸಹಚರ ಪಕ್ಷಗಳು ಘೋಷಿಸಿವೆ.

ವಾಜಪೇಯಿ ಲಾಹೋರ್ ಬಸ್ ಪ್ರವಾಸ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ

ಪ್ರಧಾನ ಮಂತ್ರಿ ವಾಜಪೇಯಿಯವರ ಲಾಹೋರ್ ಭೇಟಿ ಮತ್ತು ಪಾಕಿಸ್ತಾನದ ಪ್ರಧಾನಿ ಜತೆ ನಡೆಸಿದ ಮಾತುಕತೆ, ಪಾಕಿಸ್ತಾನ ದ ಜತೆ ಮಾತುಕತೆ ಮುಂದುವರೆಸುವುದಕ್ಕೆ ಅನುಕೂಲಕರ ವಾತಾವರಣ ನಿರ್ಮಿಸಿದೆ. ಸಿಪಿಐ(ಎಂ) ಭಾರತ-ಪಾಕಿಸ್ತಾನಗಳ ನಡುವಣ ಸಂಬಂಧ ಸುಧಾರಿಸಬೇಕೆಂದು ಸತತವಾಗಿ ಒತ್ತಾಯಿಸುತ್ತಾ ಬಂದಿದೆ. ಎರಡೂ ದೇಶಗಳ ನಡುವೆ ವಾಣಿಜ್ಯ, ಸಾಂಸ್ಕೃತಿಕ ಸಂಬಂಧಗಳು ಬೆಳೆದು ಜನರ ನಡುವೆ ಸಂಪರ್ಕ ಬೆಳೆಯಬೇಕು, ಕಾಶ್ಮೀರ ದಂತಹ ದ್ವಿಪಕ್ಷೀಯ ಸಮಸ್ಯೆಗಳನ್ನು ಮಾತುಕತೆ ಮೂಲಕ ಬಗೆಹರಿಸಬೇಕೆಂದು ಒತ್ತಾಯಿಸುತ್ತಾ ಬಂದಿದೆ.

ಆದರೆ ಪೋಖ್ರಾನ್‌ನಲ್ಲಿ ಅಣ್ವಸ್ತ್ರ ಪರೀಕ್ಷೆ ಹಾಗೂ ಪಾಕಿಸ್ತಾನದ ಪ್ರತಿಕ್ರಿಯೆ ಪರೀಕ್ಷೆಗಳು ಹೊಸ ಬಿಗುವು ತಂದು ಪರಿಸ್ಥಿತಿಯನ್ನು ಹದಗೆಡಿಸಿತ್ತು. ಲಾಹೋರದಲ್ಲಿ ನಡೆಸಿದ ಮಾತುಕತೆಗಳು ಅಣ್ವಸ್ತ್ರ ಪೈಪೋಟಿಯನ್ನು ಈ ಉಪಖಂಡದಲ್ಲಿ ತಪ್ಪಿಸುವುದು ಹೇಗೆ ಎಂಬ ಬಗ್ಗೆ ವಿವರವಾದ ಚರ್ಚೆಯನ್ನು ಕೈಗೆತ್ತಿಕೊಂಡಿಲ್ಲ. ಇದು ಎರಡೂ ದೇಶಗಳು ಅಣ್ವಸ್ತ್ರಗಳನ್ನು ಬೆಳೆಸುವುದಿಲ್ಲ, ಬಳಸುವುದಿಲ್ಲ ಎಂಬ ಬಗ್ಗೆ ಒಪ್ಪಂದಕ್ಕೆ ಬಂದರೆ ಮಾತ್ರ ಸಾಧ್ಯ.

ಅಣ್ವಸ್ತ್ರ ಪೈಪೋಟಿ ತಪ್ಪಿಸುವ ಬಗೆಗಾಗಲಿ, ಮತ್ತಿತರ ವಿವಾದಗಳ ಬಗೆಗಾಗಲಿ ದ್ವಿಪಕ್ಷೀಯ ಮಾತುಕತೆಗಳನ್ನು ಮುಂದುವರೆಸಬೇಕು. ವಿದೇಶಿ ಒತ್ತಡವನ್ನು ತಿರಸ್ಕರಿಸಬೇಕು. ಪೋಖ್ರಾನ್ ಪರೀಕ್ಷಣೆ ನಂತರ ಅಂಧ ದೇಶಾಭಿಮಾನದ ನಿಲುವು ತೆಗೆದು ಕೊಂಡ ವಾಜಪೇಯಿ ಸರ್ಕಾರ, ನೆರೆಹೊರೆ ಜತೆ ಸಂಬಂಧ ಉತ್ತಮಪಡಿಸುವ ಬಗ್ಗೆ ಕಳಕಳಿ ಇದ್ದರೆ, ಚೀನಾದ ಜತೆಗೆ ಸಂಬಂಧ ಸರಿಪಡಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು.

ಮುಂದಿನ ಮಾತುಕತೆಗೆ ತಕ್ಕ ಸೌಹಾರ್ದ ವಾತಾವರಣ ಸೃಷ್ಟಿಸಲು ಬಿಜೆಪಿಯನ್ನು ಸಂಘ ಪರಿವಾರ ಅಲ್ಪಸಂಖ್ಯಾತ ವಿರೋಧಿ ಮತ್ತು ಪಾಕಿಸ್ತಾನವಿರೋಧಿ ವಾತಾವರಣ ಕಲುಷಿತ ಮಾಡುವ ಕೆಲಸ ಕೈಬಿಡಬೇಕು.

ಕಲ್ಕತ್ತಾ - ಢಾಕ್ಕಾ ಬಸ್ ಬಗ್ಗೆ ಒಪ್ಪಂದ

ಲಾಹೋರ್ ಬಸ್ ಸುದ್ದಿಯಲ್ಲಿರುವ ಹಾಗೆ ಢಾಕ್ಕಾ ಬಸ್ ಬಗೆಗೂ ಒಳ್ಳೆಯ ಸುದ್ದಿ ಬಂದಿದೆ. 1997 ರಲ್ಲಿ ಭಾರತ - ಬಾಂಗ್ಲಾದೇಶ ಸಂಬಂಧ ಉತ್ತಮವಾಗಲು ಆರಂಭವಾದಂದಿನಿಂದ ಚರ್ಚಿಸಲಾಗುತ್ತಿದ್ದ, ಆದರೂ ನಿರ್ಧಾರಕ್ಕೆ ಬರುವಲ್ಲಿ ನೆನೆಗುದಿಗೆ ಬಿದ್ದಿದ್ದ ಕಲ್ಕತ್ತಾ-ಢಾಕ್ಕಾ ಬಸ್ಸು ಸೇವೆ ಆರಂಭಿಸುವ ಯೋಜನೆಗೆ ಕೊನೆಗೂ ಸಹಿ ಬಿದ್ದಿದೆ. ಮಾರ್ಚ್ 7 ರಿಂದ ಬಸ್ ಸೇವೆ ಆರಂಭಿಸುವ ಬಗ್ಗೆ ಒಪ್ಪಂದ ಆಗಿದೆ. ಮೂರು ತಿಂಗಳ ನಂತರ ಬಸ್ಸುಗಳ ಸಂಖ್ಯೆಯನ್ನು ಪರಿಶೀಲಿಸಲಾಗುವುದು. ಅಗತ್ಯವಿದ್ದರೆ ಹೆಚ್ಚಿಸಲಾಗುವುದು. ಈ ಒಪ್ಪಂದವನ್ನು ಸಾಧ್ಯ ಮಾಡುವಲ್ಲಿ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಕಲ್ಕತ್ತಾ ಭೇಟಿ ಸಮಯದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುರವರು ಆ ಬಗ್ಗೆ ನಡೆಸಿದ ಮಧ್ಯಸ್ಥಿಕೆ ಕೊನೆಗೂ ಫಲ ಕೊಟ್ಟಿದೆ. ಇದು ಕಲ್ಕತ್ತಾ-ಢಾಕಾದ ನಡುವಿನ 300 ಕಿ.ಮಿ.ಗಳ ಪ್ರಯಾಣದ ಪ್ರಶ್ನೆ ಮಾತ್ರವಲ್ಲ. ಎರಡೂ ದೇಶಗಳ ನಡುವಣ ಸಂಬಂಧ ಸಾಮಾನ್ಯಗೊಳಿಸುವ, ಸುಧಾರಿಸುವ ಪ್ರಶ್ನೆ.

ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಈ ಬಸ್ ಸೇವೆಗೆ ಎಲ್ಲಾ ತೆರಿಗೆಗಳನ್ನು ವಿನಾಯಿಸಿಗೊಳಿಸಿದೆ.

ಅಡ್ಮಿರಲ್ ಭಾಗವತ್ ವಜಾ ಪ್ರಕರಣ



ರಕ್ಷಣಾ ಮಂತ್ರಿಗಳು ರಾಜೀನಾಮೆ ನೀಡಬೇಕು

– ಸಿಪಿಐ(ಎಂ)

ವಜಾಗೊಂಡ ಹಿಂದಿನ ನೌಕಾಸೇನಾ ಮುಖ್ಯಸ್ಥ ಅಡ್ಮಿರಲ್ ವಿಷ್ಣು ಭಾಗವತ್ ತನ್ನ ವಜಾ ರಕ್ಷಣಾ ಮಂತ್ರಿಗಳೇ ಸ್ವತಃ ನಡೆಸಿದ 'ರಾಜಕೀಯ ಮಿಲಿಟರಿ ಕ್ಷಿಪ್ರಕ್ರಾಂತಿ' ಎಂದು ವರ್ಣಿಸಿದ್ದಾರೆ. ರಕ್ಷಣಾ ಮಂತ್ರಿಗಳು 'ಸೇನಾಧಿಪತ್ಯದ ಸರಪಣಿಯನ್ನು ಬುಡಮೇಲು ಮಾಡಿ' ಈ ಕೃತ್ಯ ಎಸಗಿದ್ದಾರೆ ಎಂದು ಅಡ್ಮಿರಲ್ ಭಾಗವತ್ ಆಪಾದಿಸಿದ್ದಾರೆ.

ತಮ್ಮ ವಜಾದ ನಂತರ ಎರಡು ತಿಂಗಳಿಗೂ ಹೆಚ್ಚು ಕಾಲ ಮೌನವಾಗಿದ್ದ ಅಡ್ಮಿರಲ್ ಭಾಗವತ್ ಫೆಬ್ರವರಿ 22 ರಂದು ನವದೆಹಲಿಯಲ್ಲಿ ಮೊದಲ ಬಾರಿಗೆ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಈ ಘಟನೆಯ ಬಗ್ಗೆ ತಮ್ಮ ಕಣ್ಣೋಟವನ್ನು ಮುಂದಿಟ್ಟರು. ರಕ್ಷಣಾ ಮಂತ್ರಿಗಳು ಕಳೆದ ಜುಲೈ/ಆಗಸ್ಟ್‌ನಲ್ಲೇ ಈ ಬಗ್ಗೆ ನಿರ್ಧರಿಸಿದಂತೆ ಕಾಣುತ್ತದೆ ಎಂದು ಆಪಾದಿಸಿದ ಅವರು ಮುಂದಿನ ನೌಕಾ ಸೇನಾಧಿಪತಿ ಯಾರಾಗಬೇಕು ಎಂಬ ಬಗ್ಗೆ ಅಗತ್ಯ ವಿಧಿ-ವಿಧಾನಗಳನ್ನು ಅನುಸರಿಸದೆ ಖಾಸಗೀ ನಿರ್ಣಯಕ್ಕೆ ಬಂದರು ಎಂದು ತಿಳಿಸಿದರು.

ರಾಜಕಾರಣಿಗಳು ಮತ್ತು ಶಸ್ತ್ರಾಸ್ತ್ರ ವ್ಯಾಪಾರಿಗಳ ನಡುವಿನ ಶಾಮೀಲಿನ ಬಗ್ಗೆ ಹೇಳುತ್ತಾ ಅವರು ಹಿಂದೆ ನೌಕಾಸೇನಾಧಿಪತಿಯಾಗಿದ್ದು ಈಗ ಶಸ್ತ್ರಾಸ್ತ್ರ ವ್ಯಾಪಾರಿಯಾಗಿರುವ ಅಡ್ಮಿರಲ್ ನಂದಾ ಮತ್ತು ಫರ್ನಾಂಡೀಸ್ ನಡುವೆ ಸಂಪರ್ಕಗಳಿವೆ ಎಂದು ಆಪಾದಿಸಿದರು. ಶಸ್ತ್ರಾಸ್ತ್ರ ವ್ಯಾಪಾರಿಗಳು ಹೇಗೆ ನೌಕಾ ಸೇನಾಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾರೆ ಎಂದು ರಕ್ಷಣಾ ಮಂತ್ರಿಗಳಿಗೆ 1998 ರ ಮೇ 4 ಹಾಗೂ 8 ರಂದು ಪೂರ್ಣವಾಗಿ ತಿಳಿಸಲಾಗಿದ್ದರೂ ಈ ಸಂಪರ್ಕ ಮುಂದುವರೆದಿದೆ ಎಂದು ಆಪಾದಿಸಿದ ಅಡ್ಮಿರಲ್ ಭಾಗವತ್ 'ಎಲ್.ಟಿ.ಟಿ.ಇ. ಮ್ಯಾನ್ಮಾರ್ ಹಾಗೂ ಈಶಾನ್ಯ ಭಾರತದ ಬಂಡುಕೋರರು ರಕ್ಷಣಾ ಮಂತ್ರಿಗಳ ಮನೆಯಿಂದ ಹೇಗೆ ಕಾರ್ಯಾಚರಣೆ ನಡೆಸುತ್ತಾರೆ' ಎಂಬ ಬಗ್ಗೆ ವಿವರಣೆ ಬೇಕಾಗಿದೆ ಎಂದರು. 1996 ರಿಂದ ನಡೆಸುತ್ತಿರುವ ಅಂಡಮಾನ್ ಕರಾವಳಿಯಲ್ಲಿ ಶಸ್ತ್ರಾಸ್ತ್ರಗಳನ್ನು, ಮಾರಕ ದ್ರವ್ಯಗಳನ್ನು ಸಾಗಿಸುವ ಹಡಗುಗಳನ್ನು ತಡೆಯುವ ಕೆಲಸವನ್ನು ತನ್ನ ಅನುಮತಿ ಯಿಲ್ಲದೆ ನಡೆಸಬಾರದು ಎಂದು ರಕ್ಷಣಾ ಮಂತ್ರಿಗಳು ಜುಲೈ 27 ರಂದು ನಿರ್ಧರಿಸಿ ದಾಗ ಮೂರೂ ಸೇನಾಪಡೆಗಳ ಮುಖ್ಯಸ್ಥರು ಆಗಸ್ಟ್ 8 ರಂದು ಅವರನ್ನು ಭೇಟಿ ಮಾಡಿ ಈ ಕಾರ್ಯಾಚರಣೆಗೆ ಪೂರ್ವಾನುಮೋದನೆ ಬೇಕಿಲ್ಲ ಎಂದು ತಿಳಿಸಬೇಕಾಗಿ ಬಂತು ಎಂದೂ ಅಡ್ಮಿರಲ್ ಭಾಗವತ್ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ನೀಡಿರುವ ಹೇಳಿಕೆ "ಅಡ್ಮಿರಲ್ ಭಾಗವತ್‌ರನ್ನು ನೌಕಾಸೇನಾಧಿಪತಿ ಸ್ಥಾನದಿಂದ ವಜಾ ಮಾಡಿದ್ದು ರಕ್ಷಣಾ ಮಂತ್ರಿಗಳು ಕೈಗೊಂಡ ಒಂದು ಅಭೂತಪೂರ್ವ ಹಾಗೂ ಅಘಾತಕಾರೀ ಕ್ರಮ. ಸೇನಾಪಡೆಗಳ ನೈತಿಕ ಸ್ಥೈರ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿರುವ ಈ ಸ್ವೇಚ್ಛಾಚಾರಿ ಕ್ರಮದ ಬಗ್ಗೆ ವಾಜಪೇಯಿ ಸರಕಾರ ತನ್ನ ನಂಬಲರ್ಹ ವಿವರಣೆ ನೀಡಿಲ್ಲ. ತನ್ನ ವಜಾದ ಘಟನೆಯ ಬಗ್ಗೆ ಅಡ್ಮಿರಲ್ ಭಾಗವತ್ ಮಾಧ್ಯಮಗಳಿಗೆ ನೀಡಿರುವ ಮಾಹಿತಿ ಸೇನಾ ಪಡೆಗಳ ಸಮಗ್ರತೆ ಹಾಗೂ ಭದ್ರತೆಯ ಪ್ರಮುಖ ವಿಷಯಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ' ಎಂದಿದೆ.

ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್‌ರು ಇಂತಹ ಪರಿಸ್ಥಿತಿ ಉಂಟು ಮಾಡಿದ್ದಕ್ಕೆ ರಾಜೀನಾಮೆ ನೀಡಬೇಕು ಎಂದು ಹೇಳಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ಇಡೀ ಪ್ರಕರಣದ ಬಗ್ಗೆ ತನಿಖೆ ಮಾಡಲು ಸುಪ್ರೀಕೋರ್ಟಿನ ಪ್ರಸಕ್ತ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ. ○

STATEMENT OF THE OWNERSHIP ETC. OF THE WEEKLY NEWSPAPER "AIKYARANGA"

Form IV
(see Rule 8)

1. Place of Publication	:	12,18th cross, S.R.Nagar Bangalore 560 027
2. Periodicity of Publication	:	Weekly
3. Printer's Name	:	S.Suryanarayana Rao
(Whether Citizen of India? If Foreigner, State the Country of Origin)	:	Indian
Address:	:	12, 18th Cross, S.R.Nagar, Bangalore-560027
4. Publisher's Name	:	S.Suryanarayana Rao
(Whether Citizen of India? if foreigner, State the Country of Origin)	:	Indian
Address	:	12, 18th Cross, SR. Nagar, Bangalore-560027
5. Editor's Name	:	G.N.Nagaraj
(Whether Citizen of India? If Foreigner, State the Country of Origin)	:	Indian
Address	:	12, 18th Cross, S.R.Nagar, Bangalore
6. Name and addresses of individuals who own the Newspaper and partners or shareholders holding more than one percent of the total capital.	:	Karnataka State Committee of Communist Party of India (Marxist) 12, 18th Cross, S.R.Nagar, Bangalore-560 027

I.S. Suryanarayana Rao, hereby declare that the particulars given above are true to the best of my knowledge and belief

Sd/-
S.Suryanarayana Rao
Publisher

Date: 21..2.1999

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ...........

ಪುಟ 1 ರಿಂದ

ಮಾಡಬೇಕೆಂಬುದು ಆಗ ಮೂಡಿಬಂದಿದ್ದ ಸರ್ವಸಮ್ಮತಿ. ಆದರೆ ಒಂದೇ ವರ್ಷದೊಳಗೆ ಈ ಗ ಬಿಜೆಪಿಯ ಮಿತ್ರರಾಗಿರುವ ಈ ಮುಖಂಡರೆಲ್ಲಾ ಯಾವುದೇ ನಾಚಿಕೆಯಿಲ್ಲದೆ ಈ ಸರ್ವಸಮ್ಮತಿಯನ್ನು ಉಲ್ಲಂಘಿಸಿದ್ದಾರೆ ಎಂದು ಈ ಸಂಪಾದಕೀಯ ಟಿಪ್ಪಣಿ ನೆನಪಿಸಿದೆ.

ರಣವೀರ ಸೇನೆಯ ಹತ್ಯಾಕಾಂಡ ಬಿಜೆಪಿಗೆ ಕೇವಲ ಒಂದು ನೆಪವಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ರಣವೀರ ಸೇನೆ ಬಿಹಾರದ ಮೇಲ್ಜಾತಿ ಭೂಮಾಲಕರ ಖಾಸಗಿ ಸೇನೆ. ಈ ಮಂದಿಯೇ ಬಿಜೆಪಿಯ ಬೆನ್ನೆಲುಬು ಎಂದೂ ಎಲ್ಲರಿಗೂ ಗೊತ್ತಿದೆ. 1977 ರಿಂದ ಪ್ರತಿವರ್ಷವೂ ಇಂತಹ ಘಟನೆಗಳು ನಡೆದಿವೆ. ರಾಷ್ಟ್ರಪತಿ ಆಳ್ವಿಕೆಯ ಹೇರಿಕೆಯ ನಂತರವೂ ನಡೆದಿದೆ. ಆದ್ದರಿಂದ ರಾಷ್ಟ್ರಪತಿ ಆಳ್ವಿಕೆ ಹೇರಿಕೆ ಇದಕ್ಕೆ ಪರಿಹಾರವಲ್ಲ ಎಂಬುದೂ ಸ್ಪಷ್ಟ.

"ಕಾಂಗ್ರೆಸ್ ಪಕ್ಷ ಎರಡು ಸದನಗಳಲ್ಲಿ 356ನೇ ಕಲಮಿನ ಈ ದುರುಪಯೋಗವನ್ನು ವಿರೋಧಿಸಲು ನಿರ್ಧರಿಸಿರುವಾಗ ಬಿಹಾರದಲ್ಲಿ ರಾಬ್ಡಿ ದೇವಿ ಸರ್ಕಾರ ಮತ್ತೆ ಬರುವುದು ಖಚಿತ ಎಂಬುದನ್ನು ಬಿಜೆಪಿಯ ಪ್ರಸಕ್ತ ಮಿತ್ರರು ಅರಿಯಬೇಕಾಗಿದೆ. ಈ ಪಕ್ಷಗಳ ಮುಂದಿರುವುದು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರದ ಉಳಿವು ಮಾತ್ರವೇ ಅಲ್ಲ, ತಂತಮ್ಮ ರಾಜ್ಯಗಳ ಜನಗಳ ಮುಂದೆ ತಮ್ಮ ವಿಶ್ವಾಸಾರ್ಹತೆಯೂ ಈಗ ಪಣದಲ್ಲಿದೆ. ಅದು ಈಗಾಗಲೇ ಸಾಕಷ್ಟು ಸವೆತ ಕಂಡಿದೆ. ಈ ಪ್ರಶ್ನೆಯ ಮೇಲೆ ಬೆಂಬಲ ನೀಡಿ ಜನಬೆಂಬಲದ ಇಂತಹ ಹ್ರಾಸವನ್ನು ಮತ್ತೆ ತುಂಬಿಕೊಳ್ಳುವುದು ಎಂದೂ ಸಾಧ್ಯವಾಗದೇ ಹೋಗಬಹುದು" ಎಂದು ಸಿಪಿಐ(ಎಂ) ಎಚ್ಚರಿಸಿದೆ. ○

ಕೋಮುವಾದದ ವಿರುದ್ಧ ಜನತಾ ಸಮಾವೇಶದ ನಿರ್ಧಾರ

ಪುಟ 4 ರಿಂದ

ನೆನಪಿಸಿದರು. ಏಕೆಂದರೆ ರಾಷ್ಟ್ರೀಯ ಮಾನವ ಹಕ್ಕು ಆಯೋಗ ಮತ್ತು ರಾಷ್ಟ್ರೀಯ ಅಲ್ಪ ಸಂಖ್ಯಾತ ಆಯೋಗ ಬಿಜೆಪಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ವಿರುದ್ಧ ಹಲವು ಕಟುಟೀಕೆಗಳನ್ನು ಮಾಡಬೇಕಾಗಿ ಬಂತು. ಜನ ಈ ಸರಕಾರವನ್ನು ಸೋಲಿಸುವ ಒಂದು ಅವಕಾಶ ಸಿಕ್ಕಿದ್ದರೆ ಅದನ್ನು ಮುಂದು ವರೆಯಲು ಬಿಡರು ಎಂದು ಅವರು ಹೇಳಿದರು. ಈ ಸಮಾವೇಶ ಒಂದು ಆರಂಭ, ನಮ್ಮ ತಾಯ್ನಾಡಿನ ರಕ್ಷಣೆಗೆ, ಅದನ್ನು ಇಂದು ಉಳಿಸಿ ನಾಳೆ ಉತ್ತಮ ಭವಿಷ್ಯಕ್ಕಾಗಿ ಬದಲಿಸುವಂತೆ ಮಾಡಲು ಒಟ್ಟಾಗಿ ಎದ್ದು ನಿಲ್ಲುವುದು ನಮ್ಮ ಗುರಿಯಾಗಬೇಕು ಎಂದರು.

ನಂತರ ಎ.ಬಿ.ಬರ್ಧನ್ ಸಮಾವೇಶದ ಠರಾವನ್ನು ಓದಿ ಹೇಳುತ್ತಾ ಭಾರತೀಯರಿಗೆ ಧರ್ಮನಿರಪೇಕ್ಷತೆ ಜೀವನದ ದಿಕ್ಕು ಎಂದರು. ನಂತರ ಐ.ಕೆ.ಗುಜ್ರಾಲ್, ಮುರಸೋಳಿ ಮಾರನ್, ಪ್ರಸಿದ್ಧ ಅರ್ಥಿಕತಜ್ಞ ಪ್ರೊ. ಅರುಣ್ ಘೋಷ್, ಸೈಫುದ್ದೀನ್ ಸೋಜ್, ಜಿ.ಕೆ.ಮೂಪನಾರ್, ವಿರೇಂದ್ರ ಕಮಾರ್ ವೈಶ್ಯ, ಡಿ.ಡಿ.ಶಾಸ್ತ್ರಿ ಪ್ರಖ್ಯಾತ ಲೇಖಕ ಭೀಷ್ಮ ಸಹಾನಿ, ಚಿತ್ರನಟ ರಾಜ್ ಬಬ್ಬರ್, ಪಂಕಜಾಕ್ಷನ್, ಮುಲಾಯಂ ಸಿಂಗ್ ಯಾದವ್, ಫ್ರಂಟ್ ಲೈನ್ ಸಂಪಾದಕ ಎನ್.ರಾಮ್, ಪ್ರಸಿದ್ಧ ಗಾಂಧೀವಾದಿ ನಿರ್ಮಲಾ ದೇಶಪಾಂಡೆ, ಲಾಲೂ ಪ್ರಸಾದ್ ಯಾದವ್, ಮಾಜಿ ಪ್ರಧಾನಿ ದೇವೇಗೌಡರು, ಚಲನಚಿತ್ರ ನಿರ್ದೇಶಕ ಮುಝಫರ್ ಅಲಿ, ಉರ್ದು ಪತ್ರಕರ್ತ ಅಜೀದ್ ಬರ್ನೆ, ಅಂಬ್ರೋಸ್ ಪಿಂಟೋ, ಗುಜರಾತಿನ ಅಲ್ಕಾ ಭಟ್ ಮಾತನಾಡಿದರು.

ಅಲ್ಲದೆ ಲಂಡನ್ನಿನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಅಲ್ಲಿಂದಲೇ ಫ್ಯಾಕ್ಸ್ ಸಂದೇಶ ಕಳಿಸಿದರು. ವಿಭಿನ್ನ ಕಾರಣಗಳಿಂದಾಗಿ ಭಾಗವಹಿಸಲಾಗದ ಹಲವು ಮುಖಂಡರೂ ಸಂದೇಶಗಳನ್ನು ಕಳಿಸಿದರು. ಮಾಜಿ ಪ್ರಧಾನಿ ಚಂದ್ರಶೇಖರ್, ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ, ಅಸ್ಸಾಂ ಮುಖ್ಯಮಂತ್ರಿ ಪಿ.ಕೆ.ಮಹಂತ, ನ್ಯಾಯಮೂರ್ತಿ ಕೃಷ್ಣ ಅಯ್ಯರ್, ಲೇಖಕ ಅಲಿ ಸರ್ದಾರ್ ಜಾಫ್ರಿ, ಶಬಾನಾ ಆಜ್ಮಿ, ಎ.ಕೆ.ಹಾನಗಲ್, ಅಡ್ಮಿರಲ್ ಎಲ್.ರಾಮದಾಸ್ ಮತ್ತು ಆನಂದ್ ಪಟವರ್ಧನ್ ಸಂದೇಶ ಕಳಿಸಿದರು.

ರಾಷ್ಟ್ರಪತಿ ಭವನದಿಂದ ಹಿಂದಿರುಗಿದ ನಂತರ ಐ.ಎನ್.ಎನ್. ಸುದ್ದಿಸಂಸ್ಥೆ ಯೊಂದಿಗೆ ಮಾತನಾಡುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ರಾಷ್ಟ್ರಪತಿಗಳು ಈ ಸಮಾವೇಶ ನಡೆಸುವ ಪ್ರಯತ್ನವನ್ನು ಶ್ಲಾಘಿಸುತ್ತಾ ಹೆಚ್ಚುತ್ತಿರುವ ಕೋಮುವಾದಿ ಹಿಂಸಾಚಾರದ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದರು ಎಂದರು.

ಬಗರ್ ಹುಕಂ ಸಾಗುವಳಿ ಸಕ್ರಮಕ್ಕೆ ಅರ್ಜಿ ಅವಧಿ ವಿಸ್ತರಣೆ

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ 1997 ಕ್ಕೆ 1998 ಜೂನ್ 5 ರಂದು ರಾಜ್ಯಪಾಲರ ಒಪ್ಪಿಗೆ ದೊರಕಿತ್ತು. ಇದನ್ನು ಕರ್ನಾಟಕ ಅಧಿನಿಯಮ 1998, ನಂ. 22 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಈ ಅಧಿನಿಯಮದಿಂದಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 94 ಬಿ ತಿದ್ದುಪಡಿಯಾಗುತ್ತದೆ.

ಈ ತಿದ್ದುಪಡಿಗೆ ಅನುಗುಣವಾಗಿ 1990 ಎಪ್ರಿಲ್ 14 ರ ಮೊದಲು ಒಬ್ಬ ವ್ಯಕ್ತಿಯು ಯಾವುದಾದರು ಭೂಮಿಯನ್ನು ಬಗರ್‌ಹುಕುಂ ಸ್ವಾಧೀನ ಹೊಂದಿದ್ದರೆ, ಅಥವ ಕಲಂ 79 ರ ಉಪಕಲಂ (2) ರಲ್ಲಿ ಉಲ್ಲೇಖಿಸಿರುವ ಭೂಮಿಯನ್ನು ಹೊಂದಿದ್ದು ಒಕ್ಕಲೆಬ್ಬಿಸಲ್ಪಡಲು ಅರ್ಹನಾಗಿದ್ದರೆ, ಅಂತಹ ವ್ಯಕ್ತಿಯ ಕಲಂ 94 ಎ ಪ್ರಕಾರ ಭೂ ಮಂಜೂರಾತಿ ಪಡೆಯಲು ಅರ್ಹನಿದ್ದು ಉಪಕಲಂ (4) ರ ಪ್ರಕಾರ ನಿಗಧಿತ ಅವಧಿಯೊಳ ಗಾಗಿ ಅರ್ಜಿ ಸಲ್ಲಿಸಲು ವಿಫಲನಾಗಿದ್ದರೆ ಮತ್ತು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ 1997 ಅನುಷ್ಠಾನಕ್ಕೆ ಬಂದ ದಿನದಂದು ಸದರೀ ಭೂಮಿ ಯನ್ನು ಪ್ರತ್ಯಕ್ಷವಾಗಿ ತನ್ನ ಸ್ವಾಧೀನದಲ್ಲಿ ಹೊಂದಿದ್ದರೆ ಜಿಲ್ಲಾಧಿಕಾರಿಗಳು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ 1997 ಜಾರಿಗೆ ಬಂದ ದಿನದಿಂದ ಒಂದು ವರ್ಷದ ಒಳಗಾಗಿ ಆತನಿಗೆ ಸದರಿ ಭೂಮಿಯನ್ನು ಮಂಜೂರು ಮಾಡುವಂತೆ ಭೂಮಂಜೂರಾತಿ ಸಮಿತಿಗೆ ಶಿಫಾರಸು ಮಾಡಬಹುದು.

ಅರಣ್ಯ ಸಂರಕ್ಷಣಾ ಕಾಯ್ದೆ 1980 (ಕೇಂದ್ರ ಕಾನೂನು) ರ ಕಲಂ 2 ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಅವಶ್ಯವಿದ್ದರೆ ಅದನ್ನು ಪಡೆಯದೆ ಭೂ ಮಂಜೂರಾತಿ ಮಾಡಬಾರದು.

ರಾಜ್ಯ ಸರ್ಕಾರವು 13-10-98 ರಂದು ಹೊರಡಿಸಿದ ಅಧಿಸೂಚನೆ ನಂ. ಆರ್.ಡಿ. 38 ಎಲ್.ಜಿ.ಪಿ. 98-1 ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ 1997 ನವೆಂಬರ್ 1, 1998 ರಂದು ಜಾರಿಗೆ ಬಂದಿದೆ ಎಂದು ಘೋಷಿಸಿದೆ. 6-11-98 ರಂದು ಹೊರಡಿಸಲಾದ ಇನ್ನೊಂದು ಅಧಿಸೂಚನೆಯ ಮೂಲಕ 1966 ರ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿತು.

ಈ ತಿದ್ದುಪಡಿಯ ಪ್ರಕಾರ ತಾಲ್ಲೂಕಿನ ತಹಶಿಲ್ದಾರರು ನಮೂನೆ ಸಂಖ್ಯೆ 53 ರಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಅನಧಿಕೃತ ಅಧಿಭೋಗರ ರನ್ನು ಗುರುತಿಸಬೇಕು. ಅನಂತರ 94 -ಬಿ ಪ್ರಕಾರ ಭೂ ಮಂಜೂರಾತಿಗೆ ಅರ್ಹರಾದವರ ಪಟ್ಟಿಯನ್ನು ನಮೂನೆ ಸಂಖ್ಯೆ 55 ರಲ್ಲಿ ಸಿದ್ಧಪಡಿಸಿ ಮೂರು ತಿಂಗಳ ಒಳಗಾಗಿ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಜಿಲ್ಲಾಧಿಕಾರಿಗೆ ಕಳುಹಿಸತಕ್ಕದ್ದು. ಜಿಲ್ಲಾಧಿಕಾರಿಗಳು ಸ್ಥಳ ತಪಾಸಣೆ, ಧಾಖಲೆ ಆಧಾರಿತ ಮತ್ತು ಸಾಂದರ್ಭಿಕ ಸಾಕ್ಷಿಗಳನ್ನು ಪರಿಶೀಲಿಸಿ ಅರ್ಹತೆ ಇದೆಯೇ ಇಲ್ಲವೆ ಎಂಬು ದನ್ನು ನಿರ್ಧರಿಸಿ ಮೂರು ತಿಂಗಳ ಒಳಗಾಗಿ ಭೂ ಮಂಜೂರಾತಿ ಸಮಿತಿಗೆ ತನ್ನ ಶಿಫಾರಸ್ಸನ್ನು ಮಾಡತಕ್ಕದ್ದು. ರಾಜ್ಯ ಸರ್ಕಾರ ಭೂ ಕಂದಾಯ ಕಾಯ್ದೆಗೆ ಮಾಡಿರುವ ತಿದ್ದುಪಡಿ ಅಡಿಯಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ನಮೂನೆ 53 ರಲ್ಲಿ ಅರ್ಜಿ ಸಲ್ಲಿಸುವ ಕುರಿತು ಸಾರ್ವಜನಿಕರಿಗೆ ಸಾಕಷ್ಟು ತಿಳುವಳಿಕೆ ಸಿಗದ ಕಾರಣ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿದು ಬಂದಿದೆ. ಎಪ್ರಿಲ್ 30, 1999 ಅರ್ಜಿ ಸ್ವೀಕರಿಸಲು ಕೊನೆಯ ದಿನ ಎಂದು ಪ್ರಕಟವಾಗಿರುವುದ ರಿಂದ ಸಂಬಂಧಪಟ್ಟವರು ಇದನ್ನು ಗಮನಿಸಬೇಕೆಂದು ಕೋರಲಾಗಿದೆ.

ವಾರದ ವ್ಯಂಗ್ಯಚಿತ್ರ

'ದಿ ಹಿಂದು' ನಲ್ಲಿ ಕೇಶವ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ